ಸಂಪುಟ: 21, ಸಂಚಿಕೆ: 214, ಪುಟಗಳು: 8, ಸೋಮವಾರ, 13 ಮೇ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

## ಸುಭಾಷಿತ

ಮಾನವ ದೇಹದಲ್ಲಿರುವ ಆತ್ಮವೊಂದೇ ಪೂಜೆಗೆ ಅರ್ಹವಾದ ದೇವರು.

• ಸ್ವಾಮಿ ವಿವೇಕಾನಂದ

## ಪಂಚಾಂಗ

(ಸೋಮವಾರ 13, ಮೇ-2024)

- ಸಂವತ್ಸರ: ಶ್ರೀ ಕ್ರೋಧಿ ನಾಮ ಸಂವತ್ಸರ
- ಋತು: ವಸಂತ
- ಅಯನ: ಉತ್ತರಾಯಣ
- ಮಾಸ: ವೈಶಾಖ
- ಪಕ್ಷ: ಶುಕ್ಲ • ತಿಥಿ: ಷಷ್ಠಿ
- ನಕ್ಷತ್ರ: ಪುನರ್ವಸು
- ರಾಹುಕಾಲ: 7.35 ರಿಂದ 9.10
- ಗುಳಿಕಕಾಲ: 1:55 ರಿಂದ 03:30
- ಯಮಗಂಡಕಾಲ: 10:45 ರಿಂದ 12:20

# ಬಂದೂಕು ಸದ್ದು, ಕೊಲೆ ಆರೋಪಿಗೆ ಗುಂಡೇಟು

**ಶಿವಮೊಗ್ಗ:** ಶಿವಮೊಗ್ಗ ತಾಲೂಕಿನ ಬೀರನಕೆರೆ ಗ್ರಾಮದ ಸಮೀಪ ಬೆಳ್ಳಂ ಬೆಳಗ್ಗೆ ಪೊಲೀಸರ ಬಂದೂಕು ಸದ್ದು ಮಾಡಿದೆ. ಕೊಲೆ ಪ್ರಕರಣದ ಆರೋಪಿ ಶೋಯೆಬ್ ಅಲಿಯಾಸ್ ಅಂಡ್ ಕಾಲಿಗೆ ಶಿವಮೊಗ್ಗ ಗ್ರಾಮಾಂತರ ಠಾಣೆ ಪಿಎಸ್ ಐ ರವಿ ಗುಂಡು ಹೊಡೆದು, ಬಂಧಿಸಿದ್ದಾರೆ.

**ಮೂವರು ರೌಡಿಗಳ ಕೊಲೆ:** ಕಳೆದ ಬುಧವಾರ ಮೇ 8 ರಂದು ಶಿವಮೊಗ್ಗ ನಗರದಲ್ಲಿ ಎರಡು ಗ್ಯಾಂಗ್ ಮಧ್ಯೆ ಗಲಾಟೆ ನಡೆದಿತ್ತು. ಗಲಾಟೆಯಲ್ಲಿ ಇಬ್ಬರು ರೌಡಿಗಳನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿಲಾಗಿತ್ತು. ಇನ್ನು ಗಲಾಟೆಯಲ್ಲಿ ಗಾಯಗೊಂಡಿದ್ದ ರೌಡಿ ಯಾಸೀನ್ ಖುರೇಶಿ ಘಟನೆ ನಡೆದ ಮರುದಿನ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟನು. ಈ ತ್ರಿಬಲ್ ಮರ್ಡರ್ ಘಟನೆಯಿಂದ ಶಿವಮೊಗ್ಗ ನಗರವು ಬೆಚ್ಚಿಬಿದ್ದಿದೆ.





ಮೇ 8ಕ್ಕಿಂತ ಮೂರು ದಿನದ ಮುಂಚೆ ಕೊಲೆಯಾದ ರೌಡಿಶೀಟರ್ ಯಾಸೀನ್ ಖುರೇಶಿಯು ಗೋಪಾಳಗೌಡ ಬಡಾವಣೆಯಲ್ಲಿನ ಮನೆಯೊಂದಕ್ಕೆ ನುಗ್ಗಿ ಯುವಕರ ಮೇಲೆ ಹಲ್ಲೆ ಮಾಡಿದ್ದನು. ಅಂದೇ ಇದಕ್ಕೆ ಪ್ರತಿಕಾರ ತೀರಿಸಿಕೊಳ್ಳಲು ಮತ್ತೊಂದು ಗ್ಯಾಂಗ್ ತಯಾರಾಗಿತ್ತು. ಆದರೆ ಚುನಾವಣೆ ಹಿನ್ನೆಲೆಯಲ್ಲಿ ಶಿವಮೊಗ್ಗ ಪೊಲೀಸರು ನಗರದಲ್ಲಿ ಹೈ ಅಲರ್ಟ್ ಆಗಿದ್ದರು.

ಮೇ 07 ರಂದು ಮತದಾನ ಮುಗಿಯುತ್ತಿದ್ದಂತೆ ಪೊಲೀಸ್ ಬಂದೋಬಸ್ತ್ ಕಡಿಮೆ ಆಗಿತ್ತು. ಇದೇ ಅವಕಾಶವನ್ನು ಕಾಯುತ್ತಿದ್ದ ರೌಡಿಗಳಾದ ಗೌಸ್ ಮತ್ತು ಶೋಯಬ್ ಗ್ಯಾಂಗ್ ಮತ್ತು ಇವರ ಸಹಚರರು ಮೇ 08 ರಂದು ಕೈಯಲ್ಲಿ ಮಾರಕಾಸ್ತ್ರ ಹಿಡಿದುಕೊಂಡು ಸಂಜೆ 5 ಗಂಟೆ ಆಸುಪಾಸಿನಲ್ಲಿ ಬೈಕ್ ಮೇಲೆ ನಗರದ ಪುಟ 2

## ಸಂಕ್ಷಿಪ್ತ ಸುದ್ದಿ

### ಜೈಪುರದ ನಾಲ್ಕು ಶಾಲೆಗಳಿಗೆ ಬಾಂಬ್ ಬೆದರಿಕೆ



**ಜೈಪುರ:** ಜೈಪುರದ ನಾಲ್ಕು ಶಾಲೆಗಳಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದೆ ಎನ್ನುವ ಮಾಹಿತಿ ಲಭ್ಯವಾಗಿದೆ. ಎರಡು ಆಸ್ಪತ್ರೆಗಳು ಮತ್ತು ದೆಹಲಿ ಐಜಿಐ ವಿಮಾನ ನಿಲ್ದಾಣಕ್ಕೆ ಭಾನುವಾರ ಬಾಂಬ್ ಬೆದರಿಕೆ ಇಮೇಲ್ ಬಂದ ನಂತರ, ಜೈಪುರದ ನಾಲ್ಕು ಶಾಲೆಗಳಿಗೆ ಸೋಮವಾರ ಇಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿದೆ. ಪುಟ 2

### ವಿದ್ಯಾರ್ಥಿಗಳ ಮೇಲೆ ಮೌಲ್ವಿಯಿಂದ ಲೈಂಗಿಕ ದೌರ್ಜನ್ಯ, ಮಕ್ಕಳೆಲ್ಲಾ ಸೇರಿ ಕೊಂದೇ ಬಿಟ್ರು

**ರಾಜಸ್ಥಾನ :** ರಾಜಸ್ಥಾನದ ಅಜ್ಮೀರದ ಮೊಹಮ್ಮದಿ ಮದೀನಾ ಮಸೀದಿ ಮೌಲ್ವಿ ಮೊಹಮ್ಮದ್ ತಾಹಿರ್ ನನ್ನು ವಿದ್ಯಾರ್ಥಿಗಳು ಹತ್ಯೆಮಾಡಿರುವ ಘಟನೆ ನಡೆದಿದೆ. ಮೌಲ್ವಿ ಕಳೆದ 4 ವರ್ಷಗಳಿಂದ ತಮ್ಮ ಮೇಲೆ ನಿರಂತರ ಅತ್ಯಾಚಾರವೆಸಗುತ್ತಿದ್ದರು ಹೀಗಾಗಿ ನಾವೇ ಅವರನ್ನು ಕೊಲೆ ಮಾಡಿದ್ದೇವೆ ಎಂದು ವಿದ್ಯಾರ್ಥಿಗಳು ಒಪ್ಪಿಕೊಂಡಿದ್ದಾರೆ. ರಾಜಸ್ಥಾನದ ಅಜ್ಮೀರ್‌ನಲ್ಲಿ ಮೌಲಾನಾ ಹತ್ಯೆ ಆರೋಪದ ಮೇಲೆ ಆರು ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿದೆ. ಪುಟ 2

### ದೂದ್ ಗಂಗಾ ನದಿಯಲ್ಲಿ ಹೆಚ್ಚಿದ ಮೊಸಳೆ ಕಾಟ ರೈತ ಬಲಿ

**ಬೆಳಗಾವಿ:** ವೃದ್ಧ ರೈತರೊಬ್ಬರು ಮೊಸಳೆ ದಾಳಿಗೆ ಬಲಿಯಾದ ದಾರುಣ ಘಟನೆ ಚಿಕ್ಕೋಡಿ ತಾಲೂಕಿನ ದತ್ತವಾಡ-ಸದಲಗಾ ಬಳಿಯ ದೂದ್ ಗಂಗಾ ನದಿ ದಡದಲ್ಲಿ ಸಂಭವಿಸಿದೆ. ಪುಟ 2

## ಕೇಸ್ ದಾಖಲಾದರೂ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸದ ಎಸ್ಐಟಿ

# ಅನುಮಾನ ಹುಟ್ಟಿಸಿದ ನಡೆ

**ಹಾಸನ:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ಆದರೆ, ಪ್ರಕರಣ ಸಂಬಂಧ ಯಾರೆಲ್ಲ ಬಂಧನಕ್ಕೊಳಗಾಗಿದ್ದಾರೆಯೋ ಯಾರ ವಿರುದ್ಧ ಎಲ್ಲ ದೂರು ದಾಖಲಾಗಿದೆಯೋ ಆ ವಿವರಗಳನ್ನು ನೋಡಿದರೆ ಎಸ್ ಐಟಿ ಮೇಲೆ ಸಾಕಷ್ಟು ಅನುಮಾನಗಳು ಮೂಡುವಂತಾಗಿದೆ. ಜೆಡಿಎಸ್, ಬಿಜೆಪಿಯ ಆರೋಪಿಗಳ ಮೇಲೆ ಮಾತ್ರ ಸರ್ಕಾರ ಹಾಗೂ ಎಸ್ ಐಟಿ ಕ್ರಮ ಕೈಗೊಳ್ಳುತ್ತಿವೆಯಾ ಎಂಬ ಪ್ರಶ್ನೆ ಮೂಡಿದೆ. ಯಾಕೆಂದರೆ, ಪ್ರಕರಣದಲ್ಲಿ ವಿಡಿಯೋ ಬಹಿರಂಗಪಡಿಸಿದ ಆರೋಪದಲ್ಲಿ ಕೇಸ್ ದಾಖಲಾಗಿದ್ದರೂ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಕ್ರಮ ಕೈಗೊಂಡಿಲ್ಲ.

ಪ್ರಕರಣದ ಪ್ರಮುಖ ರೂವಾರಿಗಳೆನ್ನಲಾದ ಕಾರ್ತಿಕ್ ಗೌಡ ಹಾಗೂ ನವೀನ್‌ಗೌಡ ಮೇಲೆ ಈ ವರೆಗೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಪೆನ್ ಡ್ರೈವ್ ರೂವಾರಿಯೇ ಕಾರ್ತಿಕ್‌ಗೌಡ ಎಂಬ ಆರೋಪ ಇದ್ದರೂ, ಎಫ್ಐಆರ್ ದಾಖಲಾಗಿ 20 ದಿನವಾದರೂ ಬಂಧಿಸದೇ ಇರುವುದು ಅನುಮಾನ ಹೆಚ್ಚಿಸಿದೆ. ಸರ್ಕಾರ ನಡೆಯ ಮೇಲೆ ಸಾರ್ವಜನಿಕರಿಗೆ ಅನುಮಾನ ಮೂಡುವಂತಾಗಿದೆ.

ಪ್ರಕರಣದ ಪ್ರಮುಖ ಆರೋಪಿಯಾಗಿರುವ ಸಂಸದ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹಾರಿದ್ದಾರೆ. ಶಾಸಕ ಹೆಚ್ ಡಿ ರೇವಣ್ಣ ಜೈಲು ಪಾಲಾಗಿದ್ದಾರೆ. ಪ್ರಕರಣದಲ್ಲಿ ಬಿಜೆಪಿ ಮುಖಂಡ ದೇವರಾಜೇಗೌಡ ಅವರನನ್ನೂ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣದಡಿ ಬಂಧಿಸಲಾಗಿದೆ. ವಿಡಿಯೋ ಹಂಚಿಕೆ ಮಾಡಿದ್ದಾರೆಂಬ ಆರೋಪದಡಿ ಬಿಜೆಪಿಯ ಚೇತನ್, ಲಿಖಿತ್ ಅವರನ್ನೂ ಎಸ್ ಐಟಿ ಬಂಧಿಸಿದೆ. ಇಷ್ಟೆಲ್ಲಾ ಆದರೂ ಕಾರ್ತಿಕ್, ನವೀನ್ ಗೌಡ, ಪುಟ್ಟರಾಜ್ ಅಲಿಯಾಸ್ ಪುಟ್ಟಿ, ಚೇತನ್ ಬಂಧನ ಆಗದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಪುಟ 2

## ಪ್ರಕರಣ ಬೆಳಕಿಗೆ ಬರುವ ಮುಂಚೆಯೇ ಪ್ರೀತಂಗೌಡ ಆಪ್ತನ ವಿರುದ್ಧ ದೂರು ನೀಡಿದ್ದ ಜೆಡಿಎಸ್

**ಹಾಸನ:** ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ ಅಶ್ಲೀಲ ವೀಡಿಯೋಗಳ ಪೆನ್ ಡ್ರೈವ್ ಪ್ರಕರಣ ದಿನದಿಂದ ದಿನಕ್ಕೆ ರೋಚಕತೆ ಪಡೆದುಕೊಳ್ಳುತ್ತಿದೆ. ಈ ಪ್ರಕರಣದಲ್ಲಿ ಬಿಜೆಪಿಯ ಪ್ರಭಾವಿ ನಾಯಕನ ಆಪ್ತರೇ ಬಂಧನವಾಗಿದ್ದು, ಕಮಲ ನಾಯಕರಿಗೆ ಆಘಾತವಾಗಿದೆ. ಇದೀಗ ಮತ್ತೊಂದು ವಿಚಾರ ಬಹಿರಂಗಗೊಂಡಿದ್ದು, ಬಿಜೆಪಿಗರು ಇನ್ನಷ್ಟು ನಿದ್ದೆಗೆಡುವಂತೆ ಮಾಡಿದೆ. ಅದು ಪ್ರಕರಣ ಬೆಳಕಿಗೆ ಬರುವ ಮುನ್ನವೇ ಅಂದರೆ ಏಪ್ರಿಲ್ 21 ರಂದು ಪ್ರೀತಂಗೌಡ ಆಪ್ತ ಶರತ್ ಆಲಿಯಾಸ್ ಕ್ವಾಲಿಟಿ ಬಾರ್ ಶರತ್ ವಿರುದ್ಧ ಜೆಡಿಎಸ್ ನಾಯಕರು ದೂರು ನೀಡಿದ್ದರು.



ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ ಅಶ್ಲೀಲ್ ವಿಡಿಯೋಗಳು ಹಾಸನ ಜಿಲ್ಲೆಯಲ್ಲಿ ಹರಿದಾಡುತ್ತಿದ್ದಂತೆ ಕಳೆದ ತಿಂಗಳು ಏಪ್ರಿಲ್ 23 ರಂದು ಹಾಸನ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಪ್ರಕರಣ ಬೆಳಕಿಗೆ ಬಂತು. ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಯಿತು.

ತದನಂತರ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ದಳ ರಚಿಸಿತು. ಬಳಿಕ ಪ್ರಕರಣ ಎಸ್ ಐಟಿಗೆ ವರ್ಗಾವಣೆಯಾಯಿತು. ನಂತರ ಎಸ್ ಐಟಿ ಹಲವು ತಂಡಗಳನ್ನು ರಚಿಸಿಕೊಂಡು ಎಲ್ಲ ಆಯಾಮಗಳಲ್ಲೂ ತನಿಖೆ ಕೈಗೆತ್ತಿಕೊಂಡ ಬಳಿಕ ಆರಂಭಿಕವಾಗಿಯೇ ಪ್ರೀತಂಗೌಡರ ಕೆಲ ಆಪ್ತರನ್ನು ಬಂಧಿಸಿತು. ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ ಎಸ್ ಐಟಿ ರವಿವಾರ (ಮೇ 12) ರಂದು ಪ್ರೀತಂಗೌಡ ಅವರ ಮತ್ತಿಬ್ಬರು ಆಪ್ತರನ್ನು ಬಂಧಿಸಿದೆ.

**ಎ ಮಂಜು ಕೈ ಸೇರಿದ್ದ ಪೆನ್ ಡ್ರೈವ್:** ಪೈನ್ ಡ್ರೈವ್ ಹಂಚಿಕೆ ಆರೋಪ ಹೊತ್ತಿರುವ ನವೀನ್ ಗೌಡ ಎಂಬವರು ರವಿವಾರ ಫೇಸ್ ಬುಕ್ ನಲ್ಲಿ ಹಾಕಿದ್ದ ಒಂದು ಪೋಸ್ಟ್ ಶಾಸಕ ಎ ಮಂಜು ಕೊರಳಿಗೆ ಉರುಳು ತಂದಿದೆ. ಹೌದು ನವೀನ್ ಗೌಡ ನಿನ್ನೆ (ಮೇ 12) ರಂದು ತನ್ನ ಫೇಸ್ ಬುಕ್ ಖಾತೆಯಲ್ಲಿ ''ಏಪ್ರಿಲ್ 20 ರಂದು ನನಗೆ ರಸ್ತೆಯಲ್ಲಿ ಸಿಕ್ಕಿದ್ದ ಪೆನ್ ಡ್ರೈವ್ ಅನ್ನು ಅರಕಲಗೂಡು ಶಾಸಕರಾದ ಎ ಮಂಜು ಅವರಿಗೆ ಏಪ್ರಿಲ್ 21 ರಂದು ಅರಕೂಲಗೂಡಿನ ಮಾರುತಿ ಕಲ್ಯಾಣ ಮಂಟಪದಲ್ಲಿ ನೀಡಿದ್ದೆ. ಪುಟ 2

# ಮತ್ತೆ ಬಂತು ಕೊರೊನಾ!

## ಮಹಾರಾಷ್ಟ್ರದಲ್ಲಿ 19 ಪ್ರಕರಣಗಳು ಪತ್ತೆ



**ನವದೆಹಲಿ:** ಭಾರತದಲ್ಲಿ ಮತ್ತೆ ಕೊರೊನಾ ಆತಂಕ ಶುರುವಾಗಿದೆ, ಮಹಾರಾಷ್ಟ್ರದಲ್ಲಿ 19 ಪ್ರಕರಣಗಳು ಪತ್ತೆಯಾಗಿವೆ. ಓಮಿಕ್ರಾನ್‌ನ ಮತ್ತೊಂದು ತಳಿ ಇದಾಗಿದ್ದು ಅಮೆರಿಕದಲ್ಲಿ ಇದು ಅತಿ ವೇಗವಾಗಿ ಹರಡುತ್ತಿದೆ ಎನ್ನುವ ಮಾಹಿತಿ ಲಭ್ಯವಾಗಿದೆ. 2024ರ ಜನವರಿಯಲ್ಲಿ ಈ ಹೊಸ ವೇರಿಯೆಂಟ್ ಅಮೆರಿಕದಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಇದೀಗ ಹೊಸ ವೈರಸ್ ಮಹಾರಾಷ್ಟ್ರದಲ್ಲಿ ಆತಂಕ ಸೃಷ್ಟಿಸಿದೆ. ಪುಟ 2

# ಕಬ್ಬನ್ ಪಾರ್ಕ್‌ನಲ್ಲಿ ಸಿದ್ಧವಾಗುತ್ತಿದೆ 2 ಅಂತಸ್ತಿನ ಅತಿ ದೊಡ್ಡ ಅಕ್ವೇರಿಯಂ

**ಬೆಂಗಳೂರು:** ಬೆಂಗಳೂರಿಗರಿಗೆ ಕಬ್ಬನ್ ಪಾರ್ಕ್‌ಒಂದೊಳ್ಳೆ ಜಾಗ. ಒಂದು ಕಡೆ ಪಾರ್ಕ್ ನಲ್ಲಿ ಕುಳಿತು ರಿಲ್ಯಾಕ್ಸ್ ಆಗ್ತಾಯಿದ್ರೆ. ಮತ್ತೊಂದು ಕಡೆ ಪೋಷಕರ ಜೊತೆ ಪುಟಾಣಿಗಳ ಆಟೋಟ. ಇದೆಲ್ಲ ನೋಡಿದ್ರೆ ನಮ್ಮ ಬೆಂಗಳೂರು ಎಷ್ಟು ಚಂದ ಅನಿಸುತ್ತೆ. ಈಗ ಕಬ್ಬನ್ ಪಾರ್ಕ್ ಗೆ ಮತ್ತಷ್ಟು ಪುಷ್ಟಿ ನೀಡೋಕೆ ಅಂತ 2 ಅಂತಸ್ತಿನಲ್ಲಿ ಅತಿ ದೊಡ್ಡ ಅಕ್ವೇರಿಯಂ ರೆಡಿಯಾಗಿದೆ.

ಕಸ್ತೂರಬಾ ರಸ್ತೆಯ ಕಬ್ಬನ್ ಪಾರ್ಕ್ ಆವರಣದಲ್ಲಿ ಹೊಸ ರೂಪದೊಂದಿಗೆ ಮತ್ಸ್ಯಾಲಯ ಕಂಗೊಳಿಸಲಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಮ್ಮ ಬೆಂಗಳೂರು ಅಕ್ವೇರಿಯಂ ಎಂಬ ಖಾಸಗಿ ಸಂಸ್ಥೆ ಹಳೆಯ ಮತ್ಸ್ಯಾಲಯಕ್ಕೆ ಆಧುನಿಕ ಸ್ಪರ್ಶ ನೀಡಿದೆ. ಶೇ 95ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ತಿಂಗಳಾಂತ್ಯದಲ್ಲಿ ಉದ್ಘಾಟನೆಗೊಳ್ಳಲಿದೆ. ನಂತರ ಸಾರ್ವಜನಿಕರು ಈ ಮತ್ಸ್ಯ ಲೋಕವನ್ನು ಕಣ್ತುಂಬಿಕೊಳ್ಳಬಹುದು.

1983ರಲ್ಲಿ ಈ ಮತ್ಸ್ಯಾಲಯವನ್ನು 17,500 ಚದರಡಿಯಲ್ಲಿ ನಿರ್ಮಿಸಲಾಗಿತ್ತು. ಸದ್ಯ ಇದನ್ನು ಪಿಪಿಪಿ ಯೋಜನೆಯ ಅಡಿಯಲ್ಲಿ ಸುಮಾರು 15 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ.




ಎರಡು ಅಂತಸ್ತಿನ ಮತ್ಸ್ಯಾಲಯದ ಹಳೆಯ ಕಟ್ಟಡದ ವಿನ್ಯಾಸವನ್ನು ಹಾಗೆಯೇ ಉಳಿಸಿಕೊಂಡು ಅಭಿವೃದ್ಧಿ ಮಾಡಲಾಗಿದೆ. ಕಲರ್ ಕಲರ್ ಲೈಟಿಂಗ್ಸ್ ನೊಂದಿಗೆ ವಿಭಿನ್ನವಾಗಿ ಡಿಸೈನ್ ಮಾಡಲಾಗ್ತಿದೆ. ಇನ್ನು ಇಲ್ಲಿಗೆ ಎಂಟ್ರಿ ಟಿಕೆಟ್ ನ್ನು ಒಂದು ಗಂಟೆಗೆ 300 ರೂಪಾಯಿ ನಿಗದಿ ಪಡಿಸಲಾಗಿದೆ. ಪುಟ 2

# ವಿಶ್ವ ದಾಖಲೆ ಬರೆದ ಬೆಂಗಳೂರಿನ ನಾಲ್ಕು ತಿಂಗಳ ಪುಟ್ಟ ಕಂದ

**ಬೆಂಗಳೂರು:** ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎನ್ನುವ ಹಾಗೆ ಬೆಂಗಳೂರಲ್ಲಿ ಹುಟ್ಟಿದ ನಾಲ್ಕೇ ತಿಂಗಳಿಗೆ ಪುಟ್ಟ ಕಂದಮ್ಮ ವಿಶ್ವ ದಾಖಲೆ ಬರೆದು, ಎಲ್ಲರ ಹುಬ್ಬೇರಿಸುವಂತೆ ಮಾಡಿದ್ದಾಳೆ. ಬೆಂಗಳೂರಿನ ಸ್ನೇಹ ಹಾಗೂ ಪ್ರಜ್ವಲ್ ಪುತ್ರಿ ಇಶಾನ್ವಿ.ಪಿ. ಈ ಪುಟ್ಟ ಕಂದಮ್ಮ ಎರಡು ತಿಂಗಳಿದ್ದಾಗಲೇ ಪೋಷಕರು ಎರಡು ಫ್ಲಾಶ್ ಕಾರ್ಡ್ ಇಟ್ಟು ಒಂದನ್ನು ಗುರುತಿಸುವಂತೆ ಹೇಳಿದರೆ, ಅದಕ್ಕೆ ಸರಿಯಾದ ಕಾರ್ಡ್ ಸೆಲೆಕ್ಟ್ ಮಾಡುತ್ತಿರುವುದನ್ನು ತಾಯಿ ಸ್ನೇಹ ಗುರ್ತಿಸಿದ್ರು. ಈಗ ನಾಲ್ಕು ತಿಂಗಳಲ್ಲಿ ಈ ವಂಡರ್ ಕಿಡ್ ತನ್ನ ಪ್ರತಿಭೆಯಿಂದ ವರ್ಲ್ಡ್ ರೆಕಾರ್ಡ್ ಮಾಡಿದೆ.





4 ತಿಂಗಳ ಇಶಾನ್ವಿ ಒಂದಲ್ಲ, ಎರಡಲ್ಲ ಸುಮಾರು 125 ವಿವಿಧ ರೀತಿಯ ವಸ್ತುಗಳು, ಪ್ರಾಣಿ-ಪಕ್ಷಿಗಳು, ತರಕಾರಿಗಳನ್ನು ಫೋಟೋಗಳ ಮೂಲಕ ಗುರುತಿಸುವ ಸಾಮರ್ಥ್ಯ ಹೊಂದಿದ್ದಾಳೆ. ಪ್ರಮುಖವಾಗಿ ಇಶಾನ್ವಿ 10 ಹಕ್ಕಿಗಳು, 10 ಸಾಕು ಪ್ರಾಣಿಗಳು, 10 ವಿವಿಧ ದೇಶದ ಧ್ವಜಗಳು, 10 ಹೂವುಗಳು, 10 ವಾಹನಗಳು, 10 ಕಾಡು ಪ್ರಾಣಿಗಳು,

## 500 ಕೋಟಿ ಮೌಲ್ಯದ ಮಾವು ನಷ್ಟ!

# 28 ಸಾವಿರ ರೈತರಿಗೆ ಸಂಕಷ್ಟ

**ರಾಮನಗರ:** ಬೇಸಿಗೆ ಬಂದ್ರೆ ಸಾಕು ಮಾವಿನ ಹಣ್ಣಿನ ಸೀಸನ್ ಶುರು, ಇಡೀ ರಾಜ್ಯಕ್ಕೆ ಮಾವು ಪ್ರವೇಶ ಆಗೋದೆ ರಾಮನಗರ ಜಿಲ್ಲೆಯಿಂದ. ಆದರೆ ಈ ಬಾರಿ ಕಂಡೂಕೇಳರಿಯದ ರೀತಿಯಲ್ಲಿ ಮಾವಿಗೆ ಬರಗಾಲ ಬಂದಿದೆ. ಸುಮಾರು 4 ನೂರು ಕೋಟಿ ಅಧಿಕ ಮೌಲ್ಯ ಲಾಸ್ ಆಗಿದ್ದು 28 ಸಾವಿರ ರೈತ ಕುಟುಂಬಗಳ ಸ್ಥಿತಿ ಶೋಚನೀಯವಾಗಿದೆ ಈ ಕುರಿತ ಕಂಪ್ಲೀಟ್ ರಿಪೋರ್ಟ್ ಇಲ್ಲಿದೆ ಮಾವು.. ಮಾವಿಗೆ ಹಣ್ಣಿನ ರಾಜ ಎಂದು ಕರೆಯುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಮಾವಿನ ಸೀಸನ್ ಶುರುವಾಗೋದೇ ರಾಮನಗರದಿಂದ. ಅತ್ಯಂತ ಉತ್ಕೃಷ್ಟ ಹಾಗೂ ವಿವಿಧ ವೆರೈಟಿ ಮಾವು ತಳಿಗಳನ್ನು ವಿದೇಶಕ್ಕೆ ರಫ್ತು ಮಾಡುವ ರೇಷ್ಮೆ ನಗರಿ ರಾಮನಗರಕ್ಕೆ ಈ ಬಾರಿ ಮಾವು ಬೆಳೆಯ ಇತಿಹಾಸದಲ್ಲೇ ಕಂಡೂಕೇಳರಿಯದ ಬರಗಾಲ ಬಂದಿದೆ.

2 ಲಕ್ಷ 50 ಸಾವಿರ ಮೆಟ್ರಿಕ್ ಟನ್



ಮಾವು ಉತ್ಪಾದನೆ ಆಗುತ್ತಿದ್ದ ಜಿಲ್ಲೆಯಲ್ಲಿ ಈಗ ಕೆಲವೇ ಕೆಲವು ಟನ್ ಗಳ ಮಾವು ಉತ್ಪಾದನೆ ಆಗಬಹುದು ಎಂದು ಲೆಕ್ಕಾಚಾರ ಮಾಡಲಾಗಿದ್ದು ರೈತರು ಬೆಳೆದ ಶೇ 100 ರಷ್ಟು ಬೆಳೆಯಲ್ಲಿ ಕೇವಲ10 ರಿಂದ 15 ಪರ್ಸೆಂಟ್ ಮಾತ್ರ ಇಳುವರಿ ಬರಲಿದೆ ಅಂತ ರಾಮನಗರ ತೋಟಗಾರಿಕಾ ಇಲಾಖೆಯ ವತಿಯಿಂದ ಉಪ ನಿರ್ದೇಶಕ ಎಮ್ ಎಸ್ ರಾಜು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಪುಟ 2

# ಕರ್ನಾಟಕದ ಅರಣ್ಯಗಳಲ್ಲಿನ್ನು ಕ್ಯಾಮರಾ ಕಣ್ಗಾವಲು

**ಬೆಂಗಳೂರು:** ಕರ್ನಾಟಕದ ಪ್ರಮುಖ ಅರಣ್ಯ ಪ್ರದೇಶಗಳಲ್ಲಿ ಕ್ಯಾಮರಾಗಳನ್ನು ಅಳವಡಿಸಲು ಕೇಂದ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಮುಂದಾಗಿದೆ. ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಲ್ಲೇ ಈ ಕ್ರಮಕ್ಕೆ ಕೇಂದ್ರ ಮುಂದಾಗಿದ್ದು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನೆ ಸಂಸ್ಥೆಯ ಸಹಯೋಗವೂ ಇದಕ್ಕಿರಲಿದೆ. ಇಷ್ಟೇ ಅಲ್ಲದೆ ನಾಗರಹೊಳೆ, ದಾಂಡೇಲಿ ಹಾಗೂ ಶಿವಮೊಗ್ಗಗಳ ಅರಣ್ಯ ಪ್ರದೇಶಗಳಲ್ಲಿ ಕೆಲವು ಅಧ್ಯಯನ ಕೇಂದ್ರಗಳನ್ನು ಆರಂಭಿಸಲೂ ಮುಂದಾಗಿದೆ. ಹಾಗಾದರೆ ಇದಕ್ಕೆ ಕಾರಣವೇನು ಹವಾಮಾನ ಬದಲಾವಣೆಯ ಕುರಿತಾದ ಅಧ್ಯಯನಕ್ಕಾಗಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ.

ಹವಾಮಾನ ಬದಲಾವಣೆಯ ಕುರಿತು ಪರಿಣಾಮಕಾರಿ ಅಧ್ಯಯನಕ್ಕಾಗಿ ಮೂರು ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಕರ್ನಾಟಕದ ಅರಣ್ಯಗಳಲ್ಲಿ ಕೇಂದ್ರಗಳನ್ನು ಸಹ ತೆರೆಯಲಾಗುತ್ತದೆ. ಕರ್ನಾಟಕದ ಅರಣ್ಯಗಳಲ್ಲಿ



ಈ ಕ್ರಮ ಕೈಗೊಳ್ಳಲಾಗುತ್ತಿರುವುದು ಇದೇ ಮೊದಲಾಗಿದೆ. ಕರ್ನಾಟಕವು ಯುನೆಸ್ಕೋ ಮಾನ್ಯತೆ ಪಡೆದ ಪಾರಂಪರಿಕ ತಾಣವಾದ ಪಶ್ಚಿಮ ಘಟ್ಟಗಳ ಬಹು ದೊಡ್ಡ ಭಾಗಕ್ಕೆ ನೆಲೆಯಾಗಿದೆ. ಹವಾಮಾನ ಬದಲಾವಣೆ, ಕ್ಷಿಪ್ರ ನಗರೀಕರಣ, ಹಸಿರು ಹೊದಿಕೆಯ ಕುಸಿತ ಮತ್ತು ಭೂ ಬಳಕೆಯಲ್ಲಿನ ಬದಲಾವಣೆಯ ಪ್ರಭಾವದಿಂದ ಪಶ್ಚಿಮ ಘಟ್ಟಗಳು ಸಹ ಹೊರತಾಗಿಲ್ಲ. ಹೀಗಾಗಿ ಕರ್ನಾಟಕದ ಅರಣ್ಯಗಳನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪುಟ 2

## ವಾಹನ ಸವಾರರೇ ಎಚ್ಚರ!

# ಈ ರಸ್ತೆಗಳಲ್ಲಿ ಗುಂಡಿಗಳು!

**ಬೆಂಗಳೂರು:** ಈಗಾಗಲೇ ಕಳೆದ ಒಂದು ವಾರದಿಂದ ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ಜೋರಾಗಿ ಗಾಳಿ ಮಳೆ ಆರಂಭವಾಗಿದೆ. ರಾತ್ರಿ ವೇಳೆ ಮಳೆ ಸುರಿಯುವಾಗ ಬೈಕ್ ಸವಾರರು ಮಳೆಯಲ್ಲಿ ನೆನೆಯುವ ಮುನ್ನ ಮನೆ ಸೇರಿಕೊಳ್ಳಬೇಕೆಂದು ಸ್ಪೀಡ್ ಆಗಿ ವಾಹನ ಓಡಿಸಲು ಮುಂದಾಗ್ತಾರೆ. ಆದರೆ ನಗರದಲ್ಲಿರುವ ಡೆಡ್ಲಿ ಗುಂಡಿಗಳು ಗೊತ್ತಾಗದೆ ಗುಂಡಿಯಲ್ಲಿ ಬಿದ್ದು ಕೈಕಾಲು ಮುರಿದುಕೊಳ್ಳುವ ಸಾಧ್ಯತೆ ಹೆಚ್ಚು. ನಾವಿಲ್ಲಿ ನೀಡಿರುವ ಈ ರಸ್ತೆಗಳಲ್ಲಿ ದೊಡ್ಡ ದೊಡ್ಡ ಗುಂಡಿಗಳಿದ್ದು ಈ ರಸ್ತೆಗಳಲ್ಲಿ ಸಂಚರಿಸುವಾಗ ಕೊಂಚ ಎಚ್ಚರ ವಹಿಸಿ. ಪುಟ 2



# ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಮರಿತಿಬ್ಬೇಗೌಡ ಕಾಂಗ್ರೆಸ್ ಅಭ್ಯರ್ಥಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಮರಿತಿಬ್ಬೇಗೌಡ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ವರಿಷ್ಠರ ನಡೆಯಿಂದ ಅಸಮಾಧಾನಗೊಂಡಿದ್ದ ಮರಿತಿಬ್ಬೇಗೌಡ ಜೆಡಿಎಸ್ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಇತ್ತೀಚೆಗೆ ಜೆಡಿಎಸ್ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಅವಧಿಗೂ ಮುನ್ನವೇ ರಾಜೀನಾಮೆ ನೀಡಿದ್ದರು.



ಅದಾದ ಬಳಿಕ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದರು. ಅಲ್ಲದೇ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬಳಿಕ ಅವರು ಅಧಿಕೃತವಾಗಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಪರಿಷತ್ ಚುನಾವಣೆಗೆ ಬಿಜೆಪಿ ಐದು ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಒಂದು ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು, ಮೈತ್ರಿ ಮುಂದುವರಿಸುವುದಾಗಿ ತಿಳಿಸಿದೆ.

# ರ್‍ಯಾಶ್ ಡ್ರೈವಿಂಗ್‌ಗೆ 4ರ ಬಾಲಕ ಬಲಿ

**ಬೆಂಗಳೂರು:** ಚಾಲಕನ ರ್‍ಯಾಶ್ ಡ್ರೈವಿಂಗ್‌ಗೆ ನಾಲ್ಕು ವರ್ಷದ ಬಾಲಕ ಬಲಿಯಾದ ಘಟನೆ ಜೈ ಭೀಮಾನಗರದ ಮುರಗೇಶ್ ಪಾಳ್ಯದಲ್ಲಿ ನಡೆದಿದೆ. ಹಳೆಯ ಏರ್‌ಪೋರ್ಟ್ ರಸ್ತೆಯಲ್ಲಿ ಬೆಳಗ್ಗೆ 10:30ರ ಸುಮಾರಿಗೆ ಘಟನೆ ನಡೆದಿದ್ದು, ಆರವ್ (4) ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೃತ ಆರವ್ ಮನೆ ಮುಂದೆಯ ರಸ್ತೆಯಲ್ಲಿ ಆಟವಾಡುತ್ತಿದ್ದ ಸಂದರ್ಭ ರ್‍ಯಾಶ್ ಡ್ರೈವಿಂಗ್ ಮಾಡಿಕೊಂಡ ಬಂದ ಚಾಲಕ ಬಾಲಕನಿಗೆ ಡಿಕ್ಕಿ ಹೊಡೆದಿದ್ದಾನೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬಾಲಕನ ದೇಹ ಛಿದ್ರವಾಗಿದೆ. ಸದ್ಯ ಬಾಲಕನ ಮೃತದೇಹವನ್ನು ಮಣಿಪಲ್ ಆಸ್ಪತ್ರೆಗೆ ರವಾನಿಸಲಾಗಿದೆ. ಇನ್ನು ರ್‍ಯಾಶ್ ಡ್ರೈವಿಂಗ್ ಮಾಡಿದ ಕಾರು ಚಾಲಕನನ್ನು ಜೀವನ್ ಭೀಮಾನಗರ ಪೊಲೀಸರು ಬಂಧಿಸಿದ್ದಾರೆ.



# ಕಾರು ಪಲ್ಟಿ: ಇಬ್ಬರು ಶಿಕ್ಷಕರು ಸಾವು

**ತುಮಕೂರು:** ಚಲಿಸುತಿದ್ದ ಕಾರು ಪಲ್ಟಿಯಾಗಿ ಇಬ್ಬರು ಶಿಕ್ಷಕರು ಸಾವನಪ್ಪಿದ್ದು, ಇನ್ನಿಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಕಣಿವೇನಹಳ್ಳಿ ಗೇಟ್ ಬಳಿ ನಡೆದಿದೆ. ಧನಂಜಯ (58) ಹಾಗೂ ಶ್ರೀಕೃಷ್ಣ (49) ಘಟನೆಯಲ್ಲಿ ಮೃತಪಟ್ಟಿದ್ದಾರೆ. ನರಸಿಂಹ ಮತ್ತು ವೆಂಕಟಾಚಲಪತಿಗೆ ಗಂಭೀರ ಗಾಯವಾಗಿದೆ. ತುಮಕೂರಿನಿಂದ ಮದುವೆ ಆರತಕ್ಷತೆ ಕಾರ್ಯಕ್ರಮ ಮುಗಿಸಿ ಪಾವಗಡಕ್ಕೆ ವಾಪಸ್ ಹೋಗುತ್ತಿದ್ದ ವೇಳೆ ದುರ್ಘಟನೆ ನಡೆದಿದೆ. ಮೃತರು ಸೇರಿದಂತೆ ಕಾರಿನಲ್ಲಿದ್ದ 4 ಜನರು ಶಿಕ್ಷಕರಾಗಿ ಸೇವೆ ಸಲ್ಲಿಸುತಿದ್ದರು. ಘಟನೆ ಸಂಬಂಧ ಪಾವಗಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ರಣಬಿಸಿಲಿಗೆ ಮೀನುಗಳ ಮಾರಣಹೋಮ

# ಲಕ್ಷಾಂತರ ರೂ. ನಷ್ಟ

**ವಿಜಯಪುರ:** ಜಿಲ್ಲೆಯಲ್ಲಿ 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು ಜನ, ಜಾನುವಾರುಗಳು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಇನ್ನೂ ಜಿಲ್ಲೆಯ ಮಧಬಾವಿ ತಾಂಡಾದಲ್ಲಿ ರಣಬಿಸಿಲಿಗೆ ಇಂಜಿನಿಯರ್ ಒಬ್ಬರು ಸಾಕಿದ್ದ ಸಾವಿರಾರು ಮೀನುಗಳು ಸಾವನ್ನಪ್ಪಿದ್ದು, ಲಕ್ಷಾಂತರ ರೂ.ಗಳ ನಷ್ಟದಿಂದ ರೈತರು ಕಂಗಾಲಾಗಿದ್ದಾರೆ.





ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿರುವ ವಿಜಯಕುಮಾರ್ ಎಂಬವರು ತಾಂಡದಲ್ಲಿ ಮೀನು ಸಾಕಣೆ ಮಾಡಿದ್ದರು. ಸುಮಾರು 20 ಲಕ್ಷ ರೂ.ಗೂ ಅಧಿಕ ಹಣ ಖರ್ಚು ಮಾಡಿ 17 ಸಾವಿರ ಸ್ನೇಕ್ ಹೆಡ್ ಮುರೆಲ್ ತಳಿಯ ಮೀನನ್ನು ಸಾಕಿದ್ದರು. ಇನ್ನೇನೂ ಎರಡು ದಿನಗಳಲ್ಲಿ ಮೀನುಗಳು 30-40 ಲಕ್ಷ ರೂ.ಗಳಿಗೆ ಹೈದ್ರಾಬಾದ್‌ಗೆ ಮಾರಾಟ ಆಗಬೇಕಿತ್ತು. ಅಷ್ಟರಲ್ಲಿ ಮೀನುಗಳ ಮಾರಣ ಹೋಮವೇ ನಡೆದಿದೆ.

ಈ ಮೀನುಗಳಿಗೆ ಪ್ರತಿ ತಿಂಗಳು 2 ಲಕ್ಷ ರೂ.ಗಳಷ್ಟು ಆಹಾರ ಹಾಕಿ ಬೆಳೆಸಲಾಗಿತ್ತು. ಮಾರುಕಟ್ಟೆಯಲ್ಲಿ ಕೆಜಿಗೆ 700 ರಿಂದ 800 ರೂ. ಬೆಲೆ ಬಾಳುವ ಮೀನುಗಳು ಇನ್ನೇನು ಕೊನೆಯ ಕ್ಷಣದಲ್ಲಿ ಸಾವನ್ನಪ್ಪಿವೆ ಎಂದು ರೈತ ವಿಜಯಕುಮಾರ್ ಹಾಗೂ ಮಿತ್ರರು ಕಣ್ಣೀರು ಹಾಕುತ್ತಿದ್ದಾರೆ.

ಕಳೆದ ವರ್ಷ ಮೀನು ಕೃಷಿ ಮಾಡಿ ವಿಜಯಕುಮಾರ್ ಯಶಸ್ವಿಯಾಗಿದ್ದರು. ಈ ಹಿನ್ನೆಲೆ ಮೀನುಗಾರಿಕೆ ಇಲಾಖೆಯಿಂದ ಅವರಿಗೆ ಸನ್ಮಾನಿಸಲಾಗಿತ್ತು. ಈ ಬಾರಿಯೂ ಒಳ್ಳೆಯ ಇಳುವರಿ ಬಂದಿತ್ತು. ಆದರೆ ಬಿಸಿಲಿನ ತಾಪಕ್ಕೆ ಮೀನುಗಳು ಸಾವನ್ನಪ್ಪಿದ್ದು, ಸರ್ಕಾರದ ಸಹಾಯಕ್ಕೆ ಅವರು ಕೈಚಾಚಿದ್ದಾರೆ.

ಪ್ರತಿನಿತ್ಯ ವಿಜಯಪುರದಲ್ಲಿ ಉಷ್ಣಾಂಶ ದಾಖಲೆ ಪ್ರಮಾಣದಲ್ಲಿ ಏರುತ್ತಿದ್ದು, 40 ರಿಂದ 44 ಡಿಗ್ರಿ ವರೆಗೂ ತಾಪಮಾನ ದಾಖಲಾಗಿತ್ತಿದೆ. ಇದರಿಂದ ಜಿಲ್ಲೆಯ ಜನರ ನಿದ್ದೆ ಹದೆಗೆಟ್ಟು ಹೋಗಿದೆ. ಜನರ ಆರೋಗ್ಯದ ಮೇಲೂ ನಾನಾ ದುಷ್ಪರಿಣಾಮಗಳು ಬೀರುತ್ತಿವೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

## ರಸ್ತೆಯಲ್ಲಿ ಸಿಕ್ಕ ಪೆನ್‌ಡ್ರೈವ್ ಎ.ಮಂಜುಗೆ ಕೊಟ್ಟಿದ್ದೆ

# ಬಾಂಬ್ ಸಿಡಿಸಿದ ಆರೋಪಿ ನವೀನ್‌ಗೌಡ!

**ಹಾಸನ:** ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣಕ್ಕೆ ಎಸ್‌ಐಟಿ ಬಿಗ್ ಟ್ವಿಸ್ಟ್ ನೀಡಿದೆ. ಪೆನ್‌ಡ್ರೈವ್ ವೈರಲ್ ಮಾಡಿದ ಆರೋಪದ ಚೇತನ್, ಲಿಖಿತ್ ಹೆಸರಿನ ಇಬ್ಬರನ್ನು ಎಸ್‌ಐಟಿ ಅರೆಸ್ಟ್ ಮಾಡಿದೆ. ಇದೇ ಹೊತ್ತಿನಲ್ಲಿ ಪೆನ್‌ಡ್ರೈವ್ ಹಂಚಿಕೆ ಆರೋಪ ಎದುರಿಸುತ್ತಿರುವ ನವೀನ್ ಗೌಡ ಸೋಷಿಯಲ್ ಮೀಡಿಯಾ ಮೂಲಕ ಹಂಚಿಕೊಂಡಿರುವ ಪೋಸ್ಟ್ ಭಾರೀ ಸಂಚಲನ ಸೃಷ್ಟಿಸಿದೆ.



ಕಳೆದ ಏಪ್ರಿಲ್ 20 ರಂದು ನನಗೆ ರಸ್ತೆಯಲ್ಲಿ ಸಿಕ್ಕಿದ್ದ ಪೆನ್‌ಡ್ರೈವ್ ಅನ್ನು ಅರಕಲಗೂಡಿನಲ್ಲಿ ಶಾಸಕ ಎ.ಮಂಜುಗೆ ಕೊಟ್ಟಿದ್ದೆ. ಅರಕಲಗೂಡಿನ ಮಾರುತಿ ಕಲ್ಯಾಣ ಮಂಟಪದಲ್ಲಿ ಪೆನ್‌ಡ್ರೈವ್ ಕೊಟ್ಟಿದ್ದೆ. ಮಾಜಿ ಸಿಎಂ ಕುಮಾರಸ್ವಾಮಿ ಹೇಳಿದ ಹಾಗೆ ಪೆನ್ ಡ್ರೈವ್ ಹಂಚಿಕೆ ಮಾಡಿದ ಮಹಾನನಾಯಕ ಇವರೇ ಇರಬಹುದು ಎಂದು ನವೀನ್‌ಗೌಡ ತಮ್ಮ ಫೇಸ್‌ಬುಕ್ ಪುಟದಲ್ಲಿ ಬರೆದುಕೊಂಡಿದ್ದಾರೆ. ಇದಕ್ಕೆ ಅಲ್ಲದೇ ಹೆಚ್.ಡಿ ದೇವೇಗೌಡ, ಹೆಚ್‌ಡಿ ಕುಮಾರಸ್ವಾಮಿ ಹಾಗೂ ರೇವಣ್ಣ ಅವರೊಂದಿಗೆ ಎ. ಮಂಜು ಅವರು ಇರುವ ಫೋಟೋವೊಂದನ್ನು ಲಗತ್ತಿಸಿದ್ದಾರೆ.

ತಮ್ಮ ಮೇಲಿನ ಈ ಆರೋಪವನ್ನು ಎ.ಮಂಜು ಅಲ್ಲಗಳೆದಿದ್ದಾರೆ. ನನ್ನನ್ನು ಅವನು ಭೇಟಿ ಮಾಡಿಲ್ಲ. ಅವನನ್ನು ನಾನು ನೋಡಿಯೇ ಇಲ್ಲ. ಅವನು ನನಗೆ ಪರಿಚಯವೇ ಇಲ್ಲ. ಟಿವಿ ನೋಡಿದಾಗ ವಿಷಯ ಗೊತ್ತಾಯ್ತು ಸ್ಪಷ್ಟಪಡಿಸಿದ್ದಾರೆ. ತಾನು ಬಚಾವ್ ಆಗಲು ನವೀನ್‌ಗೌಡ ಇಂತಹ ಥರ್ಡ್‌ಕ್ಲಾಸ್ ಆರೋಪ ಮಾಡಿದ್ದಾನೆ. ಪ್ರಕರಣದ ದಾರಿ ತಪ್ಪಿಸಲು ಹೀಗೆ ಮಾಡಿದ್ದಾರೆ. ಜೆಡಿಎಸ್ ಮುಗಿಸಲು ಸಂಚು ನಡೆದಿರುವಂತೆ ಕಾಣ್ತಿದೆ. ಯರ್‍ಯಾರನ್ನೋ ಎಸ್‌ಐಟಿ ಬಂಧಿಸಿದೆ ಆದ್ರೆ, ನವೀನ್‌ಗೌಡನನ್ನ ಏಕೆ ಬಂಧಿಸಿಲ್ಲ. ನನಗೆ ಈಗ ದೂರು ಕೊಡಲು ಅನುಕೂಲ ಆಯ್ತು. ನಾನು ನವೀನ್ ಗೌಡ ವಿರುದ್ಧ ದೂರು ಕೊಟ್ಟೇ ಕೊಡುತ್ತೇನೆ ಎಂದು ಮಂಜು ಹೇಳಿದ್ದಾರೆ.

# ಬಿಜೆಪಿಯಲ್ಲಿ ವಯಸ್ಸಿನ ಮಿತಿ ಬಗ್ಗೆ ನಿರ್ಧಾರ ಕೈಗೊಂಡಿಲ್ಲ

**ಬೆಂಗಳೂರು:** ಅರವಿಂದ ಕೇಜ್ರಿವಾಲ್ ಬಹಳ ದಿನ ಜೈಲಿನಲ್ಲಿ ಇದ್ದಿದ್ದರಿಂದ ಹುಚ್ಚರಂತೆ ವರ್ತಿಸುತ್ತಿದ್ದಾರೆ. ವಯಸ್ಸಿನ ಆಧಾರದ ಮೇಲೆ ಟಿಕೆಟ್ ನೀಡುವ ಕುರಿತು ಬಿಜೆಪಿಯಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಡಿಯಾ ಒಕ್ಕೂಟದ ಪ್ರಧಾನಿ ಅಭ್ಯರ್ಥಿ ಯಾರೆಂದು ಅವರಿಗೇ ಗೊತ್ತಿಲ್ಲ. ಈಗಾಗಲೇ ನರೇಂದ್ರ ಮೋದಿಯವರೇ ಮತ್ತೆ ಪ್ರಧಾನಿಯಾಗುವುದು ನಿಶ್ಚಿತವಾಗಿದೆ. 75 ವರ್ಷ ಕಳೆದವರಿಗೆ ಟಿಕೆಟ್ ನೀಡಲಾಗುತ್ತಿದೆ. ಟಿಕೆಟ್ ನೀಡುವುದಿಲ್ಲ ಎಂಬ ನಿರ್ಧಾರ ಪಕ್ಷದಲ್ಲಿ ಆಗಿಲ್ಲ. ಇದನ್ನು ಕಾಂಗ್ರೆಸ್‌ನವರೇ ಸೃಷ್ಟಿ ಮಾಡಿಕೊಂಡಿದ್ದಾರೆ. ಕೇಜ್ರಿವಾಲ್ ಅವರು ಮರಳಿ ಜೈಲಿಗೆ ಹೋಗಬೇಕಿದೆ, ಅವರು ಮತ್ತೆ ಬಿಡುಗಡೆಯಾಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಕೇಜ್ರಿವಾಲ್ ತಪ್ಪು ಮಾಡಿಲ್ಲವಾದರೆ ನ್ಯಾಯಾಲಯ ಕೂಡಲೇ ಜಾಮೀನು ನೀಡುತ್ತದೆ. ಲಾಲೂ ಪ್ರಸಾದ್ ಕೂಡ ಜೈಲಿಗೆ ಹೋಗಿದ್ದಾರೆ. ಜಾಮೀನು ಸಿಕ್ಕಿಲ್ಲ ಎಂದಾದರೆ ಅದಕ್ಕೆ ಸೂಕ್ತವಾದ ಪುರಾವೆ ಇದೆ ಎಂದರ್ಥ. ಅನೇಕ ವಿರೋಧ ಪಕ್ಷಗಳಿದ್ದರೂ ತಪ್ಪು ಮಾಡಿದವರು ಮಾತ್ರ ಜೈಲಿಗೆ ಹೋಗಿದ್ದಾರೆ ಎಂದು ಕುಟುಕಿದರು.

ವಿಧಾನಪರಿಷತ್ ಚುನಾವಣೆಯಲ್ಲಿ ಹೊಂದಾಣಿಕೆ ದೃಷ್ಟಿಯಿಂದ ಪಕ್ಷದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಕೇಂದ್ರದ ನಾಯಕರು ನಿರ್ಧಾರ ಮಾಡಿದ್ದಾರೆ. ಇದರಲ್ಲಿ ರಾಜ್ಯದ ನಾಯಕರ ಪಾತ್ರವಿಲ್ಲ ಎಂದು ಹೇಳಿದರು.

ಇದೇ ವೇಳೆ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಜೆಡಿಎಸ್ ಹೋರಾಟಕ್ಕೆ ಬಿಜೆಪಿ ಬೆಂಬಲ ನೀಡುತ್ತದೆ. ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ನಾವು ಆಗ್ರಹಿಸುತ್ತೇವೆ ಎಂದು ಸಹ ಹೇಳಿದರು.

# 15 ಕೋಟಿ ಮೌಲ್ಯದ ಗಾಂಜಾ ಸೀಜ್!



**ಬೀದರ್:** ರಾಜ್ಯದ ಇತಿಹಾಸದಲ್ಲೇ ಎರಡನೇ ಬಾರಿಗೆ ಭಾರೀ ಪ್ರಮಾಣದ ಗಾಂಜಾವನ್ನು ಕ್ರೈಂ ಬ್ಯೂರೋ ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಿದ್ದಾರೆ.

ಒರಿಸ್ಸಾದಿಂದ ಬೀದರ್ ಮೂಲಕ ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದ 15 ಕೋಟಿ ರೂ. ಮೌಲ್ಯದ ಗಾಂಜಾವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಆರೋಪಿಗಳು ಕೆಎ 38, 5510 ಸಂಖ್ಯೆಯ ಲಾರಿಯ ಮೇಲ್ಭಾಗದಲ್ಲಿ ಸಿಮೆಂಟ್ ಬ್ಲಾಕ್ಸ್‌ಗಳನ್ನು ತುಂಬಿ ಕೆಳಗೆ ಯಾರಿಗೂ ತಿಳಿಯದಂತೆ ಗಾಂಜಾವನ್ನು ಚೀಲಗಳಿಗೆ ತುಂಬಿ ಅಡಗಿಸಿಟ್ಟಿದ್ದರು. ಖಚಿತ ಮಾಹಿತಿ ಮೇರೆಗೆ ಔರಾದ್ ತಾಲೂಕಿನ ವನಮಾರಪ್ಪಳ್ಳಿ ಚೆಕ್ ಪೋಸ್ಟ್ ಬಳಿ ಅಧಿಕಾರಿಗಳು ದಾಳಿ ನಡೆಸಿದ್ದು, ತಪಾಸಣೆ ವೇಳೆ ಗಾಂಜಾ ಪತ್ತೆಯಾಗಿದೆ. ಗಾಂಜಾವನ್ನು ಜಪ್ತಿ ಮಾಡಿದ್ದು, ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಈ ಸಂಬಂಧ ಔರಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾ.9 ರಂದು ಸಹ ವನಮಾರಪ್ಪಳ್ಳಿ ಚೆಕ್ ಪೋಸ್ಟ್‌ನಲ್ಲಿ 15 ಕೋಟಿ 50 ಲಕ್ಷ ರೂ. ಮೌಲ್ಯದ ಗಾಂಜಾ ಜಪ್ತಿ ಮಾಡಿದ್ದರು.

ಮೊದಲನೇ ಪುಟದಿಂದ...

## ಆರೋಪಿಗೆ ಗುಂಡೇಟು

ಲಷ್ಕರ್ ಮೊಹಲ್ಲಾದ ಮೀನು ಮಾರುಕಟ್ಟೆ ಬಳಿ ಎಂಟ್ರಿಕೊಟ್ಟಿದ್ದರು.

ಮಚ್ಚು, ಲಾಂಗ್ ಹಿಡಿದುಕೊಂಡು ಬಂದಿದ್ದ ಗ್ಯಾಂಗ್ ರೌಡಿ ಶೀಟರ್ ಯಾಸೀನ್ ಖುರೇಶಿ ಮೇಲೆ ಅಟ್ಯಾಕ್ ಮಾಡಿದೆ. ಈ ಅಟ್ಯಾಕ್ ನೋಡುತ್ತಿದ್ದಂತೆ ಯಾಸೀನ್ ಗ್ಯಾಂಗ್ ಅಲರ್ಟ್ ಆಗಿದೆ. ಅಟ್ಯಾಕ್ ಗೆ ಬಂದಿದ್ದ ಗೌಸ್ ಮತ್ತು ಶೋಯಬ್ ಇಬ್ಬರನ್ನು ಯಾಸೀನ್ ಖುರೇಶಿ ಗ್ಯಾಂಗ್ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದೆ. ದೊಡ್ಡ ಸಿಮೆಂಟ್ ಶೀಟ್, ಚಪ್ಪಡಿ ಕಲ್ಲು, ಸೈಕಲ್ ಎತ್ತುಹಾಕಿ ಬರ್ಬರ ಹತ್ಯೆ ಮಾಡಿದೆ. ಈ ಇಬ್ಬರ ಸಿಕ್ಕಿಬೀಳುತ್ತಿದ್ದಂತೆ ಮೃತರ ಜೊತೆ ಬಂದಿದ್ದ ಸಹಚರರು ಎಸ್ಕೇಪ್ ಆಗಿದ್ದಾರೆ. ಘಟನೆಯಲ್ಲಿ ರೌಡಿ ಶೀಟರ್ ಯಾಸೀನ್ ಗೆ ಗಂಭೀರವಾಗಿ ಗಾಯಗೊಂಡಿದ್ದು, ಆತನನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಸಂಜೆ ಹೊತ್ತಿನಲ್ಲಿ ನಡೆದ ರೌಡಿಗಳ ಗ್ಯಾಂಗ್ ವಾರ್ ನೋಡಿದ ಸ್ಥಳೀಯರು ಹೆಚ್ಚಿಬೀದ್ದರು. ಇಬ್ಬರು ಅಲ್ಲಿ ಹೆಣವಾಗಿ ಬಿದ್ದಿದ್ದರು. ಅವರ ಮುಖ ಕೂಡ ಗುರುತು ಸಿಗದ ರೀತಿಯಲ್ಲಿ ಹತ್ಯೆಮಾಡಲಾಗಿತ್ತು. ಘಟನೆ ತಿಳಿಯುತ್ತಿದ್ದಂತೆ ಕೋಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಬಳಿಕ ಎಸ್ಪಿ ಮಿಥುನ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಎಸ್ಪಿ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿದರು. ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆ ಆರೋಪಿಗಳನ್ನು ಬಂಧಿಸಲು ಎಸ್ಪಿ ಒಂದು ತಂಡ ರಚನೆ ಮಾಡಿದರು. ಅದರಂತೆ ಈ ತಂಡ ಇಂದು (ಮೇ 13) ಕೊಲೆ ಪ್ರಕರಣದ ಆರೋಪಿ ಶೋಯೆಬ್ ಅಲಿಯಾಸ್ ಅಂಡ್ ನನ್ನು ಬಂಧಿಸಲು ತೆರಳಿದಾಗ ಆರೋಪಿ ಪೊಲೀಸರ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದಾನೆ. ಕೂಡಲೆ ಪಿಎಸ್ ಐ ರವಿ ಆರೋಪಿ ಕಾಲಿಗೆ ಗುಂಡು ಹಾರಿಸಿದ್ದಾರೆ. ಬಳಿಕ ಆತನನ್ನು ಬಂಧಿಸಿ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

## ಅನುಮಾನ ಹುಟ್ಟಿಸಿದ ನಡೆ

ಈ ಬೆಳವಣಿಗೆಗಳು ಕಾರ್ತಿಕ್ ಗೌಡ ಹಾಗೂ ನವೀನ್ ಗೌಡ ರಕ್ಷಣೆಗೆ ಸರ್ಕಾರ ಮುಂದಾಗಿದೆಯಾ ಎಂಬ ಅನುಮಾನ ಹುಟ್ಟುಹಾಕಿದೆ. ಕಾಂಗ್ರೆಸ್ ನಾಯಕರು, ಮುಖಂಡರ ಜೊತೆ ಗುರುತಿಸಿಕೊಂಡ ನಾಲ್ವರ ವಿರುದ್ಧ ಕ್ರಮ ಆಗದ ಬಗ್ಗೆ ಹಲವು ಅನುಮಾನಗಳು ವ್ಯಕ್ತವಾಗಿವೆ.

**ಪ್ರತಿ ದಿನ ಪ್ರತಿಕ್ರಿಯೆ ನೀಡಲಾಗದು:** ಈ ಮಧ್ಯೆ, ಹೆಚ್ ಡಿ ರೇವಣ್ಣ ವಿರುದ್ಧದ ಕಿಡ್ನ್ಯಾಪ್ ಪ್ರಕರಣದ ಸಂತ್ರಸ್ತೆ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ವಿಚಾರ ಇದೀಗ ಸದ್ದು ಮಾಡುತ್ತಿದೆ. ಈ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವ ಜಿ. ಪರಮೇಶ್ವರ, ಪ್ರತಿ ದಿನವೂ ಪ್ರತಿಕ್ರಿಯೆ ನೀಡಲು ಆಗಲ್ಲ. ಅದನ್ನೆಲ್ಲಾ ಎಸ್ ಐಟಿ ನೋಡಿಕೊಳ್ಳುತ್ತದೆ ಎಂದಿದ್ದಾರೆ. ತಮ್ಮನ್ನು ಯಾರೂ ಅಪಹರಣ ಮಾಡಿಲ್ಲ ಎಂದು ಸಂತ್ರಸ್ತ ಮಹಿಳೆ ಭಾನುವಾರ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ್ದರು.

**ಎಸ್‌ಐಟಿಗೇ ಸವಾಲೆಸೆದನಾ ನವೀನ್ ಗೌಡ:** ಪ್ರಕರಣದ ಪ್ರಮುಖ ರೂವಾರಿಗಳಲ್ಲೊಬ್ಬನಾದ ನವೀನ್ ಗೌಡ ಫೇಸ್ ಬುಕ್ ನಲ್ಲಿ ಪೋಸ್ಟ್ ಮಾಡಿದ್ದು, ಪೆನ್ ಡ್ರೈವ್ ಅನ್ನು ಅರಕಲಗೂಡು ಶಾಸಕ ಎ ಮಂಜುಗೆ ಕೊಟ್ಟಿದ್ದೆ. ಹೆಚ್ ಡಿ ಕುಮಾರಸ್ವಾಮಿ, ಪೆನ್ ಡ್ರೈವ್ ಹಂಚಿಕೆ ಹಿಂದೆ ಮಹಾನಾಯಕನ ಕೈವಾಡ ಇದೆ ಅಂದಿದ್ದರು. ಆ ಮಹಾನಾಯಕ ಅರಕಲಗೂಡು ಎಂಎಲ್‌ಎ ಎ ಮಂಜುನಾ ಎಂದು ಫೇಸ್ ಬುಕ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಏಪ್ರಿಲ್ 20 ರಂದು ನನಗೆ ರಸ್ತೆಯಲ್ಲಿ ಸಿಕ್ಕಿದ್ದ ಪೆನ್ ಡ್ರೈವ್ ಅನ್ನು ಅರಕಲಗೂಡು ಶಾಸಕರಾದ ಎ. ಮಂಜು ಅವರಿಗೆ ಏಪ್ರಿಲ್ 21 ರಂದು ಅರಕಲಗೂಡಿನ ಮಾರುತಿ ಕಲ್ಯಾಣ ಮಂಟಪದಲ್ಲಿ ನೀಡಿದ್ದೇನೆ. ಕುಮಾರಸ್ವಾಮಿ ಅವರು ಹೇಳಿದ ಹಾಗೆ ವಿಡಿಯೋ ವೈರಲ್ ಹಿಂದೆ ಇರುವ ಮಹಾ ನಾಯಕ ಅರಕಲಗೂಡು ಶಾಸಕರೇ ಆಗಿರಬಹುದು ಎಂದು ಆತ ಬರೆದುಕೊಂಡಿದ್ದಾನೆ.

## ದೂರು ನೀಡಿದ್ದ ಜೆಡಿಎಸ್

ಹೆಚ್ ಕುಮಾರಸ್ವಾಮಿ ಅವರು ಹೇಳಿದ ಹಾಗೆ ವಿಡಿಯೋ ವೈರಲ್ ಹಿಂದೆ ಇರುವ ಮಹಾನಾಯಕ ಅರಕಲಗೂಡು ಶಾಸಕರೇ ಆಗಿರಬಹುದು'' ಎಂದು ಪೋಸ್ಟ್ ಹಾಕಿಕೊಂಡಿದ್ದನು. ಈ ವಿಚಾರ ಸಾಕಷ್ಟು ಸುದ್ದಿಯಾಗುತ್ತಿದ್ದಂತೆ ತನ್ನ ಪೋಸ್ಟ್ ಅನ್ನು ಡಿಲಿಟ್ ಮಾಡಿದೆ.

## ಮತ್ತೆ ಬಂತು ಕೊರೊನಾ!

ಪುಣೆಯಲ್ಲಿ 51 ಪ್ರಕರಣ, ಥಾಣೆಯಲ್ಲಿ 20 ಪ್ರಕರಣಗಳು ಪತ್ತೆಯಾಗಿದೆ. ಔರಂಗಾಬಾದ್, ಅಮರಾವತಿಯಲ್ಲಿ 7 ಪ್ರಕರಣಗಳು ಪತ್ತೆಯಾಗಿದ್ದರೆ, ಸೋಲಾಪುರದಲ್ಲಿ 2 ಪ್ರಕರಣ, ಅಹಮ್ಮದ್‌ನಗರ, ನಾಸಿಕ್, ಲಾತೂರ್ ಹಾಗೂ ಸಾಂಗ್ಲಿಯಲ್ಲಿ ತಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿದೆ.

ಮಹಾರಾಷ್ಟ್ರವು ಹೊಸ ಕೋವಿಡ್ -19 ಓಮಿಕ್ರಾನ್ ಸಬ್ ವೇರಿಯಂಟ್ ಕೆ.2 ನ 91 ಪ್ರಕರಣಗಳ ದಾಖಲಿಸಿದೆ, ಇದು ಹಿಂದೆ ಪ್ರಬಲವಾಗಿದ್ದ ಎಚ್.1 ರೂಪಾಂತರವನ್ನು ಮೀರಿಸುವಷ್ಟು ಶಕ್ತಿಶಾಲಿಯಾಗಿದೆ ಎನ್ನಲಾಗಿದೆ ಮತ್ತು ಈಗ ಹಲವಾರು ದೇಶಗಳಲ್ಲಿ ಸೋಂಕು ಹರಡುವಿಕೆಗೆ ಕಾರಣವಾಗುತ್ತಿದೆ.

ಮಾರ್ಚ್‌ನಲ್ಲಿ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ ಕಂಡುಬಂದಿದ್ದು, ಸುಮಾರು 250 ಪ್ರಕರಣಗಳು ದಾಖಲಾಗಿವೆ. ಕೊರೊನಾ ಪ್ರಕರಣವು ಡಿಸೆಂಬರ್ 2019 ರಲ್ಲಿ ಮೊದಲು ಬೆಳಕಿಗೆ ಬಂದಿತು. ಇದಾದ ಬಳಿಕ, ಇದು ಕ್ರಮೇಣ ಅನೇಕ ದೇಶಗಳಿಗೆ ವ್ಯಾಪಿಸಿತ್ತು, ಲಕ್ಷಾಂತರ ಮಂದಿ ಪ್ರಾಣ ಕಳೆದುಕೊಂಡರು. ಅಂದಿನಿಂದ, ಅದರ ಅನೇಕ ರೂಪಾಂತರಗಳು ಕಂಡು ಬಂದಿವೆ.

ಪ್ರಕರಣ ಪತ್ತೆ ಕುರಿತು ಪ್ರತಿಕ್ರಿಯೆ ನೀಡಿರುವ ಜಿನೋಮ್ ಸೀಕ್ವೆನ್ಸ್ ಪರೀಕ್ಷಾ ಸಂಪರ್ಕ ಅಧಿಕಾರಿ ಡಾ.ರಾಜೇಶ್, ಏಪ್ರಿಲ್, ಮೇ ತಿಂಗಳಲ್ಲಿ ಕೋವಿಡ್ ಮ್ಯೂಟೇಶನ್ ಪಡೆದುಕೊಂಡು ಹೊಸ ವೇರಿಯೆಂಟ್ ಆಗಿ ಹರಡುತ್ತದೆ. ಸದ್ಯ ಕೆಪಿ.2 ವೈರಸ್ ಪ್ರಕರಣ ತ್ವರಿತವಾಗಿ ಹರಡುತ್ತಿದೆ. ಆದರೆ ಆಸ್ಪತ್ರೆ ದಾಖಲು ಪ್ರಮಾಣ ಕಡಿಮೆ ಇದೆ. ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ನಾಲ್ಕು ತಿಂಗಳ ಪುಟ್ಟ ಕಂದ

11 ಕಲರ್ಸ್, 15 ತರಕಾರಿಗಳು, 14 ಹಣ್ಣುಗಳು, 13 ಜನರಲ್ ಇಮೇಜ್, 12 ಶೇಪ್ಸ್‌ಗಳನ್ನು ಗುರುತಿಸುವ ಸಾಮರ್ಥ ಹೊಂದಿದ್ದು, ಇಡೀ ಪ್ರಪಂಚಕ್ಕೆ ನಾಲ್ಕೇ ತಿಂಗಳಿಗೆ ನೂರಾಪ್ಪತ್ತೈದು ಫ್ಲಾಶ್ ಕಾರ್ಡ್‌ಗಳನ್ನು ಗುರುತಿಸುವ ಮಗು ಎಂದು ಹೆಸರು ಮಾಡಿದೆ.

ಇಶಾನ್ವಿ ಸಾಮರ್ಥ್ಯವನ್ನು ಗಮನಿಸಿದ ಆಕೆ ತಾಯಿ ಸ್ನೇಹಾ ಕುಟುಂಬಸ್ಥರ ಸಹಾಯದಿಂದ ವಿಡಿಯೋ ರೆಕಾರ್ಡ್ ಮಾಡಿ, ನೋಬಲ್ ವರ್ಲ್ಡ್ ರೆಕಾರ್ಡ್ಸ್ ಗೆ ಕಳುಹಿಸಿದ್ದಾರೆ. ನಂತರ ನೋಬಲ್ ಬುಕ್ ಆಫ್ ರೆಕಾರ್ಡ್ ನ ಆಯ್ಕೆ ಮಂಡಳಿ ಮಗುವಿನ ಪ್ರತಿಭೆಯನ್ನು ಗುರುತಿಸಿ ವಿಶ್ವ ದಾಖಲೆಗಳಿಗೆ ಆಯ್ಕೆ ಮಾಡಿದೆ. ಈ ಹಿಂದೆ ಆಂಧ್ರಪ್ರದೇಶದ ಕೈವಲ್ಯ ಎಂಬ ಹೆಣ್ಣು ಮಗು ನಾಲ್ಕು ತಿಂಗಳಿಗೆ 120 ಫ್ಲಾಶ್ ಕಾರ್ಡ್ ಗುರುತಿಸಿ ರೆಕಾರ್ಡ್ ಮಾಡಿದ್ದಳು. ಇದೀಗ ಇಶಾನ್ವಿ ಕೈವಲ್ಯ ಮಾಡಿದ ರೆಕಾರ್ಡ್ ನ್ನು ಬ್ರೇಕ್ ಮಾಡಿದ್ದಾಳೆ.

ಒಟ್ಟನಲ್ಲಿ ಹುಟ್ಟಿದ 4 ತಿಂಗಳಲ್ಲೇ ಪುಟ್ಟ ಪೋರಿ ವಿಶ್ವ ದಾಖಲೆ ಮಾಡುವ ಮೂಲಕ ತನ್ನ ಮಯಸ್ಸಿಗೂ ಮೀರಿದ ಸಾಧನೆ ಮಾಡಿದ್ದಾರೆ. ಇದು ನಿಜಕ್ಕೂ ಎಲ್ಲರ ಹುಬ್ಬೇರಿಸಿದೆ.

## ಅತಿ ದೊಡ್ಡ ಅಕ್ವೇರಿಯಂ

ಇನ್ನು ಅಕ್ವೇರಿಯಂ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಅವರಿಗೆ ತರಬೇತಿ ಕೂಡ ನೀಡಲಾಗುತ್ತಂತೆ. ವಿಶೇಷವೆಂದರೆ ಕಟ್ಟಡದ ಆವರಣದಲ್ಲಿ 75 ಸಾವಿರ ಲೀಟರ್ ಸಾಮರ್ಥ್ಯದ ಉಪ್ಪು ನೀರಿನ ಅಂತರರಾಷ್ಟ್ರೀಯ ಮಟ್ಟದ ಟನಲ್ ನಿರ್ಮಿಸಲಾಗಿದೆ. ಇದರ ಜೊತೆಗೆ ಮತ್ಸ್ಯಾಲಯ ಒಳಹೊಕ್ಕುವವರಿಗೆ ಸಮುದ್ರದ ಆಳದಲ್ಲಿದ್ದಂತೆ ಅನುಭವವಾಗಲಿದೆ. ಅದರಲ್ಲೂ ಮಕ್ಕಳಿಗೆ ಇದು ಫೇವರೆಟ್ ಸ್ಪಾಟ್ ಆಗಲಿದ್ದು, ಹೊಸದಾಗಿ ನವೀಕರಣಗೊಳ್ಳುತ್ತಿರುವ ಮತ್ಸಲಯದ ಬಗ್ಗೆ ಜನರು ಸಂತೋಷ ವ್ಯಕ್ತಪಡಿಸಿದ್ರು.

ಇನ್ನು, ಬೇರೆ ಕಡೆ ಮ್ಯುಸಿಯಂಗಳಿಗೆ ಹೋಗಬೇಕು ಎಂದ್ರೆ ಜಾಸ್ತಿ ಹಣವನ್ನ ಕೊಟ್ಟು ಹೋಗಬೇಕಾಗುತ್ತೆ. ಇಲ್ಲಿಯಾದ್ರೆ ಸರ್ಕಾರಿ ಹಣವನ್ನ ಮೀಸಲಿಡ್ತಾರೆ. ಮುಂಚೆ ಮ್ಯುಸಿಯಂ ಓಪನ್ ಇದ್ದಾಗಾ ಫ್ಯಾಮಿಲಿ ಸಮೇತ ಬರ್ತಿದ್ವಿ. ಒಂದು ವರ್ಷದಿಂದ ಎಲ್ಲಾವೂ ಮಿಸ್ ಆಗಿತ್ತು. ಈಗಾ ಓಪನ್ ಆದ್ರೆ ಬರ್ತಿವಿ ಅಂತ ಪ್ರವಾಸಿಗರು ಹೇಳ್ತಿದ್ದಾರೆ.

ಇನ್ನು ಅಕ್ವೇರಿಯಂ ಕೆಲಸ 90% ರಷ್ಟು ಮುಗಿದಿದ್ದು, ಮುಂದಿನ ತಿಂಗಳು ಉದ್ಘಾಟನೆಯಾಗುವ ಸಾಧ್ಯತೆ ಇದೆ ಅಂತ ನಮ್ಮ ಬೆಂಗಳೂರು ಅಕ್ವೇರಿಯಂ ಡೈರೆಕ್ಟರ್ ನಂದಕುಮಾರ್ ಅವರು ಮಾಹಿತಿ ನೀಡಿದ್ರು. ಒಟ್ನಲ್ಲಿ ಕಬ್ಬನ್ ಪಾರ್ಕ್ ಪ್ರೇಮಿಗಳನ್ನು ಸೆಳೆಯೋಕೆ ಈ ಅಕ್ವೇರಿಯಂ ಸಿಂಗಾರಗೊಳ್ಳುತ್ತಿದೆ. ಕೇವಲ ಸಿಟಿ ಜನಕ್ಕೆ ವಾಕಿಂಗ್ ಸ್ಪಾಟ್, ಮಕ್ಕಳಿಗೆ ಬಾಲಭವನದ ಜೊತೆಗೆ ಅಕ್ವೇರಿಯಂ ಕೂಡ ಆ ಯಡ್ ಆಗಲಿದ್ದು, ಜನರು ಹೊಸ ಆಕ್ವೇರಿಯಮ್ ನೋಡುವುದಕ್ಕೆ ಕಾಯುತ್ತಿರುವುದು ಮಾತ್ರ ಸುಳ್ಳಲ್ಲ.

## ಈ ರಸ್ತೆಗಳಲ್ಲಿ ಗುಂಡಿಗಳು!

ಹೊಸೂರು ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ನೋಡಿದ್ರೆ, ಈ ಗುಂಡಿಗಳಲ್ಲಿ ಯಾರಾದರೂ ಬಿದ್ರೆ ಖಂಡಿತವಾಗಿ ಕೈಕಾಲು ಮುರಿದುಕೊಳ್ಳುತ್ತಾರೆ ಅನ್ಸುತ್ತೆ. ಇತ್ತ ಚಿನ್ನಯನಪಾಳ್ಯ ತಿರುವು ರೋಡ್ ನಲ್ಲಿರುವ ಗುಂಡಿಯ ಬಗ್ಗೆಯಂತು ಹೇಳೋದೆ ಬೇಡ ನೋಡಿದ್ರೆ ಗೊತ್ತಾಗುತ್ತದೆ ಅಮಾಯಕರ ಪ್ರಾಣ ತೆಗೆಯಲು ಈ ಗುಂಡಿ ಕಾಯ್ಕೊಂಡಿದೆ ಎಂದು. ಇನ್ನೂ ಲಕ್ಕಸಂದ್ರ, ಜಂಕ್ಷನ್ ನಲ್ಲಿರುವ ಗುಂಡಿಗಳಂತೋ ವಾಹನ ಸವಾರರು ಯಾವ ಕಡೆ ಹೋಗಬೇಕೆಂದು ಗೊತ್ತಾಗದಷ್ಟು ಆ ಯಂಗಲ್ ನಲ್ಲಿ ಗುಂಡಿಗಳು ಬಿದ್ದಿವೆ. ಈ ಗುಂಡಿಗಳಲ್ಲಿ ವಾಹನ ಚಾಲನೆ ಮಾಡಬೇಕಾದ್ರೆ ಚೂರು ನಿರ್ಲಕ್ಷ್ಯ ಮಾಡಿದ್ರು, ಆಸ್ಪತ್ರೆ ಸೇರುವುದು ಗ್ಯಾರೆಂಟಿ. ಪ್ರತಿದಿನ ಈ ರೋಡ್ ನಲ್ಲಿ ಓಡಾಡುತ್ತೀನಿ ಯಾವಾಗಲೂ ಯಾರಾದರೂ ವಾಹನ ಸವಾರರು ಈ ಗುಂಡಿಗಳಲ್ಲಿ ಬೀಳುತ್ತಾನೆ ಇರುತ್ತಾರೆ. ದಯವಿಟ್ಟು ಇದನ್ನು ಮೊದಲು ಸರಿ ಪಡಿಸಿ ಎಂದು ಬೈಕ್ ಸವಾರ ಭರತ್ ಮನವಿ ಮಾಡುದ್ರು.

ಒಟ್ನಲ್ಲಿ ಮಳೆ ಬರುವಾಗ ರೋಡ್ ಮೇಲೆ ನೀರು ಕಮ್ಮಿ ಆದ ಮೇಲೆ ಬೈಕ್ ಚಲಾಯಿಸುವುದು ಒಳ್ಳೆಯದು. ಇಲ್ಲಾಂದ್ರೆ ಗುಂಡಿಗಳು ಕಾಣದೆ ಅದರಲ್ಲಿ ಬೀಳ್ಬೋದು. ಇನ್ನು ಬೈಕ್ ನಲ್ಲಿ ಹಿಂದೆ ಹೆಂಡತಿ, ಮಕ್ಕಳು, ವಯಸ್ಸಾದವರು ಇದ್ರಂತೂ ಬೀ ಕೇರ್ ಫುಲ್. ನಿಮ್ಮ ವೇಗಕ್ಕೆ ಹಿಂದೆ ಕುಳಿತವ್ರು ಮುಗ್ಗರಿಸಿ ಬೀಳಬಹುದು.

## ಕ್ಯಾಮರಾ ಕಣ್ಗಾವಲು

**ಐದು ವರ್ಷಗಳ ಅಧ್ಯಯನಕ್ಕೆ ಒಪ್ಪಂದ:** ಹವಾಮಾನ ಬದಲಾವಣೆಯ ಪರಿಣಾಮವನ್ನು ಅಧ್ಯಯನ ಮಾಡಲು, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ಅರಣ್ಯ ಇಲಾಖೆಯೊಂದಿಗೆ ಐದು ವರ್ಷಗಳ ಅವಧಿಯ ಅಧ್ಯಯನಕ್ಕೆ ಮುಂದಾಗಿದೆ. ನಾಗರಹೊಳೆ, ದಾಂಡೇಲಿ ಮತ್ತು ಶಿವಮೊಗ್ಗದ ನಿತ್ಯಹರಿದ್ವರ್ಣ ಮತ್ತು ಒಣ ಎಲೆ ಉದುರುವ ಕಾಡುಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಅಧ್ಯಯನ ನಡೆಸಲಾಗುತ್ತದೆ.

**ಪ್ರತಿ ಕ್ಯಾಮರಾಕ್ಕೆ 15 ಲಕ್ಷ ರೂ!:** ಇದು 2023-24 ರಲ್ಲಿ ಪ್ರಾರಂಭವಾಗುವ ಐದು ವರ್ಷಗಳ ಅವಧಿಯ ಅಧ್ಯಯನವಾಗಿದೆ. ಅಧ್ಯಯನಕ್ಕಾಗಿ ಬೇಸ್‌ಲೈನ್ ಡೇಟಾ ಬೇಸ್ ಅನ್ನು ಕಳೆದ ವರ್ಷವೇ ಸಿದ್ದಪಡಿಸಲಾಗಿದೆ. ಸ್ಥಳಗಳನ್ನು ಅಧ್ಯಯನ ಮಾಡಲಾಗಿದೆ ಮತ್ತು ಪ್ರದೇಶಗಳನ್ನು ಶಾರ್ಟ್ ಲಿಸ್ಟ್ ಮಾಡಲಾಗಿದೆ. ಮೇ ಅಂತ್ಯದೊಳಗೆ ಕ್ಯಾಮರಾಗಳನ್ನು ಅಳವಡಿಸಲಾಗುವುದು. ಈ ಹಿಂದೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ್ನು ಅಧ್ಯಯನಕ್ಕಾಗಿ ಗುರುತಿಸಲಾಗಿತ್ತು. ಆದರೆ ಅಗತ್ಯ ಮಾನದಂಡಗಳಿಗೆ ಹೊಂದಿಕೆಯಾಗದ ಕಾರಣ ಕೈಬಿಡಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿರುವುದಾಗಿ 'ದಿ ನ್ಯೂ ಸಂಡೆ ಎಕ್ಸ್‌ಪ್ರೆಸ್' ವರದಿ ಮಾಡಿದೆ. ಸಂಪೂರ್ಣ ಯೋಜನೆಗೆ 2.19 ಕೋಟಿ ವೆಚ್ಚವಾಗಲಿದ್ದು, ಪ್ರತಿ ಕ್ಯಾಮರಾಕ್ಕೆ 15 ಲಕ್ಷ ರೂ. ಇದೆ ಎಂದು ಅವರು ತಿಳಿಸಿದ್ದಾರೆ.

**ಎಲ್ಲೆಲ್ಲಿ ಕ್ಯಾಮರಾ ಅಳವಡಿಕೆ:** ಕಳ್ಳಬೇಟೆ ತಡೆ ಶಿಬಿರಗಳು ಮತ್ತು ತಪಾಸಣೆ ಬಂಗಲೆಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಇದಕ್ಕಾಗಿ ಆ ಪ್ರದೇಶದ ನೈಸರ್ಗಿಕ ಆವಾಸಸ್ಥಾನಕ್ಕೆ ತೊಂದರೆ ಮಾಡುವುದಿಲ್ಲ, ಅವುಗಳನ್ನು ಬಹಳ ಎತ್ತರದಲ್ಲಿ ಸ್ಥಾಪಿಸಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಹವಾಮಾನ ಬದಲಾವಣೆ ಕುರಿತ ಅಧ್ಯಯನವನ್ನು ವರ್ಷದ ಎಲ್ಲಾ 365 ದಿನಗಳು 24x7 ಮಾಡಲಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಏಜೆನ್ಸಿಗಳ ತಂಡಗಳು ಅಧ್ಯಯನದ ಭಾಗವಾಗಿವೆ. ಅವುಗಳು ಮೌಲ್ಯಮಾಪನಕ್ಕಾಗಿ ದೈನಂದಿನ ಆಧಾರದ ಮೇಲೆ ಡೇಟಾ ಮತ್ತು ಚಿತ್ರಗಳನ್ನು ಸಂಗ್ರಹಿಸಲಿವೆ. ಅಧ್ಯಯನಕ್ಕಾಗಿ ವಿವರವಾದ ಕಾರ್ಯಾಗಾರಗಳು ಮತ್ತು ತರಬೇತಿಗಳನ್ನು ಕಳೆದ ವರ್ಷವೇ ಮಾಡಲಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಕೃಷಿ, ತೋಟಗಾರಿಕೆ, ಇಂಧನ ಮತ್ತು ನೀರಾವರಿ ಸೇರಿದಂತೆ 42 ಸರ್ಕಾರಿ ಇಲಾಖೆಗಳು ಅಧ್ಯಯನದಲ್ಲಿ ತೊಡಗಿಕೊಳ್ಳಲಿದ್ದು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನೆ ಸಂಸ್ಥೆ ನೋಡಲ್ ಏಜೆನ್ಸಿಯಾಗಿರಲಿದೆ.

## 28 ಸಾವಿರ ರೈತರಿಗೆ ಸಂಕಷ್ಟ

ಲಕ್ಷಾಂತರ ಟನ್ ನಷ್ಟು ಮಾವು ಬೆಳೆದು ಮುಂಬೈ ವಹಿವಾಟುದಾರರಿಗೆ ಮಾರಾಟ ಮಾಡುತ್ತಿದ್ದ ರಾಮನಗರ ರೈತರಿಗೆ ಈಗ ಬರಸಿಡಿಲು ಬಡಿದಂತಾಗಿದೆ. ಸಾಲ ಸೋಲ ಮಾಡಿ ಎಕರೆಗಟ್ಟಲೇ ಮಾವು ಬೆಳೆದು, ಮಾವು ಮಾರಿ, ಬಂದ ಲಾಭದಲ್ಲಿ ಮನೆ ಕಟ್ಟಬೇಕು, ಮಗಳ ಮದುವೆ ಮಾಡಿಸಬೇಕು, ಮಗನ ಕಾಲೇಜು ಫೀಸ್ ಕಟ್ಟಬೇಕು ಎಂದುಕೊಂಡಿದ್ದ ಮಾವು ಬೆಳೆಗಾರರು ಹವಾಮಾನ ವೈಪರೀತ್ಯ, ಬಿರು ಬಿಸಿಲಬೇಗೆಗೆ ಮಾವಿನ ಮರದಲ್ಲಿ ಕಾಯಿ ಕಟ್ಟಬೇಕಿದ್ದ ಹೂಗಳೆಲ್ಲವು ಉದುರಿಹೋಗಿ ಮಾವು ಭ್ರೂಣಾವಸ್ಥೆಯಲ್ಲಿಯೇ ಕೈಕೊಟ್ಟಿದೆ. ಬಿಸಿಲ ಝಳ ತಾಳಲಾರದೇ ಮರದ ಎಲೆಗಳೂ ಕೂಡ ಮುದುಡಿ ಹೋಗಿವೆ.

ಮಾವಿನ ಬೆಳೆ ಬರುತ್ತೆ ಅಂತ ಕನಸು ಕಟ್ಟಿದ್ದ ರೈತರ ಕನಸು ನುಚ್ಚುನೂರಾಗಿ ಹೋಗಿದೆ. ಮುಂಗಾರು ಚೆನ್ನಾಗಿ ಆಗುತ್ತೆ, ಮಾವು ಬೆಳೆಗಾರರು ಆದಷ್ಟು ಪ್ರಯತ್ನ ಪಡಿ ಎಂದಿದ್ದಕ್ಕೆ ರೈತರು ಸಾಲಸೋಲ ಮಾಡಿ ಮಾವಿನ ತೋಟಕ್ಕೆ ದುಡ್ಡು ಸುರಿದು ಕಷ್ಟ ಪಟ್ಟಿದ್ದರು. ಆದರೆ ಆ ಕಡೆ ಮುಂಗಾರು ಆಗದೇ, ಈ ಕಡೆ ಬಿಸಿಲು ಸಹ ಕಡಿಮೆ ಆಗದೇ ಇಡೀ ಮಾವಿನ ಬೆಳೆ ನಾಶವಾಗಿದೆ ಎನ್ನುತ್ತಾರೆ ಸ್ಥಳೀಯ ಮಾವು ಬೆಳೆಗಾರ ಶಿವರಾಜು.

ಜಿಲ್ಲೆಯಲ್ಲಿ ಒಂದೇ ಒಂದು ಮಳೆಯಾಗದ ಹಿನ್ನೆಲೆ ಪರಿಸ್ಥಿತಿ ಅರಿತಿದ್ದ ಜಿಲ್ಲಾಡಳಿತ ವಸ್ತುಸ್ಥಿತಿ ಅರಿಯಲು ಗ್ರೌಂಡ್ ಜೀರೋಗೆ ತೆರಳಿ ಸರ್ವೇ ಮಾಡಿದ್ದು, ಎನ್ ಡಿ ಆರ್ ಎಫ್ ತಂಡದ ಜೊತೆ ಸೇರಿ ನಷ್ಟವಾಗಿರುವ ಒಟ್ಟು ಅಂಕಿಅಂಶವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಬೆಳೆ ವಿಮೆ ಮಾಡಿಸಿಕೊಂಡಿರುವ ರೈತರು ಎಕರೆಗೆ 20 ರಿಂದ 22 ಸಾವಿರ ರೂಪಾಯಿಯಷ್ಟು ಪರಿಹಾರ ಸಿಗುವ ಭರವಸೆಯಲ್ಲಿದ್ದರೆ, ವಿಮೆ ಮಾಡಿಸಿಕೊಳ್ಳದ ಸಣ್ಣಪುಟ್ಟ ರೈತರು ಖಾಲಿ ಕಣ್ಣುಗಳಿಂದ ಆಕಾಶ ನೋಡುತ್ತಿದ್ದಾರೆ.

## ಬೆದರಿಕೆ

ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ಸ್ಥಳಾಂತರಿಸಲಾಗಿದೆ ಮತ್ತು ಬಾಂಬ್ ಮತ್ತು ಶ್ವಾನ ದಳದೊಂದಿಗೆ ಪೊಲೀಸ್ ತಂಡಗಳು ಶಾಲೆಗಳನ್ನು ತಲುಪಿವೆ. ಕಳೆದ ವಾರ ದೆಹಲಿ ಮತ್ತು ಅಹಮದಾಬಾದ್‌ನಲ್ಲಿ ಇದೇ ರೀತಿಯ ಘಟನೆ ನಡೆದಿದೆ. ದೆಹಲಿಯ 131 ಶಾಲೆಗಳು, ಗುರುಗ್ರಾಮ್‌ನಲ್ಲಿ ಐದು ಮತ್ತು ನೋಯ್ಡಾದ ಮೂರು ಶಾಲೆಗಳಿಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆಗಳು ಬಂದಿದ್ದವು.

ನಾಲ್ಕು-ಐದು ಶಾಲೆಗಳಿಗೆ ಬಾಂಬ್ ಬೆದರಿಕೆಗಳು ಬಂದಿವೆ, ಪೊಲೀಸರು ಶಾಲೆಗಳನ್ನು ತಲುಪಿದ್ದಾರೆ. ಬಾಂಬ್ ಬೆದರಿಕೆ ಇಮೇಲ್‌ಗಳನ್ನು ಕಳುಹಿಸಿದವರನ್ನು ಗುರುತಿಸಲು ಪೊಲೀಸರು ಈಗ ಪ್ರಯತ್ನಿಸುತ್ತಿದ್ದಾರೆ ಎಂದು ಪೊಲೀಸ್ ಆಯುಕ್ತ ಬಿಜು ಜಾರ್ಜ್ ಹೇಳಿದ್ದಾರೆ.

ಭಾನುವಾರ ದೆಹಲಿಯ ಬುರಾರಿ ಆಸ್ಪತ್ರೆ ಹಾಗೂ ಮಂಗೋಲ್ ಪುರಿಯಲ್ಲಿರುವ ಸಂಜಯ್ ಗಾಂಧಿ ಆಸ್ಪತ್ರೆಗೆ ಬಾಂಬ್ ಬೆದರಿಕೆ ಕರೆಗಳು ಬಂದಿವೆ.

ಶಾಲಾ ಕಟ್ಟಡದಲ್ಲಿ ಬಾಂಬ್ ಇರಿಸಲಾಗಿದೆ ಎಂದು ಅಪರಿಚಿತ ವ್ಯಕ್ತಿಯೊಬ್ಬರು ಪ್ರಾಂಶುಪಾಲರಿಗೆ ಇ-ಮೇಲ್ ಕಳುಹಿಸಿದ್ದಾರೆ. ಈ ಮಾಹಿತಿ ಬಂದ ತಕ್ಷಣ ಶಾಲೆಗಳಲ್ಲಿ ಆತಂಕ ಮನೆ ಮಾಡಿತ್ತು ತಕ್ಷಣವೇ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ಶಾಲೆಗಳಿಂದ ಸ್ಥಳಾಂತರಿಸಲಾಯಿತು.

## ಬಿಟ್ರು

ಮೌಲಾನಾ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂದು ಹೇಳಲಾಗುತ್ತಿದೆ. ಮೌಲಾನಾ ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೋಗಳನ್ನು ತೋರಿಸಿ ಅತ್ಯಾಚಾರವೆಸಗುತ್ತಿದ್ದರಯ, ಇದರಿಂದ ಬೇಸರಗೊಂಡ ಮಕ್ಕಳು ಈ ದೊಡ್ಡ ಹೆಜ್ಜೆ ಇಟ್ಟಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್‌ನ ಸುದ್ದಿ ಪ್ರಕಾರ, ಈ ಘಟನೆ ಏಪ್ರಿಲ್ 26 ರ ರಾತ್ರಿ ನಡೆದಿದೆ. ಮೂವತ್ತು ವರ್ಷದ ಮೌಲಾನಾ ಮೊಹಮ್ಮದ್ ತಾಹಿರ್ ಎಂಬಾತನನ್ನು ಹೊಡೆದು ಕೊಂದಿದ್ದಾರೆ.

ಮೌಲಾನಾ ಮೊಬೈಲ್ ನಲ್ಲಿ ಮಕ್ಕಳಿಗೆ ಅಶ್ಲೀಲ ಚಿತ್ರಗಳನ್ನು ತೋರಿಸಿ ಬಳಿಕ ಅತ್ಯಾಚಾರ ಎಸಗುತ್ತಿದ್ದರು. ಕಳೆದ ನಾಲ್ಕು ವರ್ಷಗಳಿಂದ ಇದನ್ನೇ ಮಾಡುತ್ತಿದ್ದರು. ಇದರಿಂದ ಮನನೊಂದ ಮಕ್ಕಳು ರಾಯತಾದಲ್ಲಿ ನಿದ್ರೆ ಮಾತ್ರೆ ಬೆರೆಸಿ ಮೌಲಾನಾಗೆ ನೀಡಿದ್ದಾರೆ.

ಮಲಗಿದ್ದ ಆತನ ತಲೆಗೆ ದೊಣ್ಣೆಯಿಂದ ಹೊಡೆದಿದ್ದಾರೆ, ಬಳಿಕ ಹಗ್ಗದಿಂದ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ. ಅಜ್ಮೀರ್‌ನ ಕಾಂಚನ್ ನಗರದಲ್ಲಿರುವ ಮೊಹಮ್ಮದಿ ಮದೀನಾ ಮಸೀದಿಗೆ ಸೇರಿದವರು. ಮೌಲಾನಾ ತಮ್ಮನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದರು ಎಂದು ಮಕ್ಕಳು ಹೇಳಿದ್ದು, ಕೊಲೆ ಮಾಡಿದ್ದನ್ನು ಒಪ್ಪಿಕೊಂಡರು. ಇದೀಗ ಈ ಸಂಬಂಧ 6 ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿದೆ.

ಲೈಂಗಿಕ ದೌರ್ಜನ್ಯದ ಬಗ್ಗೆ ಯಾರಿಗಾದರೂ ಹೇಳಲು ಪ್ರಯತ್ನಿಸಿದರೆ, ಮೌಲ್ವಿ ತಮ್ಮನ್ನು ಕೊಲ್ಲುವುದಾಗಿ ಬೆದರಿಕೆ ಹಾಕುತ್ತಿದ್ದರು ಎಂದು ಮಕ್ಕಳು ಹೇಳಿದ್ದಾರೆ. ಮೌಲಾನಾ ಜೊತೆ 15 ಮಕ್ಕಳು ವಾಸಿಸುತ್ತಿದ್ದರು. ಅದರಲ್ಲಿ 10 ಮಕ್ಕಳು ಈದ್ ದಿನ ತಮ್ಮ ಮನೆಗೆ ಹೋಗಿದ್ದರು. ಮತ್ತು ಕೇವಲ ಐದು ಮಕ್ಕಳು ಮಾತ್ರ ಅಲ್ಲಿಯೇ ಇದ್ದರು.

## ರೈತ ಬಲಿ

ಮೃತರನ್ನು ಚಿಕ್ಕೋಡಿ ತಾಲೂಕಿನ ಸದಲಗಾ ಗ್ರಾಮದ ನಿವಾಸಿ ಮಹಾದೇವ ಪುನ್ನಪ್ಪ ಖುರೆ (72) ಎಂದು ಗುರುತಿಸಲಾಗಿದೆ.

ಶುಕ್ರವಾರ (ಮೇ 10ರಂದು) ಮಹಾದೇವ ಖುರೆ ನದಿ ತೀರದ ಪ್ರದೇಶದಲ್ಲಿನ ತಮ್ಮ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದರು. ಕೃಷಿ ಕೆಲಸ ಮುಗಿಸಿ ಸ್ನಾನ ಮಾಡಲು ನದಿಗೆ ತೆರಳಿದ್ದರು. ನದಿಯಲ್ಲಿ ಕೆಲಹೊತ್ತು ಈಜಿಕೊಂಡು ಮರಳಿ ನದಿಯ ದಡಕ್ಕೆ ಬರುತ್ತಿದ್ದಾಗ ಮೊಸಳೆ ಕಾಲು ಹಿಡಿದು ನೀರಿನೊಳಗೆ ಎಳೆದೊಯ್ದಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ರೈತ ಮಹದೇವರ ಎಡತೊಡೆಯ ಮೇಲೆ ಗಾಯದ ಗುರುತು ಇತ್ತು. ಶನಿವಾರ ರಮೇಶ ಪ್ರಧಾನ ಎಂಬುವವರ ಜಮೀನಿನ ಬಳಿಯ ನದಿ ದಂಡೆಯಲ್ಲಿ ಮೃತದೇಹ ಪತ್ತೆಯಾಗಿತ್ತು. ಶವವನ್ನು ಸಾಮಾಜಿಕ ಕಾರ್ಯಕರ್ತ ಸುಕುಮಾರ್ ಉಗಾರೆ ಮತ್ತು ಇತರ ಗ್ರಾಮಸ್ಥರು ನದಿ ದಡದಿಂದ ಹೊರತೆಗೆದಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಸದಲಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರಣೋತ್ತರ ಪರೀಕ್ಷೆಯ ವರದಿಯ ನಂತರ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ದೂದ್ ಗಂಗಾ ನದಿಯಲ್ಲಿ ಮೊಸಳೆಗಳ ಸಂಖ್ಯೆ ವಿಪರೀತ ಏರಿಕೆ ಕಂಡಿದೆ. ಈ ಘಟನೆ ನಂತರ ರೈತರಲ್ಲಿ ಮೊಸಳೆಗಳ ಭಯ ಹೆಚ್ಚಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

# ಜಲಮಂಡಳಿ ಅರೆಬರೆ ಕಾಮಗಾರಿಯಿಂದ ನಿವಾಸಿಗಳಿಗೆ ಸಂಕಷ್ಟ

**ಬೆಂಗಳೂರು:** ಬೇಸಿಗೆ ಮುಗಿದು ಮಳೆಗಾಲದ ಸುಳಿವು ಸಿಗ್ತಿದ್ರು, ರಾಜ್ಯ ರಾಜಧಾನಿಯ ಜನರಿಗೆ ಗುಂಡಿ ಕಂಟಕ ತಪ್ಪಿಲ್ಲ, ಜಲಮಂಡಳಿ ಮಾಡಿದ ಯಡವಟ್ಟಿಗೆ ಆ ಏರಿಯಾ ಜನ ನಿತ್ಯ ಸಂಕಷ್ಟ ಅನುಭವಿಸುವಂತಾಗಿದೆ. ಜಲಮಂಡಳಿ ಪೈಪ್ ಲೈನ್ ಕಾಮಗಾರಿಗೆ ತೆಗೆದಿದ್ದ ರಸ್ತೆಗೆ ಟಾರ್ ಹಾಕದೇ ಬಿಟ್ಟಿರುವುದರಿಂದ ಅಪಘಾತಗಳ ಜೊತೆಗೆ ಮಳೆಯಿಂದ ಅವಾಂತರ ಸೃಷ್ಟಿಯಾಗ್ತಿರೋದು ಜನರನ್ನ ಹೈರಾಣಾಗಿಸಿದೆ.

ಪೈಪ್ ಲೈನ್ ಕಾಮಗಾರಿಗೆ ರಸ್ತೆ ಅಗೆದಿದ್ದ ಜಲಮಂಡಳಿಯ ಕೆಲಸಕ್ಕೆ ರಾಜಾಜಿನಗರದ ಮಂಜುನಾಥನಗರ ನಿವಾಸಿಗಳು ಸಂಕಷ್ಟ ಅನುಭವಿಸುವಂತಾಗಿದೆ. ಪೈಪ್ ಲೈನ್ ಕಾಮಗಾರಿ ಬಳಿಕ ರಸ್ತೆ ಅಗೆದ ಜಾಗದಲ್ಲಿ ಜಲ್ಲಿ ತುಂಬಿ ಹೋಗಿದ್ದರು. ಆದರೆ ಮಳೆ ಬಂದಾಗ ಜಲ್ಲಿ ಕೂಡ ಕೊಚ್ಚಿ ಹೋಗಿದ್ದು ಮಳೆನೀರು ನಿಂತು ಸಮಸ್ಯೆ ಅನುಭವಿಸುವಂತಾಗಿದೆ. ಅತ್ತ ರಸ್ತೆಯಲ್ಲೇ ಹಳ್ಳ ಬಿದ್ದಿರುವುದರಿಂದ ಹಲವು ವಾಹನ ಸವಾರರು ಬಿದ್ದು ಗಾಯವಾಗ್ತಿದ್ದು, ಜಲಮಂಡಳಿಯ ವಿರುದ್ಧ ಜನರು ಕಿಡಿಕಾರುತ್ತಿದ್ದಾರೆ.

# ಮೌಲ್ಯ ಸಾರಿದ ಮೇರು ನಟ ರಾಜ್‌ಕುಮಾರ್

**ಮೈಸೂರು:** ಮೇರು ನಟ ರಾಜ್‌ಕುಮಾರ್ ಅವರು ಚಲನಚಿತ್ರಗಳ ಮೂಲಕ ಕೌಟುಂಬಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ನೀಡಿ ಹೋಗಿದ್ದಾರೆ ಎಂದು ಕವಯತ್ರಿ ಲತಾ ರಾಜಶೇಖರ್ ಸ್ಮರಿಸಿದರು.

ಇಂಚರ ಸಾಂಸ್ಕೃತಿಕ ಪ್ರತಿಷ್ಠಾನ, ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ಸಹಯೋಗದಲ್ಲಿ ಇಲ್ಲಿನ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಡಾ.ರಾಜ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅವರು ಆಗರ್ಭ ಶ್ರೀಮಂತ ಮನೆತನದಿಂದ ಬಂದವರಲ್ಲ. ಸಾಧಾರಣ ಕುಟುಂಬದಿಂದ ಬಂದು ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಬಹಳ ವಿದ್ಯಾಭ್ಯಾಸ ಮಾಡದೇ ಇದ್ದರೂ ಕನ್ನಡವನ್ನು ಸ್ಪಷ್ಟವಾಗಿ ಬಳಸುತ್ತಿದ್ದರು; ಅಪಾರ ಜ್ಞಾನವನ್ನು ಹೊಂದಿದ್ದರು. ತಮ್ಮ ನಟನೆಯ ಮೂಲಕ ಈ ನಾಡು ದೇಶಕ್ಕೆ ಅಚ್ಚಳಿಯದ ಕೊಡುಗೆಗಳನ್ನು ಅವರು ನೀಡಿದ್ದಾರೆ ಎಂದು ನೆನೆದರು.



ಯಾವುದೇ ಪಾತ್ರವಾದರೂ ಸರಿಯೇ ಜೀವ ತುಂಬಿ ನಟಿಸುತ್ತಿದ್ದರು. ಪರಕಾಯ ಪ್ರವೇಶ ಅವರಿಗೆ ಸಿದ್ಧಿಸಿತ್ತು. ಸದಭಿರುಚಿಯ ಚಲನಚಿತ್ರಗಳನ್ನು ನೀಡುವ ಜೊತೆಗೆ ನಾಡು-ನುಡಿ, ನೆಲ-ಜಲದ ಹಿತರಕ್ಷಣೆಗಾಗಿ ಶ್ರಮಿಸುತ್ತಿದ್ದರು. ಕನ್ನಡಪರ ಹೋರಾಟದಲ್ಲೂ ಮುಂದಿದ್ದರು ಎಂದು ತಿಳಿಸಿದರು.

ಅಭಿಮಾನಿಗಳನ್ನೇ ದೇವರು ಎಂದ ವಿನಯವಂತ. ಸ್ಟಾರ್ ನಟನಾದರೂ ಅಹಂಕಾರ ಇರಲಿಲ್ಲ. ಸರಳವಾಗಿ ಜೀವನ ನಡೆಸಿದರು. ಅವರಿಗೆ ಸಂದ ಪ್ರಶಸ್ತಿಗಳಿಗೆ ಅವರಿಂದಾಗಿ ಹೆಚ್ಚಿನ ಗೌರವ ಬಂದಿತು. ಅವರ ಹೆಸರಿನಲ್ಲಿ ಪ್ರಶಸ್ತಿ ಪಡೆಯುವುದು ಹೆಮ್ಮೆ ಹಾಗೂ ಅಭಿಮಾನದ ಸಂಗತಿಯೇ ಸರಿ. ಮಹಾನ್ ಸಾಧಕ ಹಾಗೂ ಅಭಿಜಾತ ಕಲಾವಿದರಾದ ಅವರಿಗೆ ಅವರೇ ಸಾಟಿ ಎಂದು ಹೇಳಿದರು. ರಂಗಕರ್ಮಿ ರಾಜಶೇಖರ ಕದಂಬ ಮಾತನಾಡಿ, ರಾಜ್‌ಕುಮಾರ್ ಎನ್ನುವುದು ಸಂಚಲನ ಮೂಡಿಸುವ ಹೆಸರು. ಅವರು ನಮ್ಮ ಕರ್ನಾಟಕದವರು ಹಾಗೂ ಅವಿಭಜಿತ ಮೈಸೂರು ಜಿಲ್ಲೆಯವರು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಅವರು ವಿಶ್ವ ಕಲಾವಿದ ಎಂದು ಬಣ್ಣಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರನ್ನು ಅಭಿನಂದಿಸಿದ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಮಾಜದ ಒಳಿತಿಗೆ ಕೆಲಸ ಮಾಡುವವರನ್ನು ಗುರುತಿಸಿ ಸನ್ಮಾನಿಸುವುದು ಹೆಮ್ಮೆಯ ಕಾರ್ಯ. ಸಾಧಕರನ್ನು ಸನ್ಮಾನಿಸಿದರೆ ಮತ್ತಷ್ಟು ಸಾಧನೆಗೆ ಉತ್ತೇಜನ ನೀಡಿದಂತಾಗುತ್ತದೆ ಎಂದರು.ಕಸಾಪ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ ಅವರು ರಾಜ್‌ಕುಮಾರ್ ಕುರಿತು ಉಪನ್ಯಾಸ ನೀಡಿದರು. ವಿವಿಧ ಕ್ಷೇತ್ರದ ಸಾಧಕರಾದ ಎನ್. ಧನಂಜಯ (ಹವ್ಯಾಸಿ ರಂಗಭೂಮಿ), ಡಾ.ಪೂರ್ಣಿಮಾ ಮಧುಸೂದನ (ವೈದ್ಯಕೀಯ), ಕೆ. ರಮೇಶ್ (ಸಾಹಿತ್ಯ), ಆರ್.ಡಿ. ಕುಮಾರ್ (ಕಾನೂನು ಮತ್ತು ಸಂಘಟನೆ), ರಮೇಶ್ ಕುಮಾರ್ (ಗಾಯನ) ಮತ್ತು ಭಾಗ್ಯಲಕ್ಷ್ಮಿ (ಭರತನಾಟ್ಯ) ಅವರಿಗೆ ಡಾ.ರಾಜ್ ಸಾಧನಾ ಪ್ರಶಸ್ತಿ?ಯನ್ನು ಪ್ರದಾನ ಮಾಡಲಾಯಿತು.

## ಕಾಯಕಕ್ಕೆ ಮಹತ ನೀಡಿದ ಬಸವಾದಿ ಶರಣರು

ಹುಳಿಯಾರು: ವಿಶ್ವಗುರು ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವ ಹಾಗೂ ಸಮಸಮಾಜ ನಿರ್ಮಾಣಕ್ಕೆ ಒತ್ತು ನೀಡುತ್ತಿದ್ದರು ಎಂದು ಪ್ರಾಚಾರ್ಯ ಪ್ರೊ.ಎಸ್.ಸಿ.ವೀರಣ್ಣ ಅವರು ತಿಳಿಸಿದರು. ಹುಳಿಯಾರು-ಕೆಂಕೆರೆ ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವಗುರು ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 12ನೇ ಶತನಮಾನದಲ್ಲಿ ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ ಸೇರಿದಂತೆ ಅನೇಕ ಅನಿಷ್ಟ ಪದ್ದತಿಗಳ ವಿರುದ್ಧ ಧ್ವನಿಯೆತ್ತುವುದರ ಜೊತೆಗೆ ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನವರು ಶ್ರಮಿಸಿದ್ದಾರೆ. ಅಂದಿನ ಕಾಲದಲ್ಲಿಯೇ ಅನೇಕ ಶಿವಶರಣರನ್ನು ಒಳಗೊಂಡ ಸಭೆ ಮಾಡಿ ಸಮಾಜದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಪಂಚದ ಮೊದಲ ಸಂಸತ್ ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ಪ್ರೊ.ಮಲ್ಲಿಕಾರ್ಜುನ್ ಮಾತನಾಡಿ ಬಸವಣ್ಣ ಅವರು ವಚನಗಳ ಮೂಲಕ ಸಮಾಜವನ್ನು ಸರಿದಾರಿಗೆ ತರುವಲ್ಲಿ ಬಹುವಾಗಿ ಶ್ರಮಿಸಿದ್ದರು. ತಮ್ಮ ಜೀವನದುದ್ದಕ್ಕೂ ಶರಣ ತತ್ವದಾರ್ಶಗಳನ್ನು ಜಗತ್ತಿಗೆ ಸಾರಿದವರಲ್ಲಿ ಬಸವೇಶ್ವರರು ಮೊದಲಿಗರಾಗಿದ್ದರು. ಬಸವಣ್ಣನವರು ಹಾಕಿಕೊಟ್ಟ ಶರಣತತ್ವಗಳಲ್ಲಿ ಎಲ್ಲರೂ ವಿಶ್ವಾಸವಿಟ್ಟು ಜೀವನ ಸಾಗಿಸಬೇಕು ಎಂದು ಸಲಹೆ ನೀಡಿದರು. ಉಪನ್ಯಾಸಕರಾದ ಡಾ.ಬಿ.ಜಯಶ್ರೀ, ಡಾ.ಸುಷ್ಮಾ ಎಲ್. ಬೀರಾದರ್, ಕೆ.ಡಿ.ರಮೇಶ್ ಭಾಗವಹಿಸಿದ್ದರು.



# ವಿರೋಧ ಪಕ್ಷದವರು ಯಾರನ್ನೂ ಸಮಾಧಿ ಮಾಡುವುದಿಲ್ಲ

**ಮೈಸೂರು:** ವಿರೋಧ ಪಕ್ಷದವರು ಯಾರನ್ನೂ ಸಮಾಧಿ ಮಾಡುವುದಿಲ್ಲ ಪ್ರಧಾನಿಗಳನ್ನು ರಾಜಕೀಯವಾಗಿ ವಿರೋಧ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮೈಸೂರಿನ ತಮ್ಮ ನಿವಾಸದಲ್ಲಿ ಮಾಧ್ಯಮ ದವರೊಂದಿಗೆ ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನಿನ್ನೆ ವಿರೋಧಪಕ್ಷಗಳು ನನ್ನನ್ನು ಸಮಾಧಿ ಮಾಡಲು ಹೊರಟಿವೆ. ನೀವು ನನ್ನನ್ನು ಕಾಪಾಡಬೇಕು ಎಂದು ಜನತೆಯಲ್ಲಿ ಮಾಡಿರುವ ಮನವಿಗೆ ಪ್ರತಿಕ್ರಿಯೆ ನೀಡಿದ ಅವರು ಮೇಲಿನಂತೆ ಪ್ರತಿಕ್ರಿಯೆ ನೀಡಿದರು. ನರೇಂದ್ರ ಮೋದಿ ಹತ್ತು ವರ್ಷ ಪ್ರಧಾನಿಗಳಾಗಿ ಬಡವರ ಪರವಾಗಿ ಏನೂ ಮಾಡಿಲ್ಲ ಎನ್ನುವುದು ಹಾಗು ಸುಳ್ಳಿನ ಸರದಾರ ಎನ್ನುವುದು ನಮ್ಮ ಆರೋಪ. ಜನರಿಗೆ ನೀಡಿದ್ದ ಯಾವ ಯಾವ ಭರವಸೆಗಳನ್ನು ಈಡೇರಿಸಿಲ್ಲ. ರಾಜಕೀಯವಾಗಿ ಅವರನ್ನು ಸೋಲಿಸಬೇಕೆನ್ನುವುದು ವಿರೋಧ ಪಕ್ಷಗಳ ಗುರಿ. ಏಕೆಂದರೆ ಈ ದೇಶ ಆರ್ಥಿಕ ಹಾಗೂ ಬಡವರ ಅಭಿವೃದ್ಧಿ ಆಗಿಲ್ಲ ಎಂದರು.



ಮೇಲಕ್ಕೇರಿದವರು ಕೆಳಕ್ಕೆ ಇಳಿಯಲೇಬೇಕು ಪ್ರಧಾನಿಗಳು ಸೋಲುತ್ತೇವೆಂದು ಹತಾಶರಾಗಿ ಈ ರೀತಿ ಮಾತನಾಡು ತ್ತಿದ್ದಾರೆ. ಅವರ ಭಾವನಾತ್ಮಕ ಆಟ ಜನರಿಗೆ ಗೊತ್ತಾಗಿದೆ. ಅವರು ಸುಳ್ಳು ಹೇಳುವುದು, ಭಾವನಾತ್ಮಕವಾಗಿ ಶೋಷಣೆ ಮಾಡುವುದು ಜನರಿಗೆ ಗೊತ್ತಾಗಿದೆ. ಜನರಿಗೆ ಗೊತ್ತಾದ ಮೇಲೆ ಪುನ: ಅದೇ ತಪ್ಪನ್ನು ಮಾಡುವುದಿಲ್ಲ. ಮೇಲಕ್ಕೇರಿದವರು ಕೆಳಕ್ಕೆ ಇಳಿಯಲೇಬೇಕು ಎಂದರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ರಾಜ್ಯದಲ್ಲಿ ಬರಗಾಲ ಇರುವುದರಿಂದ ರೈತರ ಸಾಲ ಮನ್ನಾ ಮಾಡಬೇಕು ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಅವರು ಹಿಂದೆ ಸಾಲ ಮನ್ನಾ ಮಾಡಿ ಎಂದಾಗ ನಮ್ಮ ಬಳಿ ಪ್ರಿಂಟಿಂಗ್ ಮಶೀನ್ ಇಲ್ಲ ಎಂದಿದ್ದರು. ಇವರಿಗೆ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

# ಮಾನವ ಏಳ್ಗೆಗೆ ಶ್ರಮಿಸಿದ ಬಸವಣ್ಣ

## ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅಭಿಮತ

**ಮೈಸೂರು:** ಬಸವಣ್ಣನವರು ಮಾನವ ಏಳಿಗೆಗೆ ಶ್ರಮಿಸಿದ ಮಹಾನ್ ಮಾನವತಾವಾದಿಗಳು ಎಂದು ಮೈಸೂರು ಶ್ರೀಸುತ್ತೂರು ಮಠದಲ್ಲಿ ಇಂದು ಶುಕ್ರವಾರ ಅಕ್ಷಯ ತೃತೀಯದಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಬಸವ ಜಯಂತಿಯಲ್ಲಿ ಶ್ರೀ ಜಯರಾಜೇಂದ್ರರು ಮಾತನಾಡುತ್ತಾ ತಿಳಿಸಿದರು.



ಭಾರತ ದೇಶದಲ್ಲಿ ಅನೇಕ ಸಂತರು, ಮಹಾತ್ಮರು, ಶರಣರು, ದಾಸವರಣ್ಯೇರು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದಾರೆ. ಜನರನ್ನು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿದ್ದಾರೆ. ಅಂತಹವರಲ್ಲಿ ಬಸವಣ್ಣನವರು ಅಗ್ರಗಣ್ಯರು. ಈ ಭೂಮಿಯ ಮೇಲೆ ಮನುಷ್ಯ ಜನ್ಮ ತಾಳುವುದು ಬಹು ದೊಡ್ಡದು. ಭಗವಂತ ಮನುಷ್ಯನಿಗೆ ಅಪರೂಪದ ಕಲೆಯನ್ನು ನೀಡಿದ್ದಾನೆ, ಅದೇ ಯಾವ ಜೀವಿಗೂ ಇಲ್ಲದ ಮಾತನಾಡುವ ಕಲೆ. ಅದನ್ನು ಬಸವಣ್ಣನವರು ಹೇಗೆ ಬಳಸಬೇಕೆಂಬದನ್ನು ಅವರ ವಚನದಲ್ಲಿ ಅರ್ಥಗರ್ಭಿತವಾಗಿ ತಿಳಿಸಿದ್ದಾರೆ. ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ಅಂತರಂಗದಲ್ಲಿರುವ ಮಾತೇ ಬಹಿರಂಗದಲ್ಲೂ ಬರಬೇಕು. ನಡೆ ಮತ್ತು ನುಡಿ ಎರಡು ಒಂದೇ ಆಗಿರಬೇಕು. ಯಾರನ್ನೋ ಮೆಚ್ಚಿಸಲು ಮಾತನಾಡದೇ ನಮ್ಮ ಅಂತರಂಗ ಒಪ್ಪಿಕೊಳ್ಳುವ ಮಾತಗಳನ್ನಾಡಬೇಕು ಎಂದಿದ್ದಾರೆ ಎಂದು ಹೇಳಿದರು.

ಲಕ್ಕರಸನಪಾಳ್ಯ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಹೇಮಂತಕುಮಾರ್ ರವರು ಸಮಾಜದಲ್ಲಿ ಸಮಾನತೆಯನ್ನು ಬಿತ್ತಿದ ಮಹಾತ್ಮರು ಬಸವಣ್ಣನವರು. ಯಾವುದೇ ಜಾತಿ, ಮತ, ವರ್ಣ, ಲಿಂಗ ಭೇದಗಳಿಲ್ಲಿದೆ ಮನುಷ್ಯರೆಲ್ಲರೂ ಒಂದೇ ಎಂದು ಸಾರಿದರು. ದೇವರು ಬೇರೆಲ್ಲೂ ಇಲ್ಲ, ನಮ್ಮೊಳಗೆಯೇ ಇದ್ದಾನೆ ಎಂಬುದನ್ನು ಅರುಹಿದ್ದಾರೆ ಎಂದು ತಿಳಿಸಿದರು.

ಭದ್ರಾವತಿ ಶ್ರೀ ಬಿಳಕಿ ಹಿರೇಮಠದ ಶ್ರೀಗುರುಪ್ರಸಾದ ದೇವರು 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ವಚನ ಕ್ರಾಂತಿ 21ನೇ ಶತಮಾನದ ಜೀವನದ ಎಲ್ಲ ಜಂಜಾಟಗಳಿಗೂ ಪರಿಹಾರವನ್ನು ಒದಗಿಸುತ್ತಿವೆ. ಬಸವಾದಿ ಶರಣರ ವಚನಗಳು ಸಾರ್ವಕಾಲಿಕವಾದವು. ವ್ಯಕ್ತಿಗಿಂತ ವ್ಯಕ್ತಿತ್ವದ ಪೂಜೆ ಮುಖ್ಯ. ಭಾವಚಿತ್ರವನ್ನು ಪೂಜಿಸುವುದರ ಜೊತೆಗೆ ಅವರ ಚರಿತ್ರೆಯನ್ನು ಪೂಜಿಸಬೇಕು. ಗುರುಹಿರಿಯರನ್ನು ಗೌರವಿಸಬೇಕು. ಅಂತರಂಗ ಮತ್ತು ಬಹಿರಂಗ ಎರಡು ಒಂದೇ ತೆರನಾಗಿರಬೇಕು ಎಂದು ಹೇಳಿದರು. ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಪುಷ್ಪಾಂಜಲಿ ಸಲ್ಲಿಸಲಾಯಿತು. ಕೆ.ಜಿ. ವಿನುತ ಮತ್ತು ಸುಮಂಗಲ ಜಂಗಮಶೆಟ್ಟಿಯವರು ವಚನಗಾಯನ ನಡೆಸಿಕೊಟ್ಟರು. ಗೋಡೆಕೆರೆ ಶ್ರೀ ಸ್ಥಿರ ಪಟ್ಟಾಧ್ಯಕ್ಷರ ಮಠದ ಶ್ರೀ ಸಿದ್ಧೇಶ ದೇವರು ಸ್ವಾಗತಿಸಿದರು. ಶ್ರೀಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಶ್ರೀಮಠದ ಗುರುಕುಲ ಸಾಧಕರು ಹಾಗೂ ಸೇವಾ ಸಿಬ್ಬಂದಿಗಳು, ಭಕ್ತಾದಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಶಂಕರ ಜಯಂತಿ ಆಚರಣೆ

**ಕೋಲಾರ:** ಜಿಲ್ಲಾಡಳಿತ, ಜಿಪಂ, ಕನ್ನಡ ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಶ್ರೀ ಶಂಕರಾಚಾರ್ಯರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಶಂಕರ ಜಯಂತಿ ಅಂಗವಾಗಿ ತತ್ವಜ್ಞಾನಿಗಳ ಜಯಂತಿ ಆಚರಿಸಲಾಯಿತು. ಜಿಲ್ಲಾಮಟ್ಟದ ಯಾವುದೇ ಅಧಿಕಾರಿಗಳ ಗೈರು ಎದ್ದು ಕಾಣುತ್ತಿದ್ದ ಕಾರ್ಯಕ್ರಮದಲ್ಲಿ ಹಾಜರಿದ್ದ ನಗರದ ಕೋಟೆ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಜೆ.ಎನ್. ರಾಮಕೃಷ್ಣ, ಅಸತ್ಯವನ್ನು ಸತ್ಯವೆಂದು ಭಾವಿಸಿದಾಗ ದುಃಖದ ಪರಂಪರೆ ಕಟ್ಟಿಟ್ಟ ಬುತ್ತಿ . ಇದಕ್ಕೆ ಪರಿಹಾರವೇ ಜ್ಞಾನಿ ಆಗುವುದು. ಉಪನಿಷತ್ ಸಾರವೇ ಆಗಿರುವ ತತ್ವಮಸಿ, ಅಹಂ ಬ್ರಹ್ಮಾಸ್ಮಿ, ಅಯಮಾತ್ಮ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ ಈ ಮಹಾ ವಾಕ್ಯಗಳ ಶ್ರವಣ, ಮನನ ಮತ್ತು ಅನುಷ್ಠಾನಗಳ ಮೂಲಕ ಯೋಗ್ಯ ಗುರುವಿನ ಮಾರ್ಗದರ್ಶನದಲ್ಲಿ ನಾನು ಯಾರು ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳುವುದು ನಮ್ಮೆಲ್ಲರ ಜೀವನದ ಧ್ಯೇಯವಾಗಬೇಕು ಎಂಬುದೇ ಭಗವತ್ಪಾದಾಚಾರ್ಯ ಶ್ರೀಶಂಕರರ ಸಾರ್ವಕಾಲಿಕ ಸಂದೇಶವೆಂದು ತಿಳಿಸಿದರು. ದೇಶ ಪರ್ಯಟನೆ ಮಾಡಿ ಅಖಂಡ ಭಾರತ ಕಲ್ಪನೆಯನ್ನು ಸಾಕಾರಗೊಳಿಸಿದ ಕೀರ್ತಿ ಶಂಕರರದು ಎಂದ ಅವರು, ಹಿಂದೂ ಧರ್ಮದ ಉನ್ನತಿಗಾಗಿ ಶೃಂಗೇರಿ, ಕೇದಾರ, ಜಗನ್ನಾಥಪುರಿ, ದ್ವಾರಕ ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ ಆತ್ಮಜ್ಞಾನದ ಮಾರ್ಗ ತೋರಿಸಿದ್ದಾರೆ ಎಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ಶೇಷಮ್ಮ, ಶೃಂಗೇರಿ ಶಂಕರ ಮಠ, ಶಂಕರಸೇವಾ ಸಮಿತಿ ಪದಾಧಿಕಾರಿಗಳು, ಶಂಕರರ ಭಕ್ತರು, ವಿಪ್ರ ಸಮಾಜದ ನೂರಾರು ಮಂದಿ ಪಾಲ್ಗೊಂಡಿದ್ದರು.



# ಭ್ರೂಣ ಹತ್ಯೆ: ಆರೋಪಿ ಶೃತಿ ಸೆರೆ

**ಪಾಂಡವಪುರ:** ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬಳನ್ನು ಪೊಲೀಸರು ಬಂಧಿಸಿದ್ದಾರೆ, ಕೆ.ಆರ್.ಪೇಟೆ ಪಟ್ಟಣದ ಜಗದೀಶಾಚಾರ್ ಅವರ ಪತ್ನಿ ಶೃತಿ ಬಂಧಿತ ಆರೋಪಿಯಾಗಿದ್ದಾರೆ. ಆರೋಪಿ ಶೃತಿ ಅವರು ಸ್ಕ್ಯಾನಿಂಗ್ ಮೂಲಕ ಭ್ರೂಣ ಪತ್ತೆ ಮಾಡುವ ಕಾರ್ಯದಲ್ಲಿ ಭಾಗಿಯಾಗಿದ್ದಳು ಎನ್ನಲಾಗಿದೆ. ಭ್ರೂಣ ಪತ್ತೆ ಮತ್ತು ಭ್ರೂಣ ಹತ್ಯೆ ಪ್ರಕರಣದಲ್ಲಿ ಇದುವರೆಗೂ 9ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿ ಶೃತಿ ಅವರನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



## ಕೆ.ಬಿ.ಮರುಳಪ್ಪ ನಿಧನ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿ ಕೆಂಕೆರೆ ಗ್ರಾಮದ ಕೆ.ಬಿ.ಮರುಳಪ್ಪ (84) ಭಾನುವಾರ ಬೆಳಗ್ಗೆ ಸ್ವಗೃಹದಲ್ಲಿ ನಿಧನರಾದರು. ಹುಳಿಯಾರು ಪಟ್ಟಣದ ಮಾಧುರಿ ಜ್ಯೂಯಲೇರ್ಸ್‌ನ ಕೆ.ಎಂ.ಬಸವರಾಜು ಹಾಗು ಬಸವೇಶ್ವರ ಟ್ರೇಡಸ್‌ನ ಕೆ.ಎಂ.ಸತೀಶ್ ಸೇರಿದಂತೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಭಾನುವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ಅಂತಿಮ ಸಂಸ್ಕಾರ ನಡೆಯಿತು.

**ಹುಳಿಯಾರು ಹೋಬಳಿ ಕುಶಾಲ್ ಪುರ ಗ್ರಾಮದ ವಿದ್ಯಾರ್ಥಿನಿ ಹೆಚ್.ವಿ.ಸ್ಫೂರ್ತಿ ರವರು ಎಸ್‌ಎಸ್‌ಎಲ್‌ಸಿಯಲ್ಲಿ 614 ಅಂಕ ಪಡೆದು ಉತ್ತೀರ್ಣರಾಗಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಸಲುವಾಗಿ ಶಾಸಕ ಸಿ.ಬಿ.ಸುರೇಶ್‌ಬಾಬು ಅವರು ವಿದ್ಯಾರ್ಥಿನಿ ಮನೆಗೆ ಭೇಟಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಈಕೆಯ ಸಂಬಂಧಿ ರಶ್ಮಿಕಾ ಅವರನ್ನೂ ಸನ್ಮಾನಿಸಲಾಯಿತು.**



# ನೆಟ್ ಮತ್ತು ಕೆ-ಸೆಟ್ ತರಬೇತಿಗೆ ಚಾಲನೆ

**ಮೈಸೂರು:** ನಗರದ ಎಂ. ಎಂ. ಕೆ. ಮತ್ತು ಎಸ್. ಡಿ. ಎಂ. ಮಹಿಳಾ ಕಾಲೇಜಿನ ಸ್ನಾತಕೋತ್ತರ ವಿಭಾಗದಿಂದ ಇತ್ತೀಚೆಗೆ ಆಯೋಜಿಸಿದ್ದ ಒಂದು ದಿನದ ಯುಜಿಸಿ ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗಳ ತರಬೇತಿ ಕಾರ್ಯಕ್ರಮವನ್ನು, ಕಾಲೇಜಿನ ಪ್ರಾಂಶುಪಾಲ ಪ್ರೊಫೆಸರ್ ಸಾಯಿನಾಥ್ ಮಲ್ಲಿಗೆಮಡು ರವರು ಉದ್ಘಾಟಿಸಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗಳ ಮಹತ್ವವನ್ನು ತಿಳಿಸಿಕೊಟ್ಟರು. ಮಾತ್ರ ವಲ್ಲದೇ ನಾಲ್ಕನೇ ಸೆಮಿಸ್ಟರ್ ನಲ್ಲಿ ಓದುತಿರುವ ವಿದ್ಯಾರ್ಥಿನಿ ಕೆ-ಸೆಟ್ ಪರೀಕ್ಷೆ ಯಲ್ಲಿ ಪಾಸ್ ಆಗಿರುವುದು ಈ ಕಾರ್ಯಕ್ರಮದ ಫಲಿತಾಂಶ ವೆಂದು ತಿಳಿಸಿ, ಶುಭಕೋರಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾರತಿನಗರದ, ಕೆ. ಎಂ. ದೊಡ್ಡಿ



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ಸಹಾಯಕ ಪ್ರಾಧ್ಯಾಪಕರಾದ ಡಾ. ಪಾರ್ಥ ಟಿ. ರವರು, ಪರೀಕ್ಷೆಯ ಸ್ವರೂಪ, ವಿಷಯವಾರು ಪ್ರಶ್ನೆಗಳು, ಪತ್ರಿಕೆ 1 ಮತ್ತು ಪತ್ರಿಕೆ 2 ರಲ್ಲಿನ ಪ್ರಮುಖ ಅಂಶಗಳ ಬಗ್ಗೆ ವಿಸ್ತೃತವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. 58 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ಕಾಲೇಜಿನ ಐಕ್ಯೂಎಸಿ ಸಂಚಾಲಕ ಪ್ರೊ. ಕೆ. ಎಸ್. ಸುಕೃತ, ಕಾರ್ಯಕ್ರಮ ಆಯೋಜಕ ಡಾ. ಎನ್. ದಿಲೀಪ್, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ದೇವಕಿ, ಸಹಾಯಕ ಪ್ರಾಧ್ಯಾಪಕ ಸೌಮ್ಯ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

# ಶಂಕರಾಚಾರ್ಯರ ಸಿದ್ಧಾಂತ ಸಮಾಜಕ್ಕೆ ಮಾದರಿ

**ಮೈಸೂರು:** ಶಂಕರಾಚಾರ್ಯರ ಸಿದ್ಧಾಂತ ಸಮಾಜಕ್ಕೆ ಮಾದರಿಯಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಭಾನುವಾರ ಆಯೋಜಿಸಿದ್ದ ತತ್ವಜ್ಞಾನಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಂಕರಾಚಾರ್ಯರು ಹಿಂದೂ ಧರ್ಮದ ಉಳಿವಿಗಾಗಿ ಭಾರತವನ್ನು ಕಾಲ್ನಡಿಗೆಯಲ್ಲಿ ಪರ್ಯಟನೆ ಮಾಡಿ ನಾಲ್ಕು ಪೀಠಗಳನ್ನು ಸ್ಥಾಪಿಸಿದ್ದಾರೆ. ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಅವರು ಹಿಂದೆಯೇ ಸಾಮಾಜಿಕ ಸಾಮರಸ್ಯ ಸಂದೇಶ ಸಾರಿದವರು. ರಾಮಾನುಜರು ಹಾಗೂ ಶಂಕರಾಚಾರ್ಯರ ಧ್ಯೇಯ ಸಿದ್ಧಾಂತಗಳು ಹಿಂದೂ ಸಮಾಜಕ್ಕೆ ಮಾದರಿಯಾಗಿವೆ. ಸಾಂಸ್ಕೃತಿಕ ಹಾಗೂ ವೈಜ್ಞಾನಿಕವಾಗಿಯೂ ಅವರು ಕೊಡುಗೆ ನೀಡಿದ್ದಾರೆ ಎಂದರು. ಪಕ್ಷದ ನಗರ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ, ಶಂಕರಾಚಾರ್ಯರ ತತ್ವಗಳು ಯುವ ಮನಸ್ಸುಗಳನ್ನು ಸನ್ಮಾರ್ಗದತ್ತ ಕರೆದೊಯ್ಯುತ್ತದೆ ಎಂದರು. ಬಿಜೆಪಿ ರಾಜ್ಯ ಘಟಕದ ಪ್ರಕೋಷ್ಟಗಳ ರಾಜ್ಯ ಸಹ ಸಂಯೋಜಕ ಎನ್.ವಿ. ಫಣೀಶ್, ಮಾಜಿ ಮೇಯರ್ ಶಿವಕುಮಾರ್, ನಗರ ಘಟಕದ ಪ್ರಧಾನ ಕಾರ್ಯದರ್ಶಿ ಎಚ್.ಜಿ. ಗಿರಿಧರ್, ಕೇಬಲ್ ಮಹೇಶ್, ಗೋಪಾಲ್ ರಾವ್, ಉಪಾಧ್ಯಕ್ಷ ಜೋಗಿ ಮಂಜು, ಎಸ್ಸಿ ಮೋರ್ಚಾ ಅಧ್ಯಕ್ಷ ಶೈಲೇಂದ್ರ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಬಿ.ವಿ.ಮಂಜುನಾಥ್, ಮುಖಂಡರಾದ ರಾಕೇಶ್ ಭಟ್, ಟಿ. ರವಿ, ರಾಕೇಶ್ ಗೌಡ, ಅಜಯ್ ಶಾಸ್ತ್ರಿ, ಕೆ.ಎಂ. ನಿಶಾಂತ್, ನವೀನ್ ಕುಮಾರ್, ಜಗದೀಶ್, ಎಂ.ಆರ್. ಬಾಲಕೃಷ್ಣ ಪಾಲ್ಗೊಂಡಿದ್ದರು.



# ಬಸವಣ್ಣನವರ ತತ್ವ, ಆದರ್ಶ ಜೀವನದಲ್ಲಿ ಅಳವಡಿಸಿಕೊಳ್ಳಿ

**ತಿಪಟೂರು :** ವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ಧರ್ಮದ ಕಟ್ಟುಪಾಡುಗಳಿಂದ ನೊಂದು ಬೆಂಡಾಗಿದ್ದ ಜನರಿಗೆ ಶರಣ ಸಂಸ್ಕೃತಿಯ ಹಿನ್ನಲೆಯಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿ, ವ್ಯಕ್ತಿತ್ವ ವಿಕಸನವನ್ನುಂಟು ಮಾಡಿ, ಕೈಲಾಸಕ್ಕಿಂತ ಕಾಯಕಕ್ಕೆ ಹೆಚ್ಚು ಮಹತ್ವ ಕೊಟ್ಟ ಸಾಂಸ್ಕೃತಿಕ ನಾಯಕ ಬಸವಣ್ಣನವರ ತತ್ವ, ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾರ್ಥಕ ಬದುಕನ್ನು ಕಂಡುಕೊಳ್ಳಬೇಕೆಂದು ಅರಸೀಕೆರೆ ತಾಲೂಕಿನ ಮಾಡಾಳು ಶ್ರೀ ರುದ್ರಮುನಿ ಸ್ವಾಮೀಜಿ ತಿಳಿಸಿದರು.

ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ವೀರಶೈವ ಲಿಂಗಾಯಿತ ಸಮಾಜದ ವತಿಯಿಂದ ಶುಕ್ರವಾರ ನಡೆದ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರು ಮೊದಲಿನಿಂದಲೂ ಅರ್ಥವಿಲ್ಲದ ಸಂಪ್ರದಾಯಗಳ, ಮೂಢನಂಬಿಕೆ, ಗೊಡ್ಡು ಆಚರಣೆಗಳ ಬಗ್ಗೆ ವೈಚಾರಿಕ ನೆಲೆಗಟ್ಟಿನಲ್ಲಿ ಅರಿವು ಮೂಡಿಸುತ್ತಿದ್ದರು. ವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ಧರ್ಮದ ಕಟ್ಟುಪಾಡುಗಳಿಂದ ನೊಂದು ಬೆಂಡಾಗಿದ್ದ ಜನರಿಗೆ ಶರಣ ಸಂಸ್ಕೃತಿಯ ಹಿನ್ನಲೆಯಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿ, ವ್ಯಕ್ತಿತ್ವ ವಿಕಸನವನ್ನುಂಟು ಮಾಡಿದರು. ಹನ್ನೆರಡನೇ ಶತಮಾನದಲ್ಲಿಯೇ ಮಹಿಳೆಯರಿಗೆ ಬಸವಣ್ಣನವರು ಸ್ವಾತಂತ್ರ್ಯ ತಂದುಕೊಟ್ಟ ಫಲವಾಗಿ ಮಹಿಳೆಯರು ಧೈರ್ಯ, ಸ್ಥೈರ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡುತ್ತಿದ್ದಾರೆ. ಇವರ ದಾಸೋಹ, ಕಾಯಕನಿಷ್ಠೆ, ವೈಚಾರಿಕೆ ಮನೋಭಾವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ಶ್ರೀಗಳು ಅಲ್ಪಸಂಖ್ಯಾತರು ಬಹುಸಂಖ್ಯಾತರಾಗುತ್ತಿದ್ದು ಈ ನಿಟ್ಟಿನಲ್ಲಿ ಸರ್ಕಾರ ಈ ಬಗ್ಗೆ ಚಿಂತಿಸಬೇಕಿದ್ದು ಎಲ್ಲರಿಗೂ ಒಂದೇ ಕಾನೂನಾತ್ಮಕ ನೀತಿಯನ್ನು ಜಾರಿಗೆ ತರಬೇಕಿದ್ದು ಈ ನಿಟ್ಟಿನಲ್ಲಿ ರಾಜಕೀಯ ಮುಖಂಡರು, ಸಮಾಜದ ಚಿಂತಕರು ಹೋರಾಟ ಮಾಡಬೇಕಿದೆ ಎಂದರು.



ಷಡಕ್ಷರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ ಇಡೀ ನಾಡೇ ಮನುಕುಲದ ಮಹಾಮಾನವತಾವಾದಿ, ಅನುಭವಮಂಟಪ ಸ್ಥಾಪಕ, ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಶ್ರದ್ಧೆಯಿಂದ ಆಚರಿಸುತ್ತಿದೆ. ತಿಪಟೂರಿನ ಕೋಡಿಸರ್ಕಲ್‌ನಲ್ಲಿ ಬಸವಣ್ಣನವರ ಪುತ್ಥಳಿ ಇಟ್ಟು ತೆರವುಗೊಳಿಸಿದ್ದು ತೀವ್ರನೋವುಂಟಾಗಿದೆ. ಈ ಬಗ್ಗೆ ಶಾಸಕರು ಯೋಚಿಸಬೇಕಿದ್ದು ಕೂಡಲೆ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಮನವಿ ಮಾಡಬೇಕು. ಬಸವಣ್ಣ ಯಾವ ವ್ಯಕ್ತಿಯ ಸ್ವತ್ತಲ್ಲ ಒಬ್ಬ ದಾರ್ಶನಿಕರಾಗಿದ್ದು ಅವರಿಗೆ ಸಲ್ಲಬೇಕಾದ ಗೌರವವನ್ನು ಕೊಡಬೇಕು. ಸಮಾಜ ಒಗ್ಗಟ್ಟಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷರಾದ ಕೆ.ಎಂ. ಪರಮೇಶ್ವರಯ್ಯ ನವರು ರಚಿಸಿರುವ ಶ್ರೀ ಬಸವೇಶ್ವರರ ಜನನದ ಕಥನ ಕವನ ಕಾರುಣ್ಯಶಿಶು ಕೃತಿ ಬಿಡುಗಡೆಗೊಳಿಸಲಾಯಿತು.

ಕಾರುಣ್ಯ ಶಿಶು ಕೃತಿ ಕುರಿತು ಶರಣ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ಕೆ.ಎಂ. ಪರಮೇಶ್ವರಯ್ಯ ಮಾತನಾಡಿ, ಪಂಚಮವರ್ಣರ ಕೇತ ಅಗ್ರಹಾರದಲ್ಲಿ ಸತ್ತು ಬಿದ್ದಿದ್ದ ಶುನಕವನ್ನು ಸ್ವಚ್ಚಗೊಳಿಸಲು ಬಂದಾಗ ಅನಿವಾರ್ಯವಾಗಿ ಮಂತ್ರ ಕೇಳಿಸಿಕೊಂಡನು. ಅದರಿಂದ ಕೆರಳಿದ ಉನ್ನತ ವರ್ಣಿಯರು ಅವನಿಗೆ ಘೋರಶಿಕ್ಷೆಯ ವಿಧಿಸಲು ಮುಂದಾದಾಗ ಅಗ್ರೇಸರ ಮಾದರಸನ ಮಗನಾದ ಶ್ರೀ ಬಸವಣ್ಣನವರ ಜನನವಾಯಿತು. ಪ್ರಯುಕ್ತ ಪುತ್ರೋತ್ಸವದ ನೆಪಮಾಡಿ ಅವನಿಗೆ ವಿಧಿಸುವ ಮಾರಣಾಂತಿಕ ಶಿಕ್ಷೆಯ ಕಡಿಮೆ ಮಾಡಲಾಯಿತು. ಇದನ್ನು ಕಥಾವಸ್ತುವಾಗಿ ಹೊಂದಿ ಮುಕ್ತ ಛಂದಸ್ಸಿನ ಚೌಪದಿಯಲ್ಲಿ ಬರೆಯಲಾಗಿದೆ ಎಂದರು.

ಶರಣ ಸಂಸ್ಕೃತಿಯ ಶ್ರೇಷ್ಠತೆಯ ವಿಷಯದ ಬಗ್ಗೆ ವಚನ ಚಿಂತಕಿ ಲೋಕೇಶ್ವರಿಪ್ರಭು ಉಪನ್ಯಾಸ ನೀಡಿದರು. ಅಕ್ಕಮಹಾದೇವಿ ಸಮಾಜದಿಂದ ವಚನ ಗಾಯನ ನಡೆಯಿತು. ಕಾರ್ಯಕ್ರಮದಲ್ಲಿ ಮಾದಿಹಳ್ಳಿ ಹಿರೆಮಠಾಧ್ಯಕ್ಷರಾದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಕುಪ್ಪೂರು ಗದ್ದಿಗೆ ಮಠದ ಅಧ್ಯಕ್ಷರಾದ ಶ್ರೀ ವಾಗೀಶ್ ಪಂಡಿತಾರಾಧ್ಯರು, ಕದಳಿ ಬಳಗದ ಅಧ್ಯಕ್ಷೆ ಸ್ವರ್ಣಗೌರಿ, ಅಕ್ಕ ಮಹಾದೇವಿ ಸಮಾಜದ ಮುಕ್ತಾತಿಪ್ಪೇಶ್, ಸಮಾಜದ ಮುಖಂಡರಾದ ಟಿ.ಎಸ್. ಪರಮಶಿವಯ್ಯ, ಸಂಗಮೇಶ್, ವೋಡಫೋನ್ ಚಂದ್ರು, ಸೋಮಶೇಖರ್, ರೇಣುಕಾರಾಧ್ಯ, ಜಿ.ಕೆ. ಸುರೇಶ್, ಮಂಜಪ್ಪ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ವಕೀಲರಾದ ಶೋಭಾಜಯದೇವ್ ಸ್ವಾಗತಿಸಿ, ವಂದಿಸಿದರು. ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಓದಿನರಮನೆಯಲ್ಲಿ ತಿಂಗಳ ಒನಪು

ಸಂಗೀತಲೋಕ ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಸೋಪಾನ. ಜೀವನದ ಎಲ್ಲ ಏರಿಳಿತಗಳನ್ನೂ ತಹಬಂದಿಗೆ ತರಬಲ್ಲ ಸಂಜೀವಿನಿ. ಅದರ ಚುಂಬಕ ಶಕ್ತಿಯ ವಿರಾಟ್ ದರ್ಶನ ಆಗಬೇಕೆಂದರೆ ಸಂಪೂರ್ಣ ತಲ್ಲೀನತೆಯಿಂದ ಆಲಿಸುವ ಗುಣ ಬೆಳೆಸಿಕೊಳ್ಳಬೇಕೆಂದು ಜಾನಪದ ವಿದ್ವಾಂಸ ಡಾ. ಎಂ. ಬೈರೇಗೌಡ ನುಡಿದರು. ಕೃಷ್ಣಾಪುರದೊಡ್ಡಿಯ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆ ಸಹಯೋಗದಲ್ಲಿ, ಬೆಂಗಳೂರಿನ ಹಂಪಿನಗರ ಬಡಾವಣೆಯ ಗ್ರಂಥಾಂಗಣದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದಲೂ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಓದಿನರಮನೆಯಲ್ಲಿ ತಿಂಗಳ ಒನಪು ಕಾರ್ಯಕ್ರಮ ಸರಣಿಯ 188ನೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಂಗೀತದ ಮಾಧುರ್ಯಕ್ಕೆ ಮನಸೋಲದವರೇ ಇಲ್ಲ, ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸುವ ಶಕ್ತಿ ಸಂಗೀತಕ್ಕಿದೆ. ಅದು ಜಾನಪದವಾಗಿರಲಿ, ಭಾವಗೀತೆಯಾಗಿರಲಿ, ಭಕ್ತಿರಸಪ್ರಧಾನ ಗೀತೆಗಳಾಗಿರಲಿ ಎಲ್ಲವೂ ಮನುಷ್ಯನ ಮನಸ್ಸಿನ ಗಾಯಗಳಿಗೆ ಅಪರೂಪದ ಔಷಧಿಯಾಗಿ ಕಾರ್ಯನಿರ್ವಹಿಸಬಲ್ಲದು ಎಂದರು. ಹಳ್ಳಿ ಜಾನಪದ ಕಲಾತಂಡದ ನಾಯಕ ಕಲಾವಿದ ಹೊಸಳ್ಳಿ ವಾಸುದೇವ್ ಮಾತನಾಡಿ, ಯಾವುದೇ ಆಧುನಿಕ ವಾದ್ಯಗಳನ್ನು ಬಳಸದೆ, ನಮ್ಮ ಕಂಠದ ಮೇಲೆ ನಂಬಿಕೆಯಿಟ್ಟು ಸಾಂಕೇತಿಕವಾದ ಪಾರಂಪರಿಕ ವಾದ್ಯ, ಪರಿಕರಗಳ ಜೊತೆಯಲ್ಲಿ ಗಾಯನ ಪ್ರಸ್ತುತ ಪಡಿಸಬೇಕೆಂಬುದು ನಮ್ಮ ಬಯಕೆಯಾಗಿದೆ. ನಾಡಿನಾದ್ಯಂತ ಪ್ರಚುರ ಪಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ನಡೆಸುತ್ತಿರುವುದಾಗಿ ಅವರು ತಿಳಿಸಿದರು. ಬೆಂಗಳರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ದೊಡ್ಡ ಹೊಸಹಳ್ಳಿಯ ಹಳ್ಳಿ ಜನಪದ ಕಲಾತಂಡ, ಕಂಟನಕುಂಟೆ ಅಶ್ವತ್ಥನಾರಾಯಣ, ಗಂಗಾಧರ್, ಮಲ್ಲೇಶಪ್ರಭು, ನಾಗರಾಜು ತಮ್ಮ ಸುಮಧುರ ಕಂಠದಿಂದ ಸಂಗೀತ ಸಂಭ್ರಮ ಕಾರ್ಯಕ್ರಮ ಪ್ರಸ್ತುತ ಪಡಿಸಿದರು.



## ಬನ್ನಮ್ಮ ದೇವಿ ಹಬ್ಬ ಮತ್ತು ಜಾತ್ರಾಮಹೋತ್ಸವ

ಪಾಂಡವಪುರ: ಅರಳಕುಪ್ಪೆ ಗ್ರಾಮ ದೇವತೆ ಶ್ರೀ ಬನ್ನಮ್ಮ ದೇವಿ ಹಬ್ಬ ಮತ್ತು ಜಾತ್ರಾಮಹೋತ್ಸವ ಮೂರು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ನಡೆಯಿತು. ಭಾನುವಾರ ಬೆಳಗ್ಗೆ ಅರಳಕುಪ್ಪೆ ಗ್ರಾಮದ ಹೊರವಲಯದಲ್ಲಿರುವ ಬನ್ನಮ್ಮ ದೇವಿ ದೇವಸ್ಥಾನದಿಂದ ಬನ್ನಮ್ಮದೇವಿಯ ಚಪ್ಪರ ರಥೋತ್ಸವ ಪ್ರಾರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ನಂದಿ ಧ್ವಜ ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಕೋಲಾಟಗಳು ಮೆರಗು ನೀಡಿದವು. ಮಧ್ಯಾಹ್ನದ ವೇಳೆಗೆ ಊರಿನ ಹೆಣ್ಣುಮಕ್ಕಳು ತಂಬಿಟ್ಟಿನ ಆರತಿ ಹೊತ್ತು ಕಟ್ಟೇರಿ ಏಳೂರಮ್ಮ ದೇವಸ್ಥಾನಕ್ಕೆ ಹೊರಟು ಪೂಜೆ ಪುನಸ್ಕಾರಗಳು ನಡೆದವು. ಕಾಲುವೆ ಬಳಿ ಧೂಳು ಮರಿ ಸೇವೆ ನಡೆಯಿತು. ಸಂಜೆ ಹಬ್ಬಕ್ಕೆ ನಂಟರಿಷ್ಟರ ಜೊತೆ ಗ್ರಾಮದ ಜನರು ಬಾಡೂಟ ಸವಿದರು. ಮೇ.10ರಂದು ಘಟೆ ಉತ್ಸವವು ಜರುಗಿತು. ರಾತ್ರಿ 10ರಲ್ಲಿ ಮಲ್ಲಿಗೆ ಹೂವಿನಿಂದ ಅಲಂಕೃತಗೊಂಡಿದ್ದ ಘಟೆ ಉತ್ಸವವು ಪ್ರಮುಖ ಬೀದಿಗಳಲ್ಲಿ ಸಾಗಿ ಹೊಲದ ಗುಡಿಗೆ ತಲುಪಿತು. ವೀರ ಮಕ್ಕಳ ಕುಣಿತ, ಪೂಜಾ ಕುಣಿತ, ಕೋಲಾಟ ವೀರಗಾಸೆ ಕುಣಿತ ಕುಣಿತ ಪಟಾಕಿ ಸಿಡಿಮದ್ದುಗಳೊಂದಿಗೆ ಘಟೆ ಉತ್ಸವವು ಜರುಗಿತು. ಮೇ.11ರಂದು ಬನ್ನಮ್ಮ ದೇವಿಗೆ ಒಕುಳಿ ಉತ್ಸವ ನಡೆಯಿತು. ಬಿಸಿಲಿಲಲ್ಲಿ ಯುವಕರು ಪರಸ್ಪರ ನೀರೆರೆಚಿಕೊಂಡು ಓಕುಳಿ ಆಟವಾಡಿ ಸಂಭ್ರಮಿಸಿದರು. ಸಂಜೆ ರಸಮಂಜರಿ ಕಾರ್ಯಕ್ರಮ ನಡೆಯಿತು. ಈ ಮೂರು ದಿನಗಳ ಕಾಲ ನಡೆದ ಬನ್ನಮ್ಮ ದೇವಿ ಹಬ್ಬ ಜಾತ್ರಾ ಮಹೋತ್ಸವದಲ್ಲಿ ಗ್ರಾಮದ ಎಲ್ಲ ಜನರು ಸಡಗರ ಸಂಭ್ರಮದಿಂದ ಭಾಗವಹಿಸಿದ್ದರು.



## ವಾಟದಹೊಸಹಳ್ಳಿ ಕೆರೆಯಲ್ಲಿ ಶವ ಪತ್ತೆ

**ಗೌರಿಬಿದನೂರು:** ವಾಟದಹೊಸಹಳ್ಳಿ ಕೆರೆಯಲ್ಲಿ ಈಜಲು ಹೋಗಿ ಮೃತರಾಗಿದ್ದ ಬೆಂಗಳೂರಿನ ಟೆಕ್ಕಿ ವಿನಯ್ ರಮೇಶ್ ಅವರ ಮೃತ ದೇಹವನ್ನು ಇಂದು ಭಾನುವಾರ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಕರೆಯ ನೀರಿನಿಂದ ಮೃತ ದೇಹವನ್ನು ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ ಶನಿವಾರ ವೀಕೆಂಡ್ ಸಲುವಾಗಿ ವಿನಯ್ ರಮೇಶ್ ತನ್ನ ಗೆಳೆಯರೊಂದಿಗೆ ಪ್ರವಾಸಕ್ಕೆಂದು ವಾಟದಹೊಸಹಳ್ಳಿ ಕೆರೆಗೆ ಬಂದಿದಾಗ ಈ ಅವಘಡ ಜರುಗಿದೆ ಘಟನಾ ಸ್ಥಳಕ್ಕೆ ಗೌರಿಬಿದನೂರು ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ

### ಮುಳಬಾಗಿಲು ಶಾರದಾ ವಿದ್ಯಾಪೀಠದಲ್ಲಿ ಮಕ್ಕಳ ಯೋಗ ಶಿಬಿರದ ಸಮಾರೋಪ

# ಮೊಬೈಲ್‌ಗೆ ದಾಸರಾಗುತ್ತಿರುವ ಯುವಜನತೆ- ಡಿವೈಎಸ್‌ಪಿ

**ಮುಳಬಾಗಿಲು:** ಆಧುನಿಕತೆ ಹೆಸರಿನಲ್ಲಿ ಯುವ ಜನತೆ ಮೊಬೈಲ್‌ಗೆ ದಾಸರಾಗಿ ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಿರುವುದು ಕಳವಳಕಾರಿಯಾಗಿದ್ದು, ಇದನ್ನು ತಪ್ಪಿಸಲು ನಿತ್ಯ ಯೋಗಾಭ್ಯಾಸದಲ್ಲಿ ಪಾಲ್ಗೊಳ್ಳಲು ಪೋಷಕರು ಪ್ರೇರಣೆ ನೀಡಬೇಕು ಎಂದು ಡಿವೈಎಸ್ಪಿ ನಂದಕುಮಾರ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಶಾರದಾ ವಿದ್ಯಾಪೀಠದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಮಕ್ಕಳ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಮಕ್ಕಳು ಶಿಸ್ತು, ಸಹನೆಯಿಂದ ಉತ್ತಮ ಶಿಕ್ಷಣವನ್ನು ಪಡೆದು ಜೀವನ ರೂಪಿಸಿಕೊಂಡು ಭವಿಷ್ಯದ ಸುಭದ್ರ ದೇಶವನ್ನು ನಿರ್ಮಿಸಬಹುದು ಎಂದ ಅವರು, ಶಿಕ್ಷಣಕ್ಕಿಂತ ಸಂಸ್ಕಾರ ಇಂದು ಅಗತ್ಯವಾಗಿದೆ, ವಿದ್ಯಾವಂತರೇ ಇಂದು ಹೆಚ್ಚಿನ ಸಂಖ್ಯೆಯಲ್ಲಿ ದಾರಿ ತಪ್ಪುತ್ತಿರುವುದನ್ನು ಕಾಣುತ್ತಿದ್ದೇವೆ, ಭಯೋತ್ಪಾದನೆ ನಡೆಸಿ ಸಿಕ್ಕಿಬಿದ್ದವರಲ್ಲಿ ಅನೇಕರು ಇಂಜಿನಿಯರಿಂಗ್ ಓದಿದವರು ಎಂಬುದು ಆತಂಕಕಾರಿ ವಿಷಯ ಎಂದರು.

ಆದ್ದರಿಂದ ಶಿಕ್ಷಣದೊಂದಿಗೆ ಮಕ್ಕಳಿಗೆ ಸಂಸ್ಕಾರವನ್ನೂ ಕಲಿಸುವ ಅಗತ್ಯವಿದೆ ಎಂದ ಅವರು, ಯುವಜನತೆ ಮಾದಕ ವ್ಯಸನಿಗಳಾಗುವುದನ್ನು ತಪ್ಪಿಸಲು ಅವರು ನಿರಂತರ ಯೋಗಾಭ್ಯಾಸದಲ್ಲಿ ಪಾಲ್ಗೊಳ್ಳಲು ಪ್ರೇರಣೆ ನೀಡಬೇಕು, ಯೋಗದಿಂದ ಮಕ್ಕಳಲ್ಲಿ ಉತ್ತಮ ಆರೋಗ್ಯದ ಜತೆಗೆ ಒಳ್ಳೆಯ ನಡತೆಯನ್ನೂ ಕಾಣಬಹುದಾಗಿದೆ ಎಂದರು.




ಸೌಪರ್ಣಿಕ ವಲಯದ ಸಂಚಾಲಕ ಸುಂದರಾಚಾರಿ ಅಣ್ಣ ಮಾತನಾಡಿ, ನಿತ್ಯ ಯೋಗಾಭ್ಯಾಸದಿಂದ ಹರಿಷಡ್ವರ್ಗಗಳನ್ನು ನಿಗ್ರಹಿಸಿ ಆತ್ಮ ಸಾಕ್ಷಾತ್ಕಾರವನ್ನು ಹೊಂದಬಹುದು, ಆದ್ದರಿಂದ ಸಮಿತಿಯು ನಾಗರಿಕರಿಗೆ ಅಕ್ಷರ ಆರೋಗ್ಯ ಆಧ್ಯಾತ್ಮವನ್ನು ಉಚಿತವಾಗಿ ನೀಡುತ್ತಿದೆ. ಸಮಿತಿಯ ಸೌಲಭ್ಯಗಳನ್ನು ಬಳಸಿಕೊಂಡು ವಿಶಾಲ ಮನೋಭಾವನೆ, ಸದ್ಭಕ್ತಿಯೊಂದಿಗೆ ಸತ್ಪ್ರಜೆಗಳಾಗಬೇಕು ಮಾನಸಿಕ ಒತ್ತಡ ನಿರ್ಮೂಲನೆ ಮಾಡಲು ತಾಳ್ಮೆ ಸಹನೆ ಹೊಂದಲು ಗೌತಮ ಬುದ್ಧ ಹಾಗೂ ಶಿಷ್ಯ ಆನಂದನ ಪ್ರಸಂಗವನ್ನು ವಿವರಿಸಿದರು. ಶಿಬಿರದಲ್ಲಿ ಪಡೆದ ಶಿಕ್ಷಣವನ್ನು ಜೀವನದಲ್ಲಿ ಅನುಷ್ಠಾನಗೊಳಿಸಿಕೊಳ್ಳಬೇಕು ಎಂದರು.

ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಡಾ ಜನಾರ್ಧನ್ ಅಣ್ಣ ಮಾತನಾಡಿ, ಮಗು ಕುಟುಂಬದ ಸದಸ್ಯರನ್ನು ಗೌರವಿಸಿ ಆರೋಗ್ಯ ಕಾಪಾಡಿಕೊಂಡು ನೈಜ ಸಾತ್ವಿಕ ಆಹಾರವನ್ನು ಸೇವಿಸಿ ಆದರ್ಶ ಜೀವನವನ್ನು ನಡೆಸಿದಾಗ ಆತ್ಮವಿಶ್ವಾಸ ತಾನಾಗಿಯೇ ಸೃಷ್ಟಿಯಾಗುತ್ತದೆ. ನಾವು ಹುಟ್ಟಿದ ಈ ನೆಲದಲ್ಲಿ ನಮ್ಮ ಸಾಧನೆಯಿಂದ ಇನ್ನೊಬ್ಬರಿಗೆ ಪ್ರೇರಣೆಯಾಗಬೇಕು ಮಕ್ಕಳು ಪ್ರಕೃತಿಯೊಂದಿಗೆ ಬೆರೆತು ಎಲ್ಲಾ ಆಯಾಮಗಳು ಹಾಗೂ ಸ್ಥಿತಿಗಳನ್ನು ಅನುಭವಿಸಿದಾಗ ಸ್ವಾಭಾವಿಕ ಆರೋಗ್ಯವನ್ನು ಅನುಭವಿಸಬಹುದು ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಹಿರಿಯರಾದ ನಾರಾಯಣಪ್ಪ ಅಣ್ಣ ಮಾತನಾಡಿ, ಸಮಿತಿ ಸಂಸ್ಕಾರ ಸಂಘಟನೆಗೆ ಹಲವು ಚಟುವಟಿಕೆಗಳನ್ನು ಕಳೆದ ನಾಲ್ಕು ದಿನಗಳಿಂದ ತರಬೇತಿ ನೀಡಿದೆ. ಪ್ರತಿಯೊಬ್ಬರು ಸೇವಾ ಮನೋಭಾವನೆಯನ್ನು ಹೊಂದಿ ಪರೋಪಕಾರಿಯಾದಾಗ ಮಾತ್ರ ನಮ್ಮ ಜನ್ಮಕ್ಕೆ ಸಾರ್ಥಕತೆ ಸಿಗುತ್ತದೆ ಎಂದರು.

ಪ್ರಾಂತ ಸಂಚಾಲಕರಾದ ಮಾರ್ಕಂಡಯ್ಯ ಅಣ್ಣ ಕೋಲಾರ ಜಿಲ್ಲಾ ಸಂಚಾಲಕ ರಮೇಶ್ ಅಣ್ಣ ಬಾಗೇಪಲ್ಲಿ ತಾಲೂಕು ಸಂಚಾಲಕ ಮುನಿರಾಜ ಅಣ್ಣ ವಿವಿಧ ತಾಲೂಕುಗಳ ಪ್ರಮುಖರು ಮುಖ್ಯ ಶಿಕ್ಷಕರಾದ ಚೈತ್ರ ಅಕ್ಕ ಪ್ರಬಂಧಕರು ಸೇರಿ ಮುಳಬಾಗಿಲು ತಾಲೂಕು ಸಮಿತಿಯ ಪ್ರಮುಖರು ಪೋಷಕರು ಶಿಬಿರಾರ್ಥಿಗಳು ಹಾಜರಿದ್ದರು.

# ಶಂಕರಾಚಾರ್ಯರ ಕೊಡುಗೆ ಅಪಾರ

### ಯಲಹಂಕದ ಬಜಾರ್ ರಸ್ತೆಯಲ್ಲಿ ಅದ್ದೂರಿ ಮೆರವಣಿಗೆ




**ಯಲಹಂಕ :** ಹಿಂದೂ ಸಂಸ್ಕೃತಿ, ಭಾರತೀಯ ಉಪನಿಷತ್ತುಗಳ ಪುನರುಜ್ಜೀವನಕ್ಕೆ ಆದಿಶಂಕರಾ ಚಾರ್ಯರ ಕೊಡುಗೆ ಸ್ಮರಣೀಯವಾದುದು ಎಂದು ವಿದ್ವಾನ್ ಶಶಿಧರ ಶಾಸ್ತ್ರಿ ಅಭಿಪ್ರಾಯಪಟ್ಟರು.

ಯಲಹಂಕ ತಾಲ್ಲೂಕು ಬ್ರಾಹ್ಮಣ ಸಂಘ ಮತ್ತು ಗಾಯತ್ರಿ ಮಂದಿರ ಇವರ ಸಹಯೋಗದೊಂದಿಗೆ ಯಲಹಂಕದ ಬಜಾರ್ ರಸ್ತೆಯಲ್ಲಿ ಭಾನುವಾರ ಆಯೋಜಿಸಿದ್ದ ಶಂಕರಾಚಾರ್ಯ, ರಾಮಾನುಜಾ ಚಾರ್ಯ ಮತ್ತು ಪರಶುರಾಮರ ಜಯಂತಿ ಕಾರ್ಯ ಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತ ನಾಡಿದ ಅವರು 'ಶಂಕರಾ ಚಾರ್ಯರು ಅದ್ವೈತ ವೇದಾಂತ ತತ್ವವನ್ನು ಆದ್ಯತೆ ಮೇಲೆ ಸ್ಥಾಪಿಸುವುದರ ಜತೆಗೆ ಧರ್ಮದ ಹೆಸರಿನಲ್ಲಿ ಹರಡುತ್ತಿರುವ ವಿವಿಧ ರೀತಿಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮಾಡಿದರು. ಅಲ್ಲದೆ ಶತಮಾನಗಳಿಂದ ಪಂಡಿತರು ಧರ್ಮಗ್ರಂಥ ಗಳ ಹೆಸರಿನಲ್ಲಿ ಜನರಿಗೆ ನೀಡುತ್ತಿದ್ದ ತಪ್ಪು ಶಿಕ್ಷಣದ ಬದಲಾಗಿ ಸರಿಯಾದ ಶಿಕ್ಷಣ ನೀಡುವ ಕೆಲಸವನ್ನು ಆದಿ ಶಂಕರಾ ಚಾರ್ಯರು ಕೈಗೊಂಡರು ಎಂದರು.

ಕಾರ್ಯಕ್ರಮದಲ್ಲಿ ವಿದ್ವಾನ್ ಕುಶಾಲ್ ಸಿಂಹ ರವರು ರಾಮಾನುಜಾಚಾರ್ಯರ ಬದುಕು ಮತ್ತು ಆಧ್ಯಾತ್ಮ ಸಾಧನೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಯಲಹಂಕ ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ವೈ.ಜಿ.ವೈದ್ಯನಾಥ ಶಾಸ್ತ್ರಿ, ಉಪಾಧ್ಯಕ್ಷ ರಾದ ವೈ.ಜಿ. ರಾಘವೇಂದ್ರರಾವ್, ಆರ್. ನಾಗರಾಜ್, ಪ್ರಧಾನ ಕಾರ್ಯದರ್ಶಿ ಗಳಾದ ಎಸ್.ಭೀಮಸೇನಾ ಚಾರ್ಯ, ಖಜಾಂಚಿ ಜಿ.ವಿ. ಪ್ರಭಾಕರ್, ಟಿ.ಎಲ್. ಅರುಣಕುಮಾರ್, ಎಲ್. ಸಂಜೀವರಾವ್ ಇತರರಿದ್ದರು.

ಶಂಕರ, ರಾಮಾನುಜ, ಪರಶುರಾಮರ ಜಯಂತಿ ಪ್ರಯುಕ್ತ ಯಲಹಂಕದ ಮುಖ್ಯ ಬೀದಿಗಳಲ್ಲಿ ಅವರ ಭಾವಚಿತ್ರಗಳೊಂದಿಗೆ ಬೃಹತ್ ಶೋಭಾಯಾತ್ರೆ ನಡೆಸಿದರು.

## ದಿಂಡಿ ಮಹೋತ್ಸವ ಸಂಪನ್ನ

**ಅರಸೀಕೆರೆ :** ನಗರದ ಹೃದಯ ಭಾಗದಲ್ಲಿ ನೆಲೆಸಿರುವ ಪಾಂಡುರಂಗ ರುಖುಮಾಯಿವರ ದೇವಾಲಯದಲ್ಲಿ 82 ನೇ ವರ್ಷದ ದಿಂಡಿ ಮಹೋತ್ಸವ ಹಾಗೂ ಶ್ರೀಜ್ಞಾನೇಶ್ವರಿ ಪೋಥಿ ಸ್ಥಾಪನೆ ಹಾಗೂ ಶ್ರೀಪಂಡರೀ ಸಾಂಪ್ರದಾಯಿಕ ಕೀರ್ತನೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಪ್ರತಿವರ್ಷದ ಸಂಪ್ರದಾಯದಂತೆ ಅತ್ಯಂತ ಸಂಭ್ರಮದಿಂದ ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿಸಲಾಯಿತು.

ನಗರದ ಪಾಂಡುರಂಗ ರುಖುಮಾಯಿವರ ದೇವಾಲಯದಲ್ಲಿ 87 ನೇವರ್ಷದ ದಿಂಡಿ ಮಹೋತ್ಸವ ಹಾಗೂ ಶ್ರೀಜ್ಞಾನೇಶ್ವರಿ ಪೋಥಿ ಸ್ಥಾಪನೆ ಪೂಜಾ ಕಾರ್ಯವನ್ನು ಶನಿವಾರ ಸಂಜೆ ಪ್ರಾರಂಭಿಸಲಾಯಿತು. ನಂತರ ದಾವಣಗೆರೆ ಪುಂಡಲೀಕ ರಾವ್, ಭದ್ರಾವತಿ ಬದರೀನಾಥ್ ಉತ್ತರ್ ಕರ್ ಅವರುಗಳಿಂದ ನಾಮಜಪ ಮತ್ತು ಪ್ರವಚನ ನಡೆಯಿತು.ನಂತರ ಬಂಕಾಪುರದ ಬಾನು ದಾಸ್ ಸರ್ವದೇ ನಡೆಸಲಾಯಿತು ಅವರಿಂದ ಪಂಡರೀ ಸಾಂಪ್ರದಾಯಿಕ ಸಂಕೀರ್ತನೆ ಹಾಗೂ ಪಂಚಪದಿ ಪಾವುಲ ಭಜನೆ ಅಖಂಡ ಜಾಗರಣೆ ಕಾರ್ಯಕ್ರಮಗಳು ನಡೆಯಿತು. ನಂತರ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಉನ್ನತ ಶ್ರೇಣಿಯಲ್ಲಿ ಪಾಸುಆದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ನೆಡೆಸಲಾಯಿತು

ಭಾನುವಾರ ಬೆಳಿಗ್ಗೆ ಕಾಕಡಾರತಿ, ಜ್ಞಾನೇಶ್ವರಿ ಪಾರಾಯಣ ಹಾಗೂ ದಿಂಡಿ ಮಹೋತ್ಸವ ಪ್ರಯುಕ್ತ ಪಾಂಡುರಂಗ ರುಖುಮಾಯಿ ದೇವರಿಗೆ ಪಂಚಾಮತ ಅಭೀಷೇಕ, ಹಾಗೂ ಮಹಾಮಂಗಳಾರತಿ ಪೂಜಾ ಕಾರ್ಯಕ್ರಮ ಹಾಗೂ ನೂತನ ಸಮುದಾಯ ಭವನದಲ್ಲಿ ಶ್ರೀಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಸಲಾಯಿತು.ನಂತರ ಅನ್ನಸಂತರ್ಪಣೆ ನಡೆಯಿತು. ಸಂಜೆ 6.30 ಕ್ಕೆ ಪಂಡರೀ ಭಜನೆಯೊಂದಿಗೆ ಪಾಂಡುರಂಗ ರುಖುಮಾಯಿವರ ಉತ್ಸವಮೂರ್ತಿಗಳ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಭಾವಸಾರ ಕ್ಷತ್ರಿಯ ದೈವ ಮಂಡಲಿ ಕೆ.ಜಿ.ಚಂದನ್ ಕ್ಷೀರಸಾಗರ್, ಕೆ.ಎಸ್.ನಾರಾಯಣ ಕಾಂಗೋಕರ್, ಎನ್.ವಿ.ನರೇಶ್ ಕುಮಾರ್, ನಾಗರಾಜ್‌ರಾವ್, ಶಂಕರ್‌ರಾವ್, ಸೂರಜ್ ಮಹೇಂದ್ರಕರ್, ಲಕ್ಷ್ಮಣ್ ಕ್ಷೀರಸಾಗರ್, ಶ್ರೀಧರ್ ಹಾಗೂ ಬಾಣಾವರ ಉಮೇಶ್ ಇನ್ನಿತರ ಮುಖಂಡರು ಭಾಗವಹಿಸಿದ್ದರು.





### ಅಯ್ಯಪ್ಪ ಸ್ವಾಮಿ ದೇವಾಲಯದ ಕುಂಭಾಭಿಷೇಕ

**ಕರ್ನಾಟಕ ರಾಜ್ಯ ಶಭರಿಮಲೆ ಅಯ್ಯಪ್ಪ ಸ್ವಾಮಿಸೇವಾಸಮಿತಿ,ಆರಾಭಿಕೊತ್ತನೂರು ಗ್ರಾಮ, ವಕ್ಕಲೇರಿ ಹೋಬಳಿ ,ಕೋಲಾರ ತಾಲ್ಲೂಕು ಇಲ್ಲಿ ಶ್ರೀ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದ ಕುಂಭಾಭಿಷೇಕ ಮತ್ತು ಪ್ರತಿಷ್ಠಾಪನ ಕಾರ್ಯಕ್ರಮ ನಡೆಯಿತು. ಕೇರಳದ ಅಯ್ಯಪ್ಪಸ್ವಾಮಿ ದೇವಾಲಯದ ಅರ್ಚಕರ ಮಾರ್ಗದರ್ಶನದಂತೆ ಸಕಲ ಪೂಜಾ-ಯಾಗಾದಿಗಳು ನಡೆಯಿತು ಕೇರಳದ ಚಂಡೆ ವಾದ್ಯ ,ನಾದಸ್ವರ ವಾದನ ,ಅಲಂಕಾರ ವಿಶೇಷವಾಗಿತ್ತು . ಎಂ ಎಲ್ ಸಿ ಅನಿಲ್ ಕುಮಾರ್ ,ಮಾಜಿ ಸಚಿವರಾದ ವರ್ತೂರ್ ಪ್ರಕಾಶ್ ,ವಕ್ಕಲೇರಿ ರಾಮು ,ಮುರಳಿ ,ಪ್ರವೀಣ್,ಮಂಜುನಾಥ್,ಕಿರಣ್ ,ಗಜೇಂದ್ರ ,ವೈ ಮುನಿಯಪ್ಪ,ಶೇಖರ್ ,ಶ್ರೀನಿವಾಸಮೂರ್ತಿ ,ಆಂಜಿ ,ನರೇಂದ್ರ ಬಾಬು ,ಕಿಶೋರ್ ,ಶ್ರೇಯಸ್ ,ಸಚಿನ್ ,ರೂಪೇಶ್ ,ಗಗನ್ ,ಕೌಶಿಕ್ ,ಆರಾಭಿಕೊತ್ತನೂರು ಗ್ರಾಮಸ್ಥರು ಮತ್ತು ಸುತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಇದ್ದರು.**

# ಲಕ್ಷ್ಮೀಪುರದಲ್ಲಿ ಕರಡಿ ಸೆರೆ

**ಮಧುಗಿರಿ :** ರೈತರಿಗೆ ಉಪಟಳ ನೀಡುತ್ತಿದ್ದ ಕರಡಿಯೊಂದು ಅರಣ್ಯ ಇಲಾಖೆಯವರು ಇಟ್ಟಿದ್ದ ಬೋನಿನಲ್ಲಿ ಸೆರೆಯಾಗಿದೆ.

ತಾಲೂಕಿನ ಕಸಬಾ ವ್ಯಾಪ್ತಿಯ ಮರವೇಕೆರೆ ಗ್ರಾಮ ಪಂಚಾಯತಿಗೆ ಸೇರಿದ ಲಕ್ಷ್ಮೀಪುರ ಸ.ನಂ 9 ಮತ್ತು 10 ರ ಜಮೀನಿನಲ್ಲಿದ್ದ ಆಲಸಿನ ಮರದ ಹಣ್ಣು ಹಾಗೂ ಕೊಳವೆ ಬಾವಿಯ ನೀರು ಕುಡಿಯಲು ಪ್ರತಿ ರಾತ್ರಿ ಬರುತ್ತಿದ್ದ ಕರಡಿಯೊಂದು ಶನಿವಾರ ರಾತ್ರಿ ಬೋನಿಗೆ ಬಿದ್ದಿದೆ.

ಅಕ್ಕಾ ಪಕ್ಕಾದ ಜಮೀನುಗಳಿಗೆ ನೀರು ಹಾಯಿಸಲು ಹೋಗುತ್ತಿದ್ದ ರೈತರು ಕರಡಿಯನ್ನು ಕಂಡು ಗಾಬರಿಗೊಂಡಿದ್ದರು ಮತ್ತು ಆಗಾಗ ಕರಡಿಯು ದಾಳಿ ಮಾಡುತ್ತಿತ್ತು. ಆದರೆ ಕರಡಿಯಿಂದ ಯಾವುದೇ ಪ್ರಾಣಾಪಯಗಳು ಸಂಭವಿಸಿರಲಿಲ್ಲ.

ಗ್ರಾಮಸ್ಥರು ಕರಡಿಯನ್ನು ಹಿಡಿಯುವಂತೆ ಅಧಿಕಾರಿಗಳ ಬಳಿ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ಜಮೀನಿನಲ್ಲಿ ಇಟ್ಟಿದ್ದ ಕರಡಿಯು ಬೋನಿಗೆ ಬಿದ್ದಿದೆ. ಕರಡಿಯನ್ನು ಬೆಂಗಳೂರಿನ ಜೈವಿಕ ಉದ್ಯಾವನಕ್ಕೆ ಕಳುಹಿಸಿ ಕೊಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಹೆಚ್.ಎಂ. ಸುರೇಶ್ , ಉಪವಲಯ ಅರಣ್ಯಾಧಿಕಾರಿ ಬಿ.ಎನ್. ಮುತ್ತುರಾಜು , ಸುದರ್ಶನ್ , ಸಿಬ್ಬಂದಿಗಳಾದ ಶ್ರೀಧರ್ , ಶಿವರಾಜ್ , ಮುಖಂಡರಾದ ಮೂಡ್ಲಗಿರೀಶ್ ಹಾಗೂ ಗ್ರಾಮಸ್ಥರು ಇದ್ದರು.



# ಲಾಭದ ಜೊತೆಗೆ ಸಾಮಾಜಿಕ ಕಳಕಳಿ ಇರಲಿ

**ಬ್ಯಾಟರಾಯನಪುರ :** ನಗರದ ಬ್ಯಾಟರಾಯನಪುರದಲ್ಲಿ ನಿರ್ಮಿಸ ಲಾಗಿದ್ದ ಸೂರ್ಯ ಹೈಟ್ಸ್ ನೂತನ ಕಟ್ಟಡವನ್ನು ಸಿರಿಗೆರೆಯ ತರಳ ಬಾಳು ಬೃಹನ್ಮಠದ ಡಾ. ಶಿವಮೂರ್ತಿ ಶಿವಚಾರ್ಯ ಸ್ವಾಮೀಜಿಗಳು ಭಾನುವಾರ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ ಸೂರ್ಯ ಡೆವಲಪರ್ಸ್ ನ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ್ ಬಾಥಿ ಕೇವಲ ಸ್ವಲಾಭವನ್ನು ಮಾತ್ರ ಯೋಚಿಸದೆ ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿಸಿ ಕೊಂಡಿದ್ದಾರೆ. ಮುಂದಿನ ಅವರ ಎಲ್ಲಾ ಯೋಜನೆಗಳು ಯಶಸ್ವಿ ಯಾಗಲಿ ತನ್ಮೂಲಕ ಅವರಿಂದ ಇನ್ನಷ್ಟು ಸಾಮಾಜಿಕ ಕಾರ್ಯಗಳು ನೆರವೇರುವಂತಾಗಲಿ ಎಂದು ಹಾರೈಸಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ 'ಲಾಭದ ಜೊತೆಗೆ ವಿಶ್ವಾಸರ್ಹತೆ ಗಳಿಸಿದರೆ ಬದುಕಿನ ಮೌಲ್ಯ ಹೆಚ್ಚಾಗುತ್ತದೆ. ಅದನ್ನು ಸೂರ್ಯ ಹೈಟ್ಸ್ ನ ವಿಶ್ವನಾಥ್ ಸಾಧಿಸಿ ತೋರಿಸಿದ್ದಾರೆ. ಸಮುದಾಯದ ಆರೋಗ್ಯ ಸುಧಾರಿಸುವ ದಿಸೆಯಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಿಸಿ ನೀಡುತ್ತಿರುವುದು ಪ್ರಶಂಸಾರ್ಹ ಕಾರ್ಯ ಎಂದರು.

ಮೌಲ್ಯ ಮತ್ತು ಬದ್ಧತೆಯೊಂದಿಗೆ ಉದ್ಯಮ ಆರಂಭಿಸಿದ್ದೇನೆ. ನಮ್ಮ ವಿಲ್ಲಾಗಳನ್ನು ಬುಕ್ ಮಾಡಿ ಕೊಳ್ಳುವ ಆರ್ಮಿ, ಏರ್ ಫೋರ್ಸ್ ನ ಸೈನಿಕರಿಗೆ ನೋಂದಣಿ ಯಲ್ಲಿ ವಿಶೇಷ ರಿಯಾಯಿತಿ ಕೊಡುವ ನಿರ್ಧಾರ ಮಾಡಿದ್ದೇವೆ ಸೂರ್ಯ ಡೆವಲಪರ್ಸ್ ಸದಾ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಲು ಬದ್ಧವಾಗಿರುತ್ತದೆ ಎಂದು ಸೂರ್ಯ ಡೆವಲಪರ್ಸ್ ನ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ ಬಾಥಿ ತಿಳಿಸಿದರು.

ಸುಪ್ರೀಂ ಕೋರ್ಟ್ ನ ನಿವೃತ್ತ ನ್ಯಾಯ ಮೂರ್ತಿ ಶಿವರಾಜ್ ವಿ.ಪಾಟೀಲ್, ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್, ಬೈರತಿ ಸುರೇಶ್, ಭಾಗವಹಿಸಿದ್ದರು.



# ಹಿಂದೂ ಧರ್ಮದಲ್ಲಿ ಆದಿ ಗುರು ಶಂಕರಾಚಾರ್ಯರಿಗೆ ವಿಶೇಷ ಸ್ಥಾನ

**ವಿಜಯಪುರ:** ಹಿಂದೂ ಧರ್ಮದಲ್ಲಿ ಆದಿ ಗುರು ಶಂಕರಾಚಾರ್ಯರಿಗೆ ವಿಶೇಷ ಸ್ಥಾನವನ್ನು ನೀಡಲಾಗಿದೆ ಎಂದು ಶಿಕ್ಷಕ ವಿಜಯಕುಮಾರ್ ಹೇಳಿದರು.

ಅವರು ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ವಿಪ್ರ ಸಮಾಜದ ಬಂಧುಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಆದಿ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಆದಿ ಶಂಕರಾಚಾರ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಉಪನ್ಯಾಸ ನೀಡಿ ಮಾತನಾಡಿ ಅನೇಕ ನಂಬಿಕೆಗಳ ಪ್ರಕಾರ, ಶ್ರೀ ಆದಿ ಶಂಕರಾಚಾರ್ಯರನ್ನು ಸಹ ಭಗವಾನ್ ಶಿವನ ಅವತಾರವೆಂದು ಪರಿಗಣಿಸಲಾಗಿದೆ. ಅವರ ಜೀವನವು ಮನುಕುಲಕ್ಕೆ ಸ್ಫೂರ್ತಿಯ ಮೂಲವಾಗಿದೆ. ಅವರ ಸಿದ್ಧಾಂತಗಳು ಮನುಷ್ಯನ ಬದುಕನ್ನೇ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ.

ಆದಿ ಗುರು ಶಂಕರಾಚಾರ್ಯರು ಎಂಟನೇ ಶತಮಾನದಲ್ಲಿ ಕೇರಳದ ಕೆಳದಿ ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ಅವರ ತಂದೆಯ ಹೆಸರು ಶಿವಗುರು ಮತ್ತು ತಾಯಿಯ ಹೆಸರು ಆರ್ಯಾಂಬಾ. ಶಂಕರಾಚಾರ್ಯರ ತಂದೆಯಾದ ಶಿವಗುರುಗಳು ಧರ್ಮಗ್ರಂಥಗಳಲ್ಲಿ ಪರಿಣತರಾಗಿದ್ದರು ಮತ್ತು ಅವರು ತಮ್ಮ ಮಗನಿಗೆ ಶಂಕರ ಎಂದು ಹೆಸರಿಸಿದರು ಎಂದರು,

ಕಾರ್ಯಕ್ರಮದಲ್ಲಿ ಪುರಸಭೆಯ ಪರಿಸರ ಅಭಿಯಂತರ ಶೇಖರ್ ಮಾತನಾಡಿ . ಅವರು ಚಿಕ್ಕ ವಯಸ್ಸಿನಲ್ಲಿಯೇ ವೇದಗಳ ಬಗ್ಗೆ ಜ್ಞಾನವನ್ನು ಪಡೆದುಕೊಳ್ಳುವ ಮೂಲಕ ಸನ್ಯಾಸಿಯಾದರು. ಅವರು ಕೇವಲ 32 ನೇ ವಯಸ್ಸಿನಲ್ಲಿ ತಮ್ಮ ದೇಹವನ್ನು ತ್ಯಜಿಸಿದರು. ಪ್ರಾಚೀನ ಭಾರತೀಯ ಉಪನಿಷತ್ತುಗಳ ತತ್ವಗಳು ಮತ್ತು ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಶ್ರೀ ಆದಿ ಶಂಕರಾಚಾರ್ಯರು ಕೆಲಸ ಮಾಡಿದರು. ಅದಲ್ಲದೆ ಅದ್ವೈತ ಸಿದ್ಧಾಂತ ವೇದಾಂತ ತತ್ವವನ್ನು ಆದ್ಯತೆ ಮೇಲೆ ಸ್ಥಾಪಿಸಿದರು. ಧರ್ಮದ ಹೆಸರಿನಲ್ಲಿ ಹರಡುತ್ತಿರುವ ವಿವಿಧ ರೀತಿಯ ಮೂಢ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮಾಡಿದರು. ಶತಮಾನಗಳಿಂದ ಪಂಡಿತರು ಧರ್ಮಗ್ರಂಥಗಳ ಹೆಸರಿನಲ್ಲಿ ಜನರಿಗೆ ನೀಡುತ್ತಿದ್ದ ತಪ್ಪು ಶಿಕ್ಷಣದ ಬದಲಾಗಿ ಸರಿಯಾದ ಶಿಕ್ಷಣ ನೀಡುವ ಕೆಲಸವನ್ನು ಆದಿ ಶಂಕರಾಚಾರ್ಯರು ಮಾಡಿದರು. ಇಂದು ಶಂಕರಾಚಾರ್ಯರನ್ನು ಕಾಲಕಾಲಕ್ಕೂ ಪೂಜಿಸಿಕೊಂಡು ಸ್ಮರಿಸಿಕೊಂಡು ಬರಲಾಗಿದೆ ಎಂದರು.



ಕಾರ್ಯಕ್ರಮದಲ್ಲಿ ವೇದಬ್ರಹ್ಮ ಬಾಲಾಜಿ ಸ್ವಾಮೀಜಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿಪ್ರಬಂಧಗಳಿಂದ ವೇದಘೋಷ ಪೂಜಾ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

ವಿಪ್ರಬಂಧಗಳಾದ ಎಸ್ ಗೋವಿಂದ್ ರಾವ್, ನಾಗೇಶ್, ರಘುನಾಥ್, ರಾಮಮೂರ್ತಿ, ಸೂಲಿನಾರಾಯಣ ಬಾಬು, ಎಸ್. ಸತೀಶ ಕುಮಾರ್. ವಿಪ್ರ ಮಹಿಳಾ ಸಂಘದ ಅಧ್ಯಕ್ಷರಾದ ವೀಣಾ ಪ್ರಕಾಶ್. ಗಾಯತ್ರಿ ಜಗದೀಶ್, ಪುರಸಭೆಯ ಪವನ್ ಜೋಶಿ ಮಂಜುನಾಥ್. ಅಡಿಗೆ ಗೋಪಾಲ್ ಇನ್ನು ಮತ್ತಿತ್ತರು ಹಾಜರಿದ್ದರು.

### ಕಂದಚಾರಗಳ ವಿರುದ್ಧ ಹೋರಾಟ ಮಾಡಿದ ಮಹಾ ಪುರುಷರು : ಶಾಸಕ ಸಿ. ಪುಟ್ಟರಂಗಶೆಟ್ಟಿ

# ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ

**ಚಾಮರಾಜನಗರ:** ಸಮಾನತೆಯ ಹರಿಕಾರ ಬಸವಣ್ಣ ಅವರು 12ನೇ ಶತಮಾನದಲ್ಲಿಯೇ ಜಾತಿ ಪದ್ಧತಿ ಹಾಗೂ ಮೌಢ್ಯ, ಕಂದಚಾರಗಳ ವಿರುದ್ಧ ಹೋರಾಟ ಮಾಡಿದ ಮಹಾ ಪುರುಷರು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಇಂದಿನ ಸಂಸತ್ ಭವನ ಹಾಗು ವಿಧಾನಸೌಧ ಅಂದು ಬಸವಣ್ಣ ಹಾಕಿಕೊಟ್ಟ ಪರಿಕಲ್ಪನೆಯಾಗಿದೆ. ಅನುಭವ ಮಂಟಪವನ್ನು ಸ್ಥಾಪನೆ ಮಾಡಿ, ಎಲ್ಲಾ ಜಾತಿ ವರ್ಗಗಳಿಗೆ ಅವಕಾಶ ಕಲ್ಪಿಸಿಕೊಡುವ ಮೂಲಕ ಸಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದರು. ಬಸವಣ್ಣ ಅವರ ಜಯಂತಿ ಆಚರಣೆ ಮಾಡುವ ಜೊತೆಗೆ ಅವರ ತತ್ವ ಅದರ್ಶಗಳನ್ನು ನಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಅವರ ಅಶಯದಂತೆ ನಡೆಯೋಣ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಸವಣ್ಣ ವಿಶ್ವ ಮಾನವ, ಜಗತ್ತಿಗೆ ಸಮಸಮಾಜ ನಿರ್ಮಾಣ ಮಾಡುವ ಕನಸು ಕಂಡು ಅದರಂತೆ ನಡೆಯಲು ಮುಂದಾದರು. ಸ್ತ್ರೀ ಸಮಾನತೆ ಮತ್ತು ಮೌಢ್ಯದ ವಿರುದ್ಧ ಜಾಗೃತಿ ಮೂಡಿಸಿದರು. ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಹೊರಟವರು. ಸರಳವಾಗಿ ಎಲ್ಲರಿಗೂ ಅರ್ಥವಾಗಿ ಮಾದರಿಯಲ್ಲಿ ವಚನಳನ್ನು ರಚನೆ ಮಾಡಿ, ಜನರಲ್ಲಿ ಧರ್ಮ ಜಾಗೃತಿ ಮೂಡಿಸಿದರು. ಸರ್ವರಿಗೂ ಒಳ್ಳೆಯದನ್ನು ಬಯಸುವ ಧರ್ಮವನ್ನು ರಚನೆಮಾಡಿದರು. ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನಮ್ಮೆಲ್ಲರ ಪುಣ್ಯ ಎಂದರು. ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್,ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ ಅಧ್ಯಕ್ಷ ಮಹಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ನಿರ್ದೇಶಕ ಆಲೂರು ಪ್ರದೀಪ್, ಮುಖಂಡರಾದ ಅಯ್ಯನಪುರ ಶಿವಕುಮಾರ್, ನಾಗವಳ್ಳಿ ನಾಗಯ್ಯ, ಸೈಯದ್ ರಫಿ, ಶಿವಮೂರ್ತಿ,ಕಾಗಲವಾಡಿ ಚಂದ್ರು, ಚಾಮುಲ್ ನಿರ್ದೇಶಕ ರೇವಣ್ಣ, ಜಿಲ್ಲಾ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಅಫ್ಜಲ್ ಷರೀಪ್, ಸುಹೇಲ್ ಆಲಿ ಖಾನ್, ಸೇವಾ ದಳದ ಅಧ್ಯಕ್ಷ ಹೊಂಗನೂರು ಜಯರಾಜ್, ರವಿಗೌಡ, ಹೆಬ್ಬಸೂರು ರಂಗಸ್ವಾಮಿ, ವೀರಭದ್ರಸ್ವಾಮಿ, ರವಿಕುಮಾರ್, ಕುಮಾರ್, ಪೃಥ್ವಿ ಮೊದಲಾದವರು ಇದ್ದರು.



# ಅಕ್ಕ ಮಹದೇವಿ ಜಯಂತಿ ಆಚರಣೆ



**ಚಾಮರಾಜನಗರ:** ಮೈಸೂರಿನಲ್ಲಿ ಸಂಘಟನೆಗೊಂಡಿರುವ ಚಾಮರಾಜೇಶ್ವರಿ ಅಕ್ಕನ ಬಳಗದಿಂದ ಅಕ್ಕಮಹದೇವಿ ಜಯಂತಿ ಅಂಗವಾಗಿ ರುದ್ರಭೂಮಿ ಕಾಯಕ ಜೀವಿ ನೀಲಮ್ಮ ಅವರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಮೈಸೂರಿನ ಕುವೆಂಪು ನಗರದ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷೆ ಮಾದಲಾಂಬಿಕಾ ಹಾಗು ಪದಾಧಿಕಾರಿಗಳು ನೀಲಮ್ಮ ಅವರನ್ನು ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ, ಸನ್ಮಾನಿಸುವ ಮೂಲಕ ಅವರ ಸೇವೆಯನ್ನು ಗುಣಗಾನ ಮಾಡಿದರು. ಅಕ್ಕಮಹದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾರೈ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, 12ನೇ ಶತಮಾನದಲ್ಲಿ ಶರಣೆ ಅಕ್ಕ ಮಹದೇವಿ ಅವರು ರಚನೆ ಮಾಡಿದ ವಚನಗಳು ಹಾಗೂ ಅವರಿದ್ದ ಸಮಾನತೆ ಮತ್ತು ಸ್ತ್ರಿಸ್ವಾತಂತ್ರ್ಯ ಬಗ್ಗೆ ಅವರಲ್ಲಿದ್ದ ಸಂವೇದನೆಗಳನ್ನು ತಿಳಿಸಿದರು. ಪ್ರಪಂಚದಲ್ಲಿರುವುದು ಎರಡನೇ ಜಾತಿ ಒಂದು ಹೆಣ್ಣು ಮತ್ತೊಂದು ಗಂಡು ಜಾತಿ. ಇಬ್ಬರು ಸಮಾನರು, ಇಲ್ಲಿ ಯಾರು ಮೇಲು ಅಲ್ಲ, ಕೀಳು ಅಲ್ಲ. ಸಮ ಸಮಾಜವನ್ನು ನಿರ್ಮಾಣ ಮಾಡಲು ಶ್ರಮಿಸಿದವರು ಅಕ್ಕ ಮಹದೇವಿ, ಅನುಭವ ಮಂಟಪದಲ್ಲಿ ವಚನಗಳನ್ನು ರಚನೆ ಮಾಡಿ, ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಪ್ರಥಮ ಮಹಿಳಾ ಹೋರಾಟಗಾರರು ಎಂಬ ಕೀರ್ತಿಗೆ ಅಕ್ಕಮಹದೇವಿ ಅವರು ಭಜನರಾಗಿದ್ದರು. ಅವರ ತ್ಯಾಗ ಮತ್ತು ಸ್ವಾಭಿಮಾನದ ಬದುಕು ನಮಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಬಳಗದ ಅಧ್ಯಕ್ಷೆ ಮಾದಲಾಂಬಿಕೆನಂಜುಂಡಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಚಾಮರಾಜನಗರ ಪ್ರದೇಶದಿಂದ ಮೈಸೂರಿನಲ್ಲಿ ನೆಲೆಸಿರುವ ನಾವೆಲ್ಲರು ಒಟ್ಟಾಗಿ ಚಾಮರಾಜೇಶ್ವರಿ ಅಕ್ಕನ ಬಳಗವನ್ನು ರಚನೆ ಮಾಡಿಕೊಂಡು ಸಂಘಟನೆ ಮಾಡುವ ಜೊತೆಗೆ ಅಕ್ಕಮಹದೇವಿ ಸೇರಿದಂತೆ ಶರಣ ಪರಂಪರೆಯನ್ನು ಪ್ರಚುರಪಡಿಸುವ ಜೊತೆಗೆ ಸಮಾಜವನ್ನು ಸಂಘಟನೆ ಮಾಡುವ ಉದ್ದೇಶವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಅಕ್ಕಮಹದೇವಿ ಜಯಂತಿ ಕಾರ್ಯಕ್ರಮದಲ್ಲಿ ರುದ್ರಭೂಮಿಯಲ್ಲಿ ಶವ ಸಂಸ್ಕಾರ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡು ಬದುಕು ಕಟ್ಟಿಕೊಂಡಿರುವ ನೀಲಮ್ಮ ಅವರ ಸಾಧನೆಯನ್ನು ಗಮನಿಸಿ, ಅವರನ್ನು ಸನ್ಮಾನಿಸುವ ಉತ್ತಮ ಕಾರ್ಯವನ್ನು ಬಳಗ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ, ಅಕ್ಕ ಮಹದೇವಿ ಅವರ ಚಿಂತನೆಯನ್ನು ಪ್ರತಿಯೊಬ್ಬರು ರೂಡಿಸಿಕೊಳ್ಳೋಣ ಎಂದರು.

ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ಬಳಗದ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಬಸವ ಬಳಗದ ಒಕ್ಕುಟದ ಅಧ್ಯಕ್ಷ ಎಂ. ಪ್ರದೀಪ್‌ಕುಮಾರ್, ಬಳಗದ ಉಪಾಧ್ಯಕ್ಷೆ ಮಂಜುಳಾನಂಜುಂಡಸ್ವಾಮಿ, ಕಾರ್ಯದರ್ಶಿ ಪ್ರತಿಮಾ ಮಂಜುನಾಥ್, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳುಉ ಹಾಗೂ ಬಳದ ಸದಸ್ಯರು ಉಪಸ್ಥಿತರಿದ್ದರು.

# ಡಾ.ರಾಜ್ ವಿಶ್ವಕ್ಕೆ ಮಾದರಿ

### ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಋಗ್ವೇದಿ ಅಭಿಮತ

**ಚಾಮರಾಜನಗರ:** ನಟಸಾರ್ವಭೌಮ ಡಾ. ರಾಜ್ ಕುಮಾರ್ ಅವರು ಸೂರ್ಯ, ಚಂದ್ರ ಇರುವ ತನಕ ಕಲಾಪ್ರಚಂಚದಲ್ಲಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಋಗ್ವೇದಿ ಅಭಿಪ್ರಾಯಪಟ್ಟರು.

ನಗರದ ಕನ್ನಡ ಸಾಹಿತ್ಯ ಪರಿಷತ್ತು ಕಚೇರಿಯಲ್ಲಿ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಗಾನ ಗಾಂಧರ್ವ ಡಾರಾಜ್ ಕುಮಾರ್ ಹಾಗೂ ಗಾನ ಕೋಗಿಲೆ ಎಸ್. ಜಾನಕಮ್ಮ ಅವರ ಜನ್ಮದಿನೋತ್ಸವ ಅಂಗವಾಗಿ ಗೀತಾಗಾಯನ ಹಾಗೂ ರಂಗಭೂಮಿ ಕಲಾವಿದರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ.

ಡಾ. ರಾಜ್‌ಕುಮಾರ್ ಅವರ ಜೀವನ, ಆದರ್ಶ, ನಡೆ, ನುಡಿ ಎಲ್ಲವೂ ಕೂಡ ಪರಿಶುದ್ಧವಾದದ್ದು. ನನಗೆ ಅತ್ಯಂತ ಶ್ರೇಷ್ಠವಾದ ಸ್ಥಾನವನ್ನು ನೀಡಿರುವ ಚಾಮರಾಜನಗರವೇ ನನಗೆ ಸ್ವರ್ಗದ ಬಾಗಿಲು ಎಂದು ಹೇಳುತ್ತಿದ್ದರು.

ಡಾ.ರಾಜ್‌ಕುಮಾರ್ ಅವರು ಮಹಾಪುರುಷರು, ಅವರ ಜೀವನ ಮೌಲ್ಯಗಳು, ಜೀವನ ಸಂದೇಶಗಳು, ಸಾಮಾಜಿಕ ಕಳಕಳಿ, ರಾಜಕೀಯ ಜೀವನ, ಪೌರಾಣಿಕ, ಇತಿಹಾಸ, ಯಾವುದೇ ಕ್ಷೇತ್ರದಲ್ಲೂ ನೋಡಿದರು ಅದರ ಪ್ರತಿರೂಪವಾಗುತ್ತಿದ್ದರು. ಮಯೂರ, ಬಬ್ರುವಾಹನ, ಕೃಷ್ಣದೇವರಾಯ, ಕನಕದಾಸರು, ರಾಘವೇಂದ್ರಸ್ವಾಮಿ, ರಾಮಚಂದ್ರ, ಕೃಷ್ಣ ಈ ಪಾತ್ರಗಳಲ್ಲಿ ಪ್ರತಿರೂಪವಾಗಿದ್ದರು. ಅವರು ಭಗವಂತನ ದಿವ್ಯ ಸಂಕಲ್ಪದಲ್ಲಿ ಬಂದಿರುವುದು. ರಾಜ್‌ಕುಮಾರ್ ನಮ್ಮ ಜಿಲ್ಲೆಯವರು ಎಂಬುವುದೇ ನಮ್ಮೆಲ್ಲರ ಪುಣ್ಯ, ಹೆಮ್ಮೆ ಎಂದರು. ಖ್ಯಾತ ಹಿನ್ನಲೆ ಗಾಯಕಿ ಗಾನಕೋಗಿಲೆ ಎಸ್.ಜಾನಕಮ್ಮ ಅವರು ತಮ್ಮ ಗಾಯನದ ಮೂಲಕ ಸ್ವರ್ಗದ ಬಾಗಿಲು ತೆರೆಯುವಂತೆ ಮಾಡುತ್ತಿದ್ದರು. ಅವರ ಜನ್ಮದಿನಾಚರಣೆಯನ್ನು ಚಾಮರಾಜನಗರದಲ್ಲಿ ಡಾ. ಬಾಲಸುಬ್ರಹ್ಮಣ್ಯಂ ಕಲಾವೇದಿಕೆ ಮೊಟ್ಟಮೊದಲು ಆಚರಣೆ ಮಾಡುತ್ತಿರುವುದು ನಿಜಕ್ಕೂ ಅರ್ಥಪೂರ್ಣವಾದದ್ದು ಎಂದರು.

ಡಾ. ರಾಜ್‌ಕುಮಾರ್ ಅವರ ಹೆಸರಿನಲ್ಲಿ ಪ್ರಶಸ್ತಿ ಪಡೆಯುವುದು ಪೂರ್ವಜನ್ಮದ ಪುಣ್ಯವಾಗಿದೆ. ಸಂವೃದ್ಧಿ ಸೇವೆಯನ್ನು ಸಲ್ಲಿಸುವ ಮೂಲಕ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲೆಯ ಅನೇಕ ರಂಗಭೂಮಿ ಕಲಾವಿದರು, ನಟರು ಗೌರವಯುತ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ರಾಜ್ ಕುಮಾರ್ ಅವರ ಹೆಸರಿನಲ್ಲಿ ಪ್ರಶಸ್ತಿ ಪಡೆಯುವುದು ಪೂರ್ವಜನ್ಮದ ಪುಣ್ಯವಾಗಿದೆ ಎಂದರು.

ಉದ್ಯಮಿ .ಎಜಯಸಿಂಹ, ಪರಿಸರ ಪ್ರೇಮಿ ಸಿ.ಎ.ವೆಂಕಟೇಶ್, ಬರಹಗಾರ ಲಕ್ಷ್ಮೀನರಸಿಂಹ, ರೋಟರಿ ಮಾಜಿ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ ಮಾತನಾಡಿದರು. ವೇದಿಕೆ ಆರ್. ಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

**ಪ್ರಶಸ್ತಿ ಪ್ರದಾನ :** ರಂಗಭೂಮಿ ಕಲಾವಿದರಾದ ಹರದನಹಳ್ಳಿ ನಟರಾಜು, ನಂಜೇದೇವನಪುರ ಪುರುಷೋತ್ತಮ, ವಿ.ಮಹದೇವಯ್ಯ,ವೆಂಕಟರ 'ಮಣಸ್ವಾಮಿ,ಗೋವಿಂದರಾಜು, ಮಲ್ಲಯ್ಯನಪುರ ಎಂ.ಎನ್.ಮಹದೇವ, ಗೋವಿಂದರಾಜು ಅಮ್ಮನಪುರ, ನಾಗರಾಜು ನಂಜನಗೂಡು ಅವರಿಗೆ ಡಾ. ರಾಜ್‌ಕುಮಾರ್, ಎಸ್.ಜಾನಕಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ರಂಗಭೂಮಿ ಕಲಾವಿದ ಘಟಂಕೃಷ್ಣ, ದೊರೆಸ್ವಾಮಿ, ವೇದಿಕೆ ಅಧ್ಯಕ್ಷ ಶಿವು ಜೋಸೆಫ್, ಕಾರ್ಯದರ್ಶಿ ರಾಜಣ್ಣ ಮಹೇಶ್ ಕುಮಾರ್ ಬಂಗಾರು ಇತರರು ಹಾಜರಿದ್ದರು.



## ನಿಮ್ಮನ್ನೂ ವಿಚಾರಣೆಗೆ ಕರೆಯಬೇಕಾಗುತ್ತದೆ: ಎಚ್‌ಡಿಕೆಗೆ ಪರಂ ಎಚ್ಚರಿಕೆ

**ಬೆಂಗಳೂರು:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಸೆಕ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಿಎಂ ಎಚ್ ಡಿ ಕುಮಾರಸ್ವಾಮಿ ಅವರನ್ನೂ ವಿಚಾರಣೆಗೊಳಪಡಿಸಬಹುದು ಎಂದು ಗೃಹ ಸಚಿವ ಜಿ ಪರಮೇಶ್ವರ ಹೇಳಿದ್ದಾರೆ.ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಇಂದು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ ಅವರು, 'ರಾಜಕೀಯ ನಾಯಕರು ಸಾರ್ವಜನಿಕ ಹೇಳಿಕೆಗಳನ್ನು ನೀಡುವಾಗ ಅಥವಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಹಂಚಿಕೊಳ್ಳುವಾಗ ಎಚ್ಚರದಿಂದಿರಬೇಕು. ಇದು ಸೂಕ್ಷ್ಮ ವಿಚಾರವಾಗಿದ್ದು, ಜವಾಬ್ದಾರಿ ಅರಿತು ಮಾತನಾಡಬೇಕು. ಹೆಚ್ ಡಿ ಕುಮಾರಸ್ವಾಮಿ ಅವರು ಮಾಜಿ ಸಿಎಂ ಆಗಿದ್ದು, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಪ್ರಕರಣದ ಕುರಿತು ಯಾವುದೇ ಹೇಳಿಕೆಗಳನ್ನು ನೀಡುವ ಮೊದಲು ಅಥವಾ ಸಾರ್ವಜನಿಕವಾಗಿ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುವ ಮೊದಲು ಜಾಗರೂಕರಾಗಿರಬೇಕು ಮತ್ತು ಇದು ಎಲ್ಲರಿಗೂ ಅನ್ವಯಿಸುತ್ತದೆ ಎಂದರು. ಅಂತೆಯೇ ಮಾತನಾಡುವಾಗ ಈ ಬಗ್ಗೆ ಎಚ್ಚರಿಕೆ ಇರಬೇಕು. ಬಾಯಿಗೆ ಬಂದಂತೆ ಹೇಳಿಕೆ ನೀಡಿದರೆ ಕಾನೂನು ಪ್ರಕಾರ ನಿಮ್ಮನ್ನೂ ಕರೆಸಿ ವಿಚಾರಣೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. 'ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರು ಯಾರೋ, ಏನೇನನ್ನೋ ಹೇಳುತ್ತಾರೆ. ಪ್ರತಿಯೊಂದು ಸಾರ್ವಜನಿಕ ಹೇಳಿಕೆಗಳಿಗೆ ನಾವು ಉತ್ತರ ಕೊಡುವುದಕ್ಕೆ ಆಗಲ್ಲ. ಇದು ಗಂಭೀರವಾದ ಪ್ರಕರಣ ಆಗಿರುವುದರಿಂದ ಇದರ ತನಿಖೆ ಪೂರ್ಣಗೊಳ್ಳುವವರೆಗೂ ಕೂಡ ಯಾವುದೇ ಮಾಹಿತಿಯನ್ನು ಸಾರ್ವಜನಿಕ ವಲಯಕ್ಕೆ ತಿಳಿಸಲು ಆಗುವುದಿಲ್ಲ. ಈ ಕೇಸ್ ಬಗ್ಗೆ ಸಾರ್ವಜನಿಕರಾಗಲೀ ಅಥವಾ ರಾಜಕೀಯ ನಾಯಕರಾಗಾಲೀ, ಯಾವುದೇ ಹೇಳಿಕೆಗಳನ್ನು ಕೊಡುವಾಗ ಎಚ್ಚರಿಕೆಯಿಂದ ಕೊಡಬೇಕು. ಈ ವಿಚಾರದ ಬಗ್ಗೆ ಹೆಚ್ಚು ಪ್ರತಿಕ್ರಿಯಿಸುವವರ ಮೇಲೆಯೂ ಕ್ರಮ ಆಗುತ್ತದೆ. ಯಾವುದೇ ರೀತಿಯ ಹೇಳಿಕೆ ಕೊಟ್ಟರೆ 410 ಪ್ರಕಾರ ಅವರನ್ನು ಕೂಡ ವಿಚಾರಣೆಗೆ ಕರೆಯಬೇಕಾಗುತ್ತದೆ. ಎಚ್.ಡಿ. ಕುಮಾರಸ್ವಾಮಿ ಪದೇ ಪದೆ ಸುದ್ದಿಗೋಷ್ಠಿ ನಡೆಸುತ್ತಿದ್ದಾರೆ. ಈ ವಿಷಯವನ್ನು ಅವರು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂದು ಪರಮೇಶ್ವರ್ ಹೇಳಿದರು.



### ಅನನ್ಯ ಕಾಲೇಜಿನ ಶ್ರೀಶಂಕರ ಜಯಂತಿ ದಿನಾಚರಣೆ

**ಅನನ್ಯ ಇನ್ಸ್ಟಿಟ್ಯೂಟ್ ಅಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್‌ನ ವತಿಯಿಂದ ಮೇ 12 ರಂದು ಭಾನುವಾರ ಶ್ರೀ ಶಂಕರ ಜಯಂತಿ ದಿನಾಚರಣೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಅನನ್ಯ ಸಂಸ್ಥೆಯ ಟ್ರಸ್ಟಿಯಾದ ಹೆಚ್.ಹರೀಶ್, ಅನನ್ಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ವಿಶ್ವಾಸ್, ಅನನ್ಯ ಸಂಸ್ಥೆಯ ಕಾಮರ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ.ದೇವಕಿ ಪ್ರಸಾದ್ ಹಾಗೂ ಕಾಲೇಜಿನ ಮುಖ್ಯಸ್ಥರು, ಉಪನ್ಯಾಸಕ ವರ್ಗದವರು ಹಾಜರಿದ್ದರು.**

# ಶ್ರೀದೇವಿ ವಿದ್ಯಾ ಮಂದಿರ ವಿದ್ಯಾರ್ಥಿಗಳು: ಶೇ.93.28 ಸಾಧನೆ

**ತುಮಕೂರು:** ನಗರದ ಶಿರಾ ರಸ್ತೆಯ ಶ್ರೀದೇವಿ ವಿದ್ಯಾ ಮಂದಿರದ ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಫಲಿತಾಂಶವನ್ನು ಪಡೆದಿದ್ದಾರೆ. ವಿದ್ಯಾರ್ಥಿಯಾದ ರುಕ್ಯೆಯಾ ಅಂಜುಮ್ 583 (93.28%), ಪಿ.ಬಿಂದು ಶ್ರೀ 561 (89.76%), ತ್ರಿಶಾ ಆರ್ 539 (86.24%), ಜ್ಞಾನ ಕುಮಾರ್ 533 (85.28%), ಅರ್ಫಾಭಾನು 520 (83.2%), ಆರ್.ವಿದ್ಯಾಶ್ರೀ 517(82.72%), ಜ್ಯೋತಿ ಡಿ.ಎಂ., 514 (82.24%),ಅಮೂಲ್ಯ ಜಿ.ವಿ., 512 (81.92%), ಸನಿಕಾ ಎಲ್ .ಯು, 502 (80.32%), ಜ್ಯೋತಿ ಕೆ.ಎನ್, 490 (78.04%), ಜಿ.ನಾಗಲಕ್ಷ್ಮೀ 456 (72.96%), ಯಮುನಾ 431 (68.96%), ಜೀಶನ್ 424 (67.84%), ವಿನುತ 413 (66.08%), ಎಸ್.ಡಿ.ಶರಣಪ್ಪ 379 (60.04%), ಸೃಷ್ಟಿ 376 (60.16%) ಅಂಕಗಳನ್ನು ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾಗಿದ್ದಾರೆ. ಹಾಗೂ ಡಿಸ್ಟಿಂಕ್ಷನ್ 04, ಪ್ರಥಮ ದರ್ಜೆ 12, ಒಟ್ಟಾರೆಯಾಗಿ ಶೇ.93.28%ರಷ್ಟು ಉತ್ತೀರ್ಣರಾಗಿದ್ದಾರೆ. ಶ್ರೀ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥರಾದ ಡಾ. ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರು ಶ್ರೀಮತಿ ಶಾಂತದುರ್ಗಾದೇವಿ, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಡಾ.ಲಾವಣ್ಯ, ಅಂಬಿಕಾ ಎಂ ಹುಲಿನಾಯ್ಕರ್ ಹಾಗೂ ಮುಖ್ಯಶಿಕ್ಷಕರಾದ ಆರ್. ವಿಜಯ್‌ಕುಮಾರ್ ಹಾಗೂ ಬೋಧಕ- ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.



## ನಗರವಾಸಿಗಳ ಮನರಂಜಿಸಿದ ಹಳ್ಳಿ ಸೊಗಡಿನ ರತಿ ಕಲ್ಯಾಣ ಬಯಲಾಟ

**ಸಿರುಗುಪ್ಪ :** ನಗರದ ಶ್ರೀ ಯಲ್ಲಮ್ಮ ದೇವಿ ಪ್ರಾಥಮಿಕ ಹಾಗೂ ಪ್ರೌಡ ಶಾಲಾ ಆವರಣದಲ್ಲಿ ಶ್ರೀ ಬಸವ ಜಯಂತಿ ಅಂಗವಾಗಿ ಶ್ರೀ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ನಡೆದ ರತಿ ಕಲ್ಯಾಣ ಅರ್ಥಾತ್ ಕೌಡ್ಲಿಕನ ವಧೆ ಎಂಬ ಸಾಮಾಜಿಕ ಬಯಲು ನಾಟಕವು ನಗರವಾಸಿಗಳ ಮನರಂಜಿಸಿತು. ನಾಟಕದ ಉದ್ಘಾಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿ.ಎಮ್. ಸತೀಶ್ ಅವರು ಇತ್ತೀಚಿನ ಸಾಮಾಜಿಕ ಜಾಲಾತಾಣಗಳಿಂದಾಗಿ ಮರೆಯಾಗುತ್ತಿರುವ ಇಂತಹ ಹಳ್ಳಿ ಸೊಗಡಿನ ಸಾಂಸ್ಕೃತಿಕ ಬಯಲಾಟದ ಕಲೆಯನ್ನು ನಗರದಲ್ಲಿ ಪ್ರದರ್ಶಿಸುತ್ತಿರುವ ನಾಟಕ ಮಂಡಳಿಯ ಕಾರ್ಯ ಅಭಿನಂದನಾರ್ಹವಾದದ್ದು. ನೆರೆಯ ಸೀಮಾಂಧ್ರ, ಹಾಗೂ ನಮ್ಮ ಕರ್ನಾಟಕದ ಗಡಿಭಾಗದಲ್ಲಿನ ಕಲಾವಿಧರನ್ನು ಸೇರಿಸಿ ಮಹಾಭಾರತದ ಸಂದೇಶವನ್ನು ಸಾರುವ ಈ ನಾಟಕವು ಯಶಸ್ವಿಯಾಗಿ ಮತ್ತು ಶಾಂತಿಯುತವಾಗಿ ಜರುಗಲೆಂದರು.ತಾಲೂಕಿನ ಬೂದುಗುಪ್ಪ ವಿಶ್ವನಾಥ ಸಾಹುಕಾರ್ ಅವರು ನಿರ್ಮಿಸಿದ ರಂಗಸಜ್ಜಿಕೆಯಲ್ಲಿ ಅರಳಿಗನೂರು, ರಾರಾವಿ, ಮುದೇನೂರು, ಕೆ.ಸೂಗೂರು, ನಾಗಲಾಪುರ, ನೆರೆಯ ಆದೋನಿ ತಾಲೂಕಿನ ಗ್ರಾಮಗಳ ಪಾತ್ರಧಾರಿಗಳು ಅಭಿನಯಿಸಿದ್ದು, ಸುತ್ತಮುತ್ತಲಿನ ಗ್ರಾಮದಿಂದಲೂ ಕಲಾಭಿಮಾನಿಗಳು, ಬಂದುಗಳು, ವಿವಿಧ ವಾರ್ಡ್ಗಳ ಸಾವಿರಾರು ಜನರು ನೆರೆದಿದ್ದರು. ಹಾರ್ಮೋನಿಯಂ ಮಾಸ್ಟರ್‌ಗಳಾದ ಕರಿಬಸವನಗೌಡ, ಸುಬ್ಬಯ್ಯ, ಪಂಪಯ್ಯಸ್ವಾಮಿ ತಬಲವಾದಕ ಯರಿಸ್ವಾಮಿ,ಪ್ಯಾಡ್ ವಿಜಯ್ ಕುಮಾರ್ ಅವರ ಸಂಗೀತದಲ್ಲಿ ಮಹಾಭಾರತದಲ್ಲಿನ ಪಾತ್ರಗಳಾದ ಬಾಲಕೃಷ್ಣ,ಧರ್ಮರಾಯ, ಭೀಮಸೇನ, ಅರ್ಜುನ, ಕಮಲರಾಜ, ನಾರದ, ಮನ್ಮಥ, ಕೌಡ್ಲಿಕನ ಪಾತ್ರಧಾರಿಗಳು. ಹಾಗೂ ಕೂಡ್ಲಿಗಿ ತಾಲೂಕಿನ ಮಹಿಳಾ ಕಲಾವಿಧೆಯರಾದ ಕಮಲಗಾಂದಿ ರುಕ್ಮಿಣಿ ಪಾತ್ರದಲ್ಲಿ ಜ್ಯೋತಿ, ರತಿ ಪಾತ್ರದಲ್ಲಿ ಬ್ಲಾಕ್ ಸುಮಾ, ದ್ರೌಪದಿ ಪಾತ್ರದಲ್ಲಿ ಲಕ್ಷ್ಮಿ?ಮ ಸಾರಥಿಯಾಗಿ ಶಿವು ಅಭಿನಯಿಸಿದರು. ಇದೇ ವೇಳೆ ಶಾಲೆಯ ಅಧ್ಯಕ್ಷರಾದ ವೈ.ಡಿ.ವೆಂಕಟೇಶ, ನಾಟಕ ಮಂಡಳಿಯ ವ್ಯವಸ್ಥಾಪಕರಾದ ಜಿ.ಹುಲುಗಪ್ಪ, ಆರ್. ಯೋಗಾನಂದ, ಪರಶುರಾಮ, ಹೆಚ್.ಬಿ.ಅಮರೇಶ ಹಾಗೂ ಹಿನ್ನಲೆಗಾಯಕರು ಇದ್ದರು.

## ಪಂದ್ಯಾವಳಿ ಯಶಸಿಗೆ ಫೈನಾಪೆಲ್ ಮಂಜು ಸಲಹೆ

**ಚಾಮರಾಜನಗರ:** ನಗರದಲ್ಲಿ ಭಗೀರಥ ಪ್ರಿಮೀಯರ್ ಲೀಗ್ ಐಪಿಎಲ್ ಸೀಸನ್-2 ಲೋಗೋವನ್ನು ಮಲೆ ಮಹದೇಶ್ವರ ಫ್ರೂಟ್ಸ್ ಮಾಲೀಕರಾದ ಫೈನಾಪಲ್ ಮಂಜು ಬಿಡುಗಡೆ ಮಾಡಿದರು. ಈ ವೇಳೆ ಮಾತನಾಡಿದ ಅವರು ಕ್ರೀಡಾಕೂಟಗಳಲ್ಲಿ ಸೋಲುಗೆಲುವು ಸಹಜ, ಎರಡನ್ನು ಸಮಾನವಾಗಿ ಸ್ವೀಕರಿಸುವ ಮೂಲಕ ಕ್ರೀಡಾಪಟುಗಳು ಕ್ರೀಡಾಕೂಟಗಳಲ್ಲಿ ಭಾಗವಹಿಸಬೇಕು, ಯಾವುದೇ ಪಂದ್ಯಾವಳಿಯನ್ನು ಆಯೋಜನೆ ಮಾಡಿದರೂ, ನಿಮ್ಮ ಜೊತೆ ಕೈ ಜೋಡಿಸುತ್ತೇವೆ, ನಮ್ಮ ಸಹಕಾರ ಇದ್ದೇ ಇರುತ್ತದೆ. ಮುಂಬರುವ ಭಗೀರಥ ಪ್ರೀಮಿಯರ್ ಲೀಗ್ ಐಪಿಎಲ್ ಸೀಸನ್ -2 ಪಂದ್ಯಾವಳಿಯನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಲೋಗೋ ಬಿಡುಗಡೆ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ರಾಜೇಂದ್ರ, ಮಾರ್ಕೆಟ್ ಅಧ್ಯಕ್ಷ ಕಿಟ್ಟಿ, ಜವರ, ಸಲೀಂ, ಕೆ.ಟಿ.ಆರ್ ಮಹೇಶ್, ಆರ್.ಪಿ. ರುದ್ರ, ರಾಹುಲ್ ಭಾಸ್ಕರ್, ಮನು, ಸಮೀ ಉಲ್ಲಾ ಇತರರು ಭಾಗವಹಿಸಿದ್ದರು.



## ಅಯ್ಯಪ್ಪಸ್ವಾಮಿ ಪ್ರತಿಷ್ಠಾಪನೆ

**ಕೋಲಾರ:** ಇಲ್ಲಿನ ಅರಾಭಿಕೊತ್ತನೂರು ಗೇಟ್‌ನಲ್ಲಿ ಶಬರಿಮಲೆ ಸ್ವಾಮಿ ಅಯ್ಯಪ್ಪ ಸೇವಾ ಸಮಿತಿಯಿಂದ ನಿರ್ಮಾಣವಾಗಿರುವ ಅಯ್ಯಪ್ಪಸ್ವಾಮಿ, ಗಣಪತಿ, ವಾಲಿ ಕಡುತಸ್ವಾಮಿ, ಕರುಪ್ಪಸ್ವಾಮಿ, ಕರುಪೈಅಮ್ಮ ದೇವರುಗಳ ನೂತನ ಕುಂಬಾಭಿಷೇಕ ಹಾಗೂ ಪ್ರತಿಷ್ಠಾಪನಾ ಮಹೋತ್ಸವ ಭಾನುವಾರ ನಡೆಯಲಿದೆ. ಕೇರಳದ ಕೆ.ಜಯರಾಮನ್ ನಂಬೂತ್ರಿ ತಂತ್ರಿ ಸ್ವಾಮಿಗಳ ನೇತೃತ್ವದಲ್ಲಿ ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ಸನ್ನಿಧಾನದ ಮೇಲ್ ಶಾಂತಿ ಮತ್ತು ತಂಡದವರಿಂದ ಪೂಜಾ ಕಾರ್ಯಾ ನಡೆಯುತ್ತಿದ್ದು, ನಂತು ಬಿಂಬ ಪ್ರತಿಷ್ಟಾಪನೆ, ವಾಸ್ತುಹೋಮ ನಡೆಯಲಿವೆ. ಜೀವ ಕಲಶವಿಗ್ರಹ ಮೆರವಣಿಗೆ ಬೆಳಗ್ಗೆ 8 ಗಂಟೆಯಿಂದ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಗೆ ವಿಗ್ರಹಗಳ ಪ್ರತಿಷ್ಟಾಪನೆ ಹಾಗೂ ಅಭಿಷೇಕ, ಕಲಶಾಭಿಷೇಕ, ಮಹಾಮಂಗಳಾರತಿ ಅನ್ನದಾನ ನಡೆಯಲಿದೆ. ರಾತ್ರಿ 7 ಗಂಟೆಗೆ ಅಯ್ಯಪ್ಪ ಸ್ವಾಮಿ ಉತ್ಸವ ಮೂರ್ತಿಯನ್ನು ಅರಾಭಿಕೊತ್ತನೂರು ಗ್ರಾಮದಲ್ಲಿ ಕಲಾ ತಂಡಗಳೊಂದಿಗೆ ಪಲ್ಲಕ್ಕಿ ಮೆರವಣಿಗೆ ನಡೆಸಲಾಗುವುದು. ಕೆ.ಕಿರಣ್ ಕುಮಾರ್ ಅವರು ದೇಗುಲ ನಿರ್ಮಾಣದ ರೂವಾರಿ ಆಗಿದ್ದು 9 ವರ್ಷದಿಂದ ಅಯ್ಯಪ್ಪ ಮಾಲೆ ಹಾಕುತ್ತಿರುವ ನಮಗೆ ವ್ರತಾಚರಣೆಗೆ ಸಮರ್ಪಕವಾದ ಸ್ಥಳ ಇಲ್ಲವಾದ್ದರಿಂದ ಕೊರತೆಯನ್ನು ನಿವಾರಿಸಲು ದೇವಾಲಯ ನಿರ್ಮಾಣ ಮಾಡಲಾಗಿದೆ ಎಂದು ಹೇಳುತ್ತಾರೆ. ಹೊಸ ದೇವಸ್ಥಾನ ಭಾನುವಾರ ಉದ್ಘಾಟನೆ ಆಗುತ್ತಿದ್ದರೂ ಮಕರ ಸಂಕ್ರಾತಿ ವೇಳೆಗೆ ಮತ್ತಷ್ಟು ಸಜ್ಜುಗೊಳಿಸುವ ಮೂಲಕ ಕೆಂದಟ್ಟಿ ಬೆಟ್ಟದಲ್ಲಿ ಮಕರ ಜ್ಯೋತಿ ಏರ್ಪಡಿಸಲಾಗುವುದು. ಕೇರಳದ ಅಯ್ಯಪ್ಪ ಸ್ವಾಮಿ ದೇಗುಲದ ವೇಳಾಪಟ್ಟಿಯಂತೆ ಪೂಜಾಧಿಗಳನ್ನು ನಿರ್ವಹಣೆ ಮಾಡಲಾಗುವುದು.ಇದಕ್ಕಾಗಿ ಅನ್ನದಾನ ಕೇಂದ್ರ, ಶೌಚಾಲಯ, ಇರುಮುಡಿ ಕಟ್ಟಲು ಅಗ್ನಿಕುಂಡ ಸ್ಥಾಪನೆ ಮಾಡಲಾಗಿದೆ. ಸೇದು ಬಾವಿಯಲ್ಲಿ 20 ಅಡಿಗೆ ನೀರು ಸಿಕ್ಕಿರುವುದು ಅಯ್ಯಪ್ಪನ ದಯೆ ಆಗಿದ್ದು 18 ಮೆಟ್ಟಿಲಿಗೆ ಪಂಚಲೋಹ ಅಳವಡಿಕೆ, ದ್ವಾರಬಾಗಿಲು ನಿರ್ಮಾಣ, ವಸತಿಗೃಹ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮುಖಂಡ ಕಿರಣ್ ಕುಮಾರ್ ತಿಳಿಸಿದ್ದಾರೆ.

# ಎಸ್‌ಎಸ್‌ಎಲ್ ಸಿ, ಪಿಯುಸಿ ಮಹತ್ವದ ಘಟ್ಟ

**ಪಾಂಡವಪುರ:** ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ, ಪಿಯುಸಿ ಅತ್ಯಂತಮಹತ್ವದ ಘಟ್ಟವಾಗಿದೆ. ಹೆಚ್ಚು ಪರಿಶ್ರಮ ಹಾಕಿದರೆ ಏನನ್ನಾದರೂ ಸಾಧಿಸಬಹುದು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರೌಢಶಾಲಾ ವಿಭಾಗ) ಉಪ ಪ್ರಾಂಶುಪಾಲ ಎನ್.ಮಹದೇವಪ್ಪ ಹೇಳಿದರು.

ತಾಲೂಕಿನ ಜಯಂತಿನಗರ ಕ್ರಾಸ್ ನಲ್ಲಿರುವ ಶ್ರೀ ಶಂಭುಲಿಂಗೇಶ್ವರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ದಿ.ಎ.ಎನ್.ಮಾಯಣ್ಣೇಗೌಡ ಎರೇಗೌಡನಹಳ್ಳಿ, ದಿ.ಕೆ.ಆರ್ .ಪುಟ್ಟೇಗೌಡ ಕೆನ್ನಾಳು ಹಾಗೂ ದಿ.ತೊಟ್ಟಿಲು ಪುಟ್ಟೇಗೌಡ ಹುಲಿವಾನ ಅವರ ಸ್ಮರಣಾರ್ಥ ಆಯೋಜಿಸಿದ್ದ 2023-24ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಹಿಂದಿನ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶ ಹಾಗೂ ಈಗಿನ ಫಲಿತಾಂಶ ಗಮನಿಸಿದರೆ ವಿದ್ಯಾರ್ಥಿಗಳು ಅವರ ಸ್ವಂತ ಜ್ಞಾನದಿಂದ ಗೆದ್ದು ಬಂದಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಇದು ನೈಜ ಫಲಿತಾಂಶವಾಗಿದ್ದು, ಯಶಸ್ಸು ಯಾರ ಸ್ವತ್ತಲ್ಲ, ಪರಿಶ್ರಮಪಟ್ಟವರಿಗೆ ಮಾತ್ರ ಯಶಸ್ಸು ದೊರಕಲಿದೆ ಎಂದರು.

ಸಾಧನೆ ಮಾಡಲೋರಟ ಸಾಧಕರಿಗೆ ಧೈರ್ಯ ಪ್ರಮುಖವಾಗಿ ಬೇಕಿದೆ. ಪೋಷಕರು ಮನೆಯಲ್ಲಿ ಮಕ್ಕಳಿಗೆ ಒಳ್ಳೆಯ ವಾತಾವರಣ ನಿರ್ಮಿಸುವ ಜತೆಗೆ ಅವರಿಗೆ ಬೇಕಾದ ಪೂರಕ ವ್ಯವಸ್ಥೆಗಳನ್ನು ಒದಗಿಸಿಕೊಡಬೇಕು. ಆದರೆ ನಾವು ಮೊಬೈಲ್ ಯುಗದಲ್ಲಿದ್ದೇವೆ. ಇದು ಸದುಪಯೋಗಕ್ಕಿಂತಲೂ ಮಕ್ಕಳನ್ನು ಅಧೋಗತಿಗೆ ತಲುಪಿಸಲಿದೆ. ಒಳಿತಿಗಿಂತ ಕೆಟ್ಟದನ್ನೆ ಅವಲಂಬಿಸುವುದೇ ಹೆಚ್ಚು. ಹೀಗಾಗಿ ಪೋಷಕರು ತಮ್ಮ ಮಕ್ಕಳಿಗೆ ಮೊಬೈಲ್ ಬಳಕೆ ಮಾಡಿ ಓದಿನತ್ತ ಗಮನಹರಿಸುವಂತೆ ತಿಳಿಹೇಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಓದಿನ ಜತೆಗೆ ಸಂಸ್ಕಾರ ಇಟ್ಟುಕೊಳ್ಳಬೇಕು. ಆದರೆ ಇತ್ತೀಚಿನ ವಿದ್ಯಾರ್ಥಿಗಳ ಬದುಕು ಸಂಸ್ಕಾರ ರಹಿತ ಬದುಕಾಗಿದೆ. ಮಕ್ಕಳು ತಂದೆ-ತಾಯಿಯ ಮಾತನ್ನೇ ಕೇಳುವುದಿಲ್ಲ. ಭಾರತೀಯ ಸಂಸ್ಕತಿಯಲ್ಲಿ ಸಂಸ್ಕಾರ ಎನ್ನುವುದು ಬಹು ದೊಡ್ಡದು. ಹೀಗಾಗಿ ಮಕ್ಕಳಿಗೆ ವಿದ್ಯೆಯಷ್ಟೆ ಸಂಸ್ಕಾರ ಕೂಡ ಅಷ್ಟೇ ಮುಖ್ಯ. ನಮ್ಮ ಸುತ್ತಮುತ್ತಲಿನ ಪರಿಸರ ಹಾಳಾಗದಂತಾಗಿರಲು ಮಕ್ಕಳಿಗೆ ಸಂಸ್ಕಾರ ಅತ್ಯಗತ್ಯ ಎಂದರು.

ಡಿಎಂಎಸ್ ಜ್ಞಾನ ಕುಟೀರದ ಮುಖ್ಯ ಶಿಕ್ಷಕ ಜಗದೀಶ್ ಮಾತನಾಡಿ, ಎಲ್ಲಾ ದಾನಗಳಿಗಿಂತಲೂ ವಿದ್ಯಾದಾನ ಶ್ರೇಷ್ಟವಾದದು. ಜೀವನದ ಕೊನೆವರೆಗೆ ವಿದ್ಯೆ ಇದ್ದೇ ಇರುತ್ತದೆ. ಕಳೆದ ಮೂರು ದಶಕಗಳಿಂದಲೂ ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಂ.ಪಂಚಲಿಂಗೇಗೌಡರು ಗ್ರಾಮೀಣ ಮಕ್ಕಳಿಗೆ ವಿವಿಧ ಕೋರ್ಸ್‌ಗಳನ್ನು ತೆರೆದು ವಿದ್ಯಾದಾನ ಮಾಡುತ್ತಿರುವುದು ಶ್ಲಾಘನೀಯ. ಆ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆ ನಡೆಸುವುದೇ ದುಸ್ತರ. ಪಂಚಲಿಂಗೇಗೌಡರು ಗ್ರಾಮೀಣ ಮಕ್ಕಳ ಭವಿಷ್ಯ ರೂಪಿಸುವ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ನಿಬಾಯಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಂ.ಪಂಚಲಿಂಗೇಗೌಡ ಮಾತನಾಡಿ, ಎಷ್ಟೇ ಕಷ್ಟವಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಪೋಷಕರು ಪರಿಶ್ರಮಪಡುತ್ತಾರೆ. ಹೀಗಾಗಿ ಮಕ್ಕಳು ತಂದೆ-ತಾಯಿಗಳಿಗೆ ಕೃತಜ್ಞತೆ ಅರ್ಪಿಸಬೇಕು ಎಂದರು. ಕಳೆದ 35 ವರ್ಷಗಳಿಂದಲೂ ಸಂಸ್ಥೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸದ ಜತೆಗೆ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಏಕ ಕಾಲಕ್ಕೆ ಐದು ತರಬೇತಿ ಶಾಲೆಗಳನ್ನು ಪ್ರಾರಂಭಿಸಿ ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ನಮ್ಮ ಸಂಸ್ಥೆಯದ್ದು. ತಾಲೂಕಿನಲ್ಲಿ ಪ್ರಪ್ರಥಮ ಬಾರಿಗೆ ವಾಹನ ವ್ಯವಸ್ಥೆ ಮಾಡಿದ್ದು ಕೂಡ ನಮ್ಮ ಸಂಸ್ಥೆ ಎಂದರು.

ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಹೊನ್ನರಾಜು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಬಾಲಚಂದ್ರ, ಕಾರ್ಯದರ್ಶಿ ಎಂ.ಪಂಚಲಿಂಗೇಗೌಡ, ಆಡಳಿತಾಧಿಕಾರಿ ಪಿ.ಅಕ್ಷಯ್, ಪಿಯು ಕಾಲೇಜು ಪ್ರಾಂಶುಪಾಲೆ ಆರ್.ವಿ.ಸೌಮ್ಯ, ಮುಖ್ಯ ಶಿಕ್ಷಕ ಕೆ.ಆರ್.ಮೋಹನ್ ರಾಜು, ಡಿಎಂಎಸ್ ಜ್ಞಾನ ಕುಟೀರ ವಿದ್ಯಾಸಂಸ್ಥೆ ಮುಖ್ಯ ಶಿಕ್ಷಕ ಜಗದೀಶ್, ಹಿರಿಯ ಪತ್ರಕರ್ತ ಎನ್.ಕೃಷ್ಣೇಗೌಡ ಇತರರಿದ್ದರು

# ನಾಳೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ನಿಮಗಿದೋ ನಮ್ಮ ನಮನ ಕಾರ್ಯಕ್ರಮ

**ಚಾಮರಾಜನಗರ:** ಮಾಜಿ ಕೇಂದ್ರ ಸಚಿವ, ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ನಿಧನದ ಗೌರವಾರ್ಥ ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟ, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳ ಬಳಗದ ವತಿಯಿಂದ ಮೇ.14 ರಂದು ಮಂಗಳವಾರ ಸ್ವಾಭಿಮಾನಿ ಚಕ್ರವರ್ತಿ ವಿ.ಶ್ರೀನಿವಾಸಪ್ರಸಾದ್ ನಿಮಗಿದೋ ನಮ್ಮ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ನಗರದ ಡಾ.ರಾಜ್ ಕುಮಾರ್ ರಂಗಮಂದಿರದಲ್ಲಿ ಬೆಳಿಗ್ಗೆ 11 ಗಂಟೆ ಆರಂಭವಾಗುವ ಸಮಾರಂಭದ ದಿವ್ಯಸಾನಿಧ್ಯವನ್ನು ಕೊಳ್ಳೇಗಾಲದ ಜೇತವನ ಬೌದ್ಧವಿಹಾರದ ಮನೋರಖ್ಖಿತ ಭಂತೇಜಿ ವಹಿಸಲಿದ್ದಾರೆ. ಹಿರಿಯ ಸಾಹಿತಿಗಳಾದ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವವರು, ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟರು ಅಧ್ಯಕ್ಷತೆ ವಹಿಸುವವರು, ಕೊಳ್ಳೇಗಾಲ ದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರು ಪುಷ್ಪಾರ್ಚನೆ ಮಾಡುವವರು, ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ತು ನಿರ್ದೇಶಕ ಪ್ರೊ. ಡಿ.ಆನಂದ್ ಹಾಗೂ ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ.ಆರ್. ರಾಜು ನುಡಿನಮನ ಸಲ್ಲಿಸುವವರು, ವಿ.ಶ್ರೀನಿವಾಸ ಪ್ರಸಾದ್ ಅವರ ಶ್ರೇಷ್ಠ ಪುತ್ರಿ ಪ್ರತಿಮಾ ಪ್ರಸಾದ್, ವಿ.ಶ್ರೀನಿವಾಸಪ್ರಸಾದ್ ಅವರ ಆಪ್ತರಾದ ಎಂ.ವೆಂಕಟಪತಿ ತಿರುಪ್ಪೂರ್ ಉಪಸ್ಥಿತಿ ವಹಿಸಲಿದ್ದಾ ಈ ಕಾರ್ಯಕ್ರಮಕ್ಕೆ ಸಂಘ, ಸಂಸ್ಥೆಯ ಪದಾಧಿಕಾರಿಗಳು, ಶ್ರೀನಿವಾಸ್ ಪ್ರಸಾದ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಮಂಜುನಾಥ್ ಮನವಿ ಮಾಡಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಕೆ.ಎಂ.ನಾಗರಾಜು, ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ನಗರಸಭಾ ಮಾಜಿ ಸದಸ್ಯ ಬಸವರಾಜು, ಎಸ್ಸಿ ಎಸ್ಟಿ ಪದವೀಧರ ಒಕ್ಕೂಟ ದ ಅಧ್ಯಕ್ಷ ನಾಗಸುಂದರ್ ಹಾಜರಿದ್ದರು.



# ಸಂಜೆ ಟಿಪ್ಸ್

## ಆರ್.ಎ.ಕೆ ಸೆರಾಮಿಕ್ಸ್ ನಿಂದ ಅತ್ಯಾಧುನಿಕ 8500- ಚದರ ಅಡಿ ಎಕ್ಸ್ಪೀರಿಯೆನ್ಸ್ ಸೆಂಟರ್‌ಗೆ ಚಾಲನೆ

ಸೆರಾಮಿಕ್ಸ್ ವಲಯದ ಜಾಗತಿಕ ಮುಂಚೂಣಿಯ ಆರ್.ಎ.ಕೆ. ಸೆರಾಮಿಕ್ಸ್ ತನ್ನ ಅತ್ಯಾಧುನಿಕ, ವಿಶಾಲ 8500 ಚದರ ಅಡಿ ಎಕ್ಸ್ಪೀರಿಯೆನ್ಸ್ ಸೆಂಟರ್ ಅನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದ್ದು ಇದು ಕರ್ನಾಟಕದಲ್ಲಿ ಅತ್ಯಂತ ದೊಡ್ಡ ತಾಣಗಳಲ್ಲಿ ಒಂದಾಗಿಸಿದೆ. ಈ ವಿಶಿಷ್ಟ ತಾಣವನ್ನು ಆರ್.ಎ.ಕೆ. ಸೆರಾಮಿಕ್ಸ್ ಇಂಡಿಯಾದ ಸಿಇಒ ಅನಿಲ್ ಕೆ. ಬೀಜಾವತ್ ಉದ್ಘಾಟಿಸಿದ್ದು ಇದು ಶೋರೂಂ ಮಾತ್ರವಲ್ಲ ಆವಿಷ್ಕಾರ ಹಾಗೂ ಸ್ಫೂರ್ತಿಯ ಕೇಂದ್ರವೂ ಆಗಿದೆ. ಇದು ಗ್ರಾಹಕರಿಗೆ ಪ್ರೀಮಿಯಂ ವಿನ್ಯಾಸದ ಪರಿಹಾರಗಳನ್ನು ಹೊಂದುವ ವಿಧಾನವನ್ನು ಮರುವ್ಯಾಖ್ಯಾನಿಸಲಿದ್ದು ನಿಜಕ್ಕೂ ತಲ್ಲೀನಗೊಳಿಸುವ ಅನುಭವ ನೀಡುತ್ತದೆ. ಈ ಎಕ್ಸ್ಪೀರಿಯೆನ್ಸ್ ಸೆಂಟರ್ ಸಂಪೂರ್ಣ ಟೈಲ್ ಲೈಫ್ ಸ್ಟೈಲ್ ಸೆಂಟರ್ ಆಗಿದೆ ಮತ್ತು ಆವಿಷ್ಕಾರ ಹಾಗೂ ಗುಣಮಟ್ಟದ ಕರಕುಶಲತೆಗೆ ಆರ್.ಎ.ಕೆ. ಸೆರಾಮಿಕ್ ನ ಅಸಾಧಾರಣ ಬದ್ಧತೆಗೆ ಸಾಕ್ಷಿಯಾಗಿದೆ. ಇದು ಸುಂದರ ನೋಟ ಹೊಂದಿದೆ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳ ಅನ್ವಯ ಮಾರ್ಗಸೂಚಿಗಳನ್ನು ಅನುಸರಿಸುತ್ತದೆ ಮತ್ತು ಹೆಮ್ಮೆಯಿಂದ ಆರ್.ಎ.ಕೆ.ಯ ಮುಂಚೂಣಿಯ ವಿಶಿಷ್ಟ ಹಾಗೂ ಉನ್ನತಗುಣಮಟ್ಟದ ಕ್ಲೇ ಮತ್ತು ಫೆಲ್ಡ್ ಸ್ಪಾರ್ ಗಳನ್ನು ಬಳಸಿ ರೂಪಿಸಿದ ಆಕರ್ಷಕ ಟೈಲ್ ಮಾಸ್ಟರ್ ಪೀಸ್- ಲೂಸ್ ಅನ್ನು ಹೆಮ್ಮೆಯಿಂದಪ್ರದರ್ಶಿಸುತ್ತದೆ. ಇದರ ಬಿಳಿಯ ಶುದ್ಧ ದೇಹ ಮತ್ತು ಸುಧಾರಿತ ಇಂಕ್ ಅಭಿವೃದ್ಧಿಯ ಅಸಾಧಾರಣ ವಿಶೇಷತೆಗಳಿಂದ ಮಾರುಕಟ್ಟೆಯಲ್ಲಿಇದನ್ನು ಪ್ರತ್ಯೇಕವಾಗಿ ನಿಲ್ಲಿಸುತ್ತದೆ. 8500 ಚದರ ಅಡಿ ವಿಸ್ತೀರ್ಣ ಹೊಂದಿರುವ ಬೆಂಗಳೂರಿನ ಪ್ರಮುಖ ತಾಣದಲ್ಲಿರುವ ಈ ಎಕ್ಸ್ಪೀರಿಯೆನ್ಸ್ ಸೆಂಟರ್ ಸಂದರ್ಶಕರಿಗೆ ಸೂಕ್ತವಾದಪಾರ್ಕಿಂಗ್ ಸೌಲಭ್ಯಗಳು ಹಾಗೂ ರಾಕ್ ಸೆರಾಮಿಕ್ಸ್ ವಿಸ್ತಾರ ಉತ್ಪನ್ನ ಶ್ರೇಣಿಯ ಸಮಗ್ರ ಪ್ರಯಾಣ ನೀಡುತ್ತದೆ. ಈ ಶೋರೂಂ ಬ್ರಾಂಡ್ ನಕೊಡುಗೆಗಳನ್ನು ಪ್ರದರ್ಶಿಸುತ್ತಿದ್ದು ಅದರಲ್ಲಿ ಬೇರ್ ಫೂಟ್ ಟೈಲ್ಸ್ ನಿಂದ ಸ್ಯಾನಿಟರಿ ವೇರ್ ವರೆಗೆ ಎಸ್.ಯು.ಟಿ.(ಸೂಪರ್ ಯುಟಿಲಿಟಿಟೈಲ್ಸ್)ಟೈಲ್ಸ್ ನ ವಿಸ್ತಾರ ಉತ್ಪನ್ನ ಶ್ರೇಣಿ, ಫಾಸೆಟ್ ಗಳು ಮತ್ತು ಕಿಚನ್ ಸಿಂಕ್ ಗಳಿವೆ. ಇದು ಜರ್ಮನಿಯಲ್ಲಿ ತಯಾರಿಸಿದ ಕ್ಲೂಡಿ ಮತ್ತುಯುಎಇಯಲ್ಲಿ ತಯಾರಾದ ಕ್ಲೂಡಿ ಉತ್ಪನ್ನಗಳ ಪ್ರದರ್ಶನ ಹೊಂದಿದ್ದು ಗ್ರಾಹಕರ ಅನುಭವವನ್ನು ವಿಶ್ವಮಟ್ಟದ ಫಿಟ್ಟಿಂಗ್ ಗಳಿಂದಉನ್ನತೀಕರಿಸುತ್ತದೆ.

## ಆಲೂ ಮಟರ್ ಕರಿ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

**ಕ್ಯೂಬ್ ರೀತಿ ಕತ್ತರಿಸಿದ ಆಲೂಗಡ್ಡೆ 3-4, ಬಟಾಣಿ 200 ಗ್ರಾಂ, ಹಸಿಮೆಣಸಿನಕಾಯಿ 2, ಟೊಮ್ಯಾಟೊ ಪ್ಯೂರಿ 200 ಗ್ರಾಂ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಜೀರಿಗೆ 1 ಚಮಚ, ತುಪ್ಪ 3 4 ಚಮಚ, ಅರಿಶಿಣ ಪುಡಿ 1/2 ಚಮಚ, ಅಚ್ಚಖಾರದ ಪುಡಿ 1 ಚಮಚ, ಜೀರಿಗೆ ಪುಡಿ 1/2 ಚಮಚ, ಧನಿಯಾ ಪುಡಿ 1/4 ಚಮಚ, ಗರಂ ಮಸಾಲೆ 1/2 ಚಮಚ, ಕೊತ್ತಂಬರಿ ಸೊಪ್ಪು ಸ್ವಲ್ಪ, ಉಪ್ಪು ರುಚಿಗೆ ತಕ್ಕಷ್ಟು**

### ಮಾಡುವ ವಿಧಾನ

ಕುಕ್ಕರಿನಲ್ಲಿ ಎಣ್ಣೆ ಅಥವಾ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಬೇಕು. ನಂತರ ಜೀರಿಗೆಯನ್ನು ಹಾಕಿ ಕೆಲ ಕಾಲ ಹಸಿಮೆಣಸಿನ ಕಾಯಿ ಮತ್ತು ಈರುಳ್ಳಿಯನ್ನು ಹಾಕಿ ಬಾಡಿಸಿ ಕೊಳ್ಳಬೇಕು. ಈರುಳ್ಳಿ ಕೆಂಪಗಾದ ನಂತರ ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಹಸಿ ವಾಸನೆ ಹೋಗುವವರೆಗೆ ಹುರಿಯಬೇಕು. ನಂತರ ಕತ್ತರಿಸಿದ ಆಲೂಗಡ್ಡೆಯನ್ನು ಹಾಕಿ 2 ನಿಮಿಷ ಹುರಿಯಬೇಕು. ಈಗ ಮಸಾಲೆ ಪದಾರ್ಥಗಳಾದ ಅರಿಶಿಣ, ಅಚ್ಚಖಾರದ ಪುಡಿ, ಜೀರಿಗೆ ಪುಡಿ, ಧನಿಯಾ ಪುಡಿಯನ್ನು ಹಾಕಿ ಮಿಶ್ರಣ ಮಾಡಬೇಕು.ನಂತರ ಬಟಾಣಿಯನ್ನು ಹಾಕಿ ಮಿಶ್ರಣ ಮಾಡಬೇಕು. ಟೊಮ್ಯಾಟೊ ಪ್ಯೂರಿಯನ್ನು ಅದರೊಂದಿಗೆ ಸೇರಿಸಿ ಎರಡು ನಿಮಿಷಗಳ ಕಾಲ ಬೇಯಿಸಬೇಕು. ನಂತರ 1 ಕಪ್ ನೀರು ಹಾಕಿ ಉಪ್ಪು ಮತ್ತು ಗರಂ ಮಸಾಲೆಯನ್ನು ಹಾಕಬೇಕು. ನಂತರ ಕುಕ್ಕರ್ ಮುಚ್ಚಳ ಹಾಕಿ 2 ವಿಷಲ್ ಬಂದ ನಂತರ ಆರಲು ಬಿಡಬೇಕು. ಕೊನೆಯಲ್ಲಿ ಕೊತ್ತಂಬರಿ ಸೊಪ್ಪನ್ನು ಹಾಕಿ ಅಲಂಕರಿಸಿದರೆ ರುಚಿಕರವಾದ ಆಲೂ ಮಟರ್ ಕರಿ ಚಪಾತಿ ಜೊತೆ ಸವಿಯಲು ರೆಡಿ.

## ತಾಯಂದಿರ ದಿನಕ್ಕೆ ಬಾದಾಮಿಗಳ ಉಡುಗೊರೆ ನೀಡಿ ಸಂಭ್ರಮಿಸಿರಿ: ನಟಿ ಪ್ರಣೀತಾ ಸುಭಾಷ್



ನಮ್ಮ ಜೀವನಗಳಲ್ಲಿ ತಾಯಂದಿರ ಅಪರಿಮಿತ ಕೊಡುಗೆಯನ್ನು ಸಂಭ್ರಮಿಸಲು ಒಂದು ದಿನ ಎನ್ನುವುದಿಲ್ಲ. ಆರೈಕೆ ನೀಡುವವರಾಗಿ ತಾಯಂದಿರು ಸದಾ ತಮಗಿಂತ ನಮ್ಮ ಸೌಖ್ಯಕ್ಕೆ ಆದ್ಯತೆ ನೀಡುತ್ತಾರೆ. ಈ ತಾಯಂದಿರ ದಿನಕ್ಕೆ ಅವರ ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಆದ್ಯತೆ ನೀಡುವ ಮೂಲಕ ಅವರ ಸ್ವಾರ್ಥರಹಿತ ಪ್ರಯತ್ನಗಳನ್ನು ಗುರುತಿಸುವುದು ಮುಖ್ಯವಾಗಿದೆ. ನಿಮ್ಮ ತಾಯಿಗೆ ವಿಶೇಷವಾಗಿ ರೂಪಿಸಲಾದ ಬಾದಾಮಿಗಳ ಬಾಕ್ಸ್ ಉಡುಗೊರೆ ನೀಡುವುದು ಆಕೆಯ ಉತ್ತಮ ಆರೋಗ್ಯ ನೀಡಲು ಸೂಕ್ತ ವಿಧಾನವಾಗಿದೆ. ಬಾದಾಮಿಗಳನ್ನು ಒಟ್ಟಾರೆ ಸ್ವಾಸ್ಥ್ಯ ಉತ್ತೇಜಿಸುವ ಕೆಲ ಅಗತ್ಯ ಪೋಷಕಾಂಶಗಳೊಂದಿಗೆ ಪ್ಯಾಕ್ ಮಾಡಲಾಗಿದ್ದು ಇದರಿಂದ ತಾಯಂದಿರ ದಿನಕ್ಕೆ ಇದನ್ನು ಅತ್ಯಂತ ಸೂಕ್ತ ಉಡುಗೊರೆಯ ಆಯ್ಕೆಯಾಗಿಸಿದೆ.

ಬಾದಾಮಿಗಳಲ್ಲಿ ಪ್ರೊಟೀನ್, ಸತುವು, ಮೆಗ್ನೀಷಿಯಂ, ಕಬ್ಬಿಣ, ಕ್ಯಾಲ್ಷಿಯಂ, ರಂಜಕ ಮತ್ತು ವಿಟಮಿನ್ ಇ ಒಳಗೊಂಡಿವೆ. ಸಮತೋಲನದ ಆಹಾರದ ಭಾಗವಾಗಿ ಪ್ರತಿನಿತ್ಯ ಒಂದು ಹಿಡಿ ಬಾದಾಮಿ ಸೇವನೆಯು ಅಸಂಖ್ಯ ಆರೋಗ್ಯದ ಅನುಕೂಲಗಳನ್ನು ಒದಗಿಸುತ್ತದೆ, ಅದರಲ್ಲಿ ರಕ್ತದ ಸಕ್ಕರೆ ಮಟ್ಟದ ನಿಯಂತ್ರಣ, ಹೃದಯದ ಆರೋಗ್ಯದ ಉತ್ತೇಜನ, ಚರ್ಮದ ಆರೈಕೆಗೆ ಬೆಂಬಲ ಮತ್ತು ತೂಕ ನಿರ್ವಹಣೆಗೆ ನೆರವು ನೀಡುತ್ತದೆ. ಆದ್ದರಿಂದ ಈ ತಾಯಂದಿರ ದಿನಕ್ಕೆ ಬಾದಾಮಿಗಳ ಬಾಕ್ಸ್ ಉಡುಗೊರೆ ನೀಡುವುದು ನಿಮ್ಮ ಪ್ರೀತಿ ಮತ್ತು ಆರೈಕೆ ಪ್ರದರ್ಶಿಸುವ ಉಪಯುಕ್ತ ವಿಧಾನವಾಗಿದೆ ಅಲ್ಲದೆ ನಿಮ್ಮ ತಾಯಿಯ ಸ್ವಾಸ್ಥ್ಯಕ್ಕೂ ಕೊಡುಗೆ ನೀಡುತ್ತದೆ. ಖ್ಯಾತ ನಟಿ ಮತ್ತು ಸೆಲೆಬ್ರಿಟಿ ಸೊಹಾ ಅಲಿ ಖಾನ್, ''ಬಾದಾಮಿಗಳು ನನ್ನ ಕುಟುಂಬಕ್ಕೆ ತಲೆಮಾರುಗಳಿಂದ ಸ್ಮರಣೀಯ ಸಂಪ್ರದಾಯದ ಭಾಗವಾಗಿವೆ. ನನ್ನ ತಾಯಿಯ ಜ್ಞಾನ ಅದಕ್ಕೆ ಕಾರಣ. ಅವು ನನ್ನ ಕುಟುಂಬದ ಪಥ್ಯದಲ್ಲೂ ಸತತವಾಗಿ ಇರುವಂತೆ ನಾನು ದೃಢಪಡಿಸಿಕೊಂಡಿ?ದೇನೆ. ಬಾದಾಮಿಗಳನ್ನು ನನ್ನ ಪಥ್ಯದಲ್ಲಿ ಸೇರ್ಪಡೆ ಮಾಡುವುದು ನನ್ನ ಚರ್ಮದ ಆರೋಗ್ಯ ಸುಧಾರಿಸುವುದೇ ಅಲ್ಲದೆ ಸಭೆಗಳು ಮತ್ತು ಚಿತ್ರೀಕರಣಗಳ ನಡುವೆ ಕ್ವಿಕ್ ಸ್ನಾಕ್ಸ್ ಗೆ ಪರಿಪೂರ್ಣವಾಗಿವೆ. ಈ ತಾಯಂದಿರ ದಿನಕ್ಕೆ ಬಾದಾಮಿಗಳ ಉಡುಗೊರೆಯು ಪರಿಪೂರ್ಣ ವಿಧಾನಬಾಗಿದೆ ಎಂದು ನಂಬಿದ್ದೇನೆ'' ಎಂದರು.ನ್ಯೂಟ್ರಿಷನ್ ಮತ್ತು ವೆಲ್ನೆಸ್ ಕನ್ಸಲ್ಟೆಂಟ್ ಶೀಲಾ ಕೃಷ್ಣಸ್ವಾಮಿ, ''ಪ್ರತಿನಿತ್ಯ ತಾಯಂದಿರು ಮಾಡುವ ಕೆಲಸದ ಪ್ರಮಾಣ ಗಮನಿಸಿದರೆ ತಾಯಂದಿರ ದಿನಕ್ಕೆ ಬಾದಾಮಿಗಳ ಉಡುಗೊರೆ ನೀಡುವುದು ಮಹತ್ತರ ಮತ್ತು ಚಿಂತನಪೂರ್ವಕ ಆಲೋಚನೆ. ಬಾದಾಮಿಗಳು ಆರೋಗ್ಯಕರ ಮತ್ತು ಅವುಗಳ ಪೌಷ್ಠಿಕತೆಯ ಅಂಶದಿಂದ ಇಡೀ ದಿನ ಶಕ್ತಿವಂತರಾಗಿರಬಹುದು ಮತ್ತು ಒಟ್ಟಾರೆ ಸ್ವಾಸ್ಥ್ಯಕ್ಕೆ ಬೆಂಬಲಿಸುತ್ತದೆ. ಬಾದಾಮಿಗಳು ಇಡೀ ದಣಿವಿರದ ಕೆಲಸ ಮಾಡುವ ತಾಯಂದಿರಿಗೆ ಅವರ ದೈನಂದಿನ ಪಥ್ಯದಲ್ಲಿ ಸೇರ್ಪೆ ಮಾಡಿದಾಗ ದೇಹದಾರ್ಢ್ಯದಿಂದ ಇರಲು ಪರಿಪೂರ್ಣ ಕುರುಕುಲು ಆಗಿದೆ. ಆದ್ದರಿಂದ ನಿಮ್ಮ ತಾಯಂದಿರಿಗೆ ಈ ತಾಯಂದಿರ ದಿನಕ್ಕೆ ಬಾದಾಮಿಗಳ ಬಾಕ್ಸ್ ಉಡುಗೊರೆ ನೀಡಿರಿ ಮತ್ತು ಅವರಿಗೆ ವಿಶೇಷತೆಯ ಭಾವನೆ ಮೂಡುವಂತೆ ಮಾಡಿರಿ. ಖ್ಯಾತ ಕನ್ನಡ ನಟಿ ಪ್ರಣೀತಾ ಸುಭಾಷ್, ''ತಾಯ್ತನವು ನನಗೆ ಬರೀ ನನ್ನ ಪುಟ್ಟ ಮಗಳಿಗೆ ಮಾತ್ರವಲ್ಲದೆ ನನಗೆ ಕೂಡಾ ಪೋಷಣೆಯ ಶಕ್ತಿಯನ್ನು ತೋರಿಸಿದೆ. ಸ್ತ್ರೀರೋಗ ತಜ್ಞಳಾಗಿ ನನ್ನ ತಾಯಿ ಸದಾ ಮಹಿಳೆಯರ ಆರೋಗ್ಯ ಮತ್ತು ಆರೋಗ್ಯಕರ ಆಹಾರದ ಆಯ್ಕೆಗಳಿಗೆ ಒತ್ತು ನೀಡಿದ್ದು ಬಾದಾಮಿಗಳಿಗೆ ವಿಶೇಷ ಆದ್ಯತೆ ನೀಡುತ್ತೇನೆ. ಬಾದಾಮಿಗಳು ನನ್ನ ಬಾಲ್ಯದಿಂದಲೂ ನನ್ನ ಪಥ್ಯದ ಭಾಗವಾಗಿವೆ ಮತ್ತು ಈ ಸಂಪ್ರದಾಯವನ್ನು ನನ್ನ ಮಗಳ ಹಾಗೂ ಕುಟುಂಬದ ಭೋಜನಕ್ಕೂ ಈ ಸಂಪ್ರದಾಯವನ್ನು ಸೇರ್ಪಡೆ ಮಾಡುವ ಬಯಕೆ ಹೊಂದಿದ್ದೇನೆ. ಆದ್ದರಿಂದ, ಬಾದಾಮಿಗಳು ತಮ್ಮ ಅಸಾಧಾರಣ ಆರೋಗ್ಯದ ಪ್ರಯೋಜನಗಳಿಗೆ ಖ್ಯಾತಿ ಪಡೆದಿದ್ದು ತಾಯಂದಿರ ದಿನಕ್ಕೆ ಅದ್ಭುತ ಉಡುಗೊರೆಯ ಆಯ್ಕೆಯಾಗಿಸಿದೆ'' ಎಂದರು.

## ಪೀರಿಯಡ್ಸ್ ವೇಳೆ ಕಾಡುವ ಹೊಟ್ಟೆನೋವಿಗೆ ಮನೆಮದ್ದು

### ಹೆಲ್ತ್ ಟಿಪ್ಸ್



ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ ಮತ್ತು ಆಹಾರ ಪದ್ಧತಿಯಿಂದಾಗಿ ಅನೇಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅಂತೆಯೇ ಮಹಿಳೆಯರು ಪ್ರತಿ ತಿಂಗಳು ಮುಟ್ಟಿನ ಸಮಯದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಮುಟ್ಟಿನ ಸಮಯದಲ್ಲಿ ಅಸಹನೀಯ ನೋವಿನಿಂದಾಗಿ ಆ ದಿನಗಳಲ್ಲಿ ಮಹಿಳೆಯರು ಬಹಳಷ್ಟು ತೊಂದರೆಗಳನ್ನು ಎದುರಿಸುತ್ತಾರೆ. ಅನೇಕ ಮಹಿಳೆಯರು ತಮ್ಮ ಸಮಸ್ಯೆಯನ್ನು ಹೋಗಲಾಡಿಸಲು ಸಾಮಾನ್ಯವಾಗಿ ನೋವು ನಿವಾರಕ ಮಾತ್ರೆಗಳನ್ನು ಸೇವಿಸುತ್ತಾರೆ. ಆದರೆ ಕೆಲವೊಮ್ಮೆ ವೈದ್ಯರ ಸಲಹೆಯಿಲ್ಲದೆ ಈ ಔಷಧಿಗಳನ್ನು ಸೇವಿಸುವುದು ಆರೋಗ್ಯಕ್ಕೆ ಹಾನಿಕಾರಕ. ಆದ್ದರಿಂದ, ಕೆಲ ಮನೆಮದ್ದುಗಳನ್ನು ಅನುಸರಿಸಬಹುದು. ಇದು ಪಿರಿಯಡ್ಸ್ ನೋವಿನಿಂದ ನಿಮಗೆ ಪರಿಹಾರವನ್ನು ನೀಡುತ್ತದೆ.

**ಶುಂಠಿ:** ಶುಂಠಿಯನ್ನು ಅನೇಕ ಸಮಸ್ಯೆಗಳಿಂದ ಪರಿಹಾರ ಪಡೆಯಲು ಬಳಸಲಾಗುತ್ತದೆ. ಪಿರಿಯಡ್ ನೋವಿಗೂ ಇದು ಪರಿಹಾರ ನೀಡುತ್ತದೆ. ನೋವಿನಿಂದ ತಕ್ಷಣದ ಪರಿಹಾರವನ್ನು ಪಡೆಯಲು, ಒಂದು ಕಪ್ ನೀರಿನಲ್ಲಿ ಒಂದಿಷ್ಟು ತುಂಡು ಶುಂಠಿಯನ್ನು ಹಾಕಿ ಕುದಿಸಿ. ಊಟದ ನಂತರ ದಿನಕ್ಕೆ ಮೂರು ಬಾರಿ ಕುಡಿಯಿರಿ.

**ಅಜ್ವೈನ್:** ಹೊಟ್ಟೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಅಜ್ವೈನ್ ಅನ್ನು ರಾಮಬಾಣವೆಂದು ಪರಿಗಣಿಸಲಾಗುತ್ತದೆ. ಪಿರಿಯಡ್ಸ್ ಸಮಯದಲ್ಲಿ ಮಹಿಳೆಯರಲ್ಲಿ ಗ್ಯಾಸ್ಟ್ರಿಕ್ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತವೆ. ಇದರಿಂದಾಗಿ ಹೊಟ್ಟೆ ನೋವಿನ ಸಮಸ್ಯೆ ಪ್ರಾರಂಭವಾಗುತ್ತದೆ. ಇದನ್ನು ತೊಡೆದುಹಾಕಲು, ಅರ್ಧ ಚಮಚ ಅಜ್ವೈನ್ ಮತ್ತು ಅರ್ಧ ಚಮಚ ಉಪ್ಪನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಬೆರೆಸಿ ಕುಡಿಯುವುದು ಒಳ್ಳೆಯದು. ಇದು ತ್ವರಿತ ಪರಿಹಾರವನ್ನು ನೀಡುತ್ತದೆ.

**ತುಳಸಿ:** ಔಷಧೀಯ ಗುಣಗಳಿಂದ ಸಮೃದ್ಧವಾಗಿರುವ ತುಳಸಿ ನೈಸರ್ಗಿಕ ನೋವು ನಿವಾರಕದಂತೆ ಕೆಲಸ ಮಾಡುತ್ತದೆ. ತುಳಸಿಯಲ್ಲಿರುವ ಕೆಫೀಕ್ ಆಮ್ಲವು ನೋವಿನಿಂದ ಪರಿಹಾರವನ್ನು ನೀಡುತ್ತದೆ. ಪೀರಿಯಡ್ ನೋವಿನಿಂದ ಪರಿಹಾರ ಪಡೆಯಲು ತುಳಸಿ ಎಲೆಯನ್ನು ಅರ್ಧ ಕಪ್ ನೀರಿನಲ್ಲಿ ಕುದಿಸಿ ಕುಡಿಯಬಹುದು.

**ಅರಿಶಿನ ಹಾಲು:** ಅರಿಶಿನವು ಪ್ರತಿಜೀವಕ ಗುಣಲಕ್ಷಣಗಳಿಗೆ ಹೆಸರುವಾಸಿ. ಇದು ಪೀರಿಯಡ್ಸ್ ನೋವಿನಿಂದ ಪರಿಹಾರವನ್ನು ನೀಡುವಲ್ಲಿ ಪರಿಣಾಮಕಾರಿ. ಇದರ ಸೇವನೆಯು ದೇಹದಲ್ಲಿ ಶಾಖವನ್ನು ಕಾಪಾಡಿ ಹೊಟ್ಟೆ ನೋವಿನಿಂದ ಪರಿಹಾರವನ್ನು ನೀಡುತ್ತದೆ. ಪಿರಿಯಡ್ಸ್ ಆಗುವ ಮೊದಲು ಪ್ರತಿದಿನ ಅರಿಶಿನ ಹಾಲನ್ನು ಕುಡಿಯುವುದರಿಂದ ನೋವಿನ ಸಮಸ್ಯೆಯಿಂದ ಪರಿಹಾರವನ್ನು ಪಡೆಯಬಹುದು.

**ಪಪ್ಪಾಯಿ:** ಅಸಮರ್ಪಕ ಹರಿವಿನಿಂದ ಹೆಚ್ಚಿನ ಮಹಿಳೆಯರು ಪಿರಿಯಡ್ಸ್ ಸಮಯದಲ್ಲಿ ನೋವಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಹೀಗಿರುವಾಗ ಪಪ್ಪಾಯಿ ನಿಮಗೆ ತುಂಬಾ ಸಹಾಯಕವಾಗಬಹುದು.

## ಜಾನ್ವಿ ಅಭಿನಯದ ಮಿಸ್ಟರ್ ಆಂಡ್ ಮಿಸಸ್ ಮಹಿ ಮೇ 31ಕ್ಕೆ ತೆರೆಗೆ





ರಾಜ್ಕುಮಾರ್ ರಾವ್ ಮತ್ತು ಜಾನ್ವಿ ಕಪೂರ್ ಅಭಿನಯದ ಮಿಸೆಸ್ ಮಾಹಿ' ಸಿನಿಮಾ ಮೇ 31ಕ್ಕೆ ರಿಲೀಸ್ ಆಗಲಿರುವ ಕುರಿತು ಇಂದು ಮುಂಬೈನಲ್ಲಿ ಬಹಿರಂಗಪಡಿಸಿದರು. ಮೀ ಆಂಡ್ ಮಿಸೆಸ್ ಮಾಹಿ ಸಿನಿಮಾ ರಾಜ್ಕುಮಾರ್ ರಾವ್ ಮತ್ತು ಜಾನ್ವಿ ಕಪೂರ್ ಅಭಿನಯದ ' ಸಿನಿಮಾ ಮೇ 31ಕ್ಕೆ ರಿಲೀಸ್ ಆಗಲಿದೆ ಮತ್ತು ನಿರ್ಮಾಪಕ ಕರಣ್ ಜೋಹರ್ ಮಿಸ್ಟರ್ ಅಂಡ್ ಮಿಸಸ್ ಮಹಿ ಟ್ರೈಲರ್ ಅನ್ನು ಇಂದು ರಿಲೀಸ್ ಮಾಡಿದ್ದಾರೆ.ಸಾಮಾಜಿಕ ಮಾಧ್ಯಮದಲ್ಲಿ ಟ್ರೇಲರ್ ಅನ್ನು ಹಂಚಿಕೊಂಡಿರುವ ಚಲನಚಿತ್ರ ನಿರ್ಮಾಪಕ ಕರಣ್ ಜೋಹರ್ ಅವರು ತಮ್ಮ ಧರ್ಮ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಜಾನ್ವಿ ಕಪೂರ್ ಮತ್ತು ರಾಜ್ಕುಮಾರ್ ರಾವ್ ಅಭಿನಯದ ಚಿತ್ರವನ್ನು ನಿರ್ಮಿಸಿದ್ದಾರೆ. ಜಾನ್ವಿ ಕಪೂರ್ ಮತ್ತು ರಾಜ್ಕುಮಾರ್ ರಾವ್ ಅಭಿನಯದ 'ಮಿಸ್ಟರ್ ಅಂಡ್ ಮಿಸಸ್ ಮಹಿ' ಚಿತ್ರದ ಬಗ್ಗೆಹೇಳುವಾಗ ಇದಕ್ಕೂ ಮುಂಚೆ 'ರೂಹಿ' ನಲ್ಲಿ ಕಾಣಿಸಿಕೊಂಡ ನಂತರ ಅವರಿಬ್ಬರ ನಡುವಿನ ಎರಡನೇ ಸಿನಿಮಾ ಇದಾಗಿದೆ. ಧರ್ಮ ಪ್ರೊಡಕ್ಷನ್ಸ್ ನಿರ್ಮಿಸಿ ಶರಣ್ ಶರ್ಮಾ ನಿರ್ದೇಶನದ 'ಮಿ. ಮಿಸೆಸ್ ಮಹಿ' ಮೇ 31 ರಂದು ಬಿಡುಗಡೆಯಾಗಲಿದೆ. ಬ್ಯಾಟರ್ ರಿಯಾನ್ ಪರಾಗ್ ತಂದೆ ಯಾರು ಗೊತ್ತಾ ಇವರೂ ಸಹ ಸ್ಟಾರ್ ಕ್ರಿಕೆಟರ್, ಧೋನಿಯ ನೆಚ್ಚಿನ ಆಟಗಾರ. ಶ್ರೀ ಮತ್ತು ಶ್ರೀಮತಿ ಮಹಿ ಚಿತ್ರವನ್ನು ಶರಣ್ ಶರ್ಮಾ ನಿರ್ದೇಶಿಸಿದ್ದಾರೆ, ಅವರು ತಮ್ಮ ಚೊಚ್ಚಲ ನಿರ್ದೇಶನದ ಗುಂಜನ್ ಸಕ್ಸೇನಾ: ದಿ ಕಾರ್ಗಿಲ್ ಗರ್ಲ್ ಸಿನಿಮಾದಿಂದ ಹೆಸರುವಾಸಿಯಾಗಿದ್ದಾರೆ. ಶ್ರೀ ಮತ್ತು ಶ್ರೀಮತಿ ಮಹಿ ಜಾನ್ವಿ ಮತ್ತು ಶರಣ್ ನಡುವಿನ ಎರಡನೇ ಸಹಯೋಗವನ್ನು ಗುರುತಿಸುತ್ತದೆ. ಈ ಚಿತ್ರಕ್ಕೆ ಕರಣ್ ಜೋಹರ್ ಅವರ ಧರ್ಮ ಪ್ರೊಡಕ್ಷನ್ಸ್ ಬೆಂಬಲ ನೀಡಿದೆ . ಇದು ಮೇ 31 ರಂದು ಬಿಡುಗಡೆಯಾಗುತ್ತದೆ.

## ಸನ್ ಟ್ಯಾನ್ ಹೋಗಲಾಡಿಸಲು ಮನೆಯಲ್ಲೇ ಇದೆ ಪರಿಹಾರ

### ಬ್ಯೂಟಿ ಟಿಪ್ಸ್

ಸೂರ್ಯನ ಕಂದು ತೆಗೆಯುವಿಕೆಯನ್ನು ನಿಭಾಯಿಸಲು ಹಲವು ಫೇಶಿಯಲ್ ಗಳು ಮತ್ತು ಇತರ ಕಾರ್ಯ ವಿಧಾನಗಳು ಇವೆ. ಆದರೆ ಮನೆ ಪರಿಹಾರವನ್ನು ಪಡೆಯುವುದಕ್ಕಿಂತ ಇವು ಉತ್ತಮವಲ್ಲ. ಮನೆ ಪರಿಹಾರಗಳು ಚರ್ಮಕ್ಕೆ ಪೋಷಣೆ ಒದಗಿಸುತ್ತದೆ. ಜೊತೆಗೆ ಆರೋಗ್ಯಕ ವರ್ಧಕವನ್ನು ನೀಡುತ್ತದೆ.

**ಮೊಸರು ಮತ್ತು ಟೊಮೆಟೊ ಪ್ಯಾಕ್:** 2 ಚಮಚ ಟೊಮೆಟೊ ತಿರುಳು, 1 ಚಮಚ ನಿಂಬೆರಸ ಮತ್ತು 1 ಚಮಚ ಮೊಸರು ಸೇರಿಸಿ ಮಿಶ್ರಣ ಮಾಡಿಕೊಳ್ಳಬೇಕು. ಪ್ಯಾಕನ್ನು ಮುಖ ಮತ್ತು ಕೈಗಳಿಗೆ ಹಚ್ಚಿ 30 ನಿಮಿಷಗಳ ಬಳಿಕ ತೊಳೆಯಬೇಕು. ಹಾಲಿಗೆ ಚಿಟಿಕೆಯಷ್ಟು ಅರಿಶಿಣ ಹಾಕಿ ಚರ್ಮಕ್ಕೆ ಲೇಪಿಸಿ. ಒಣಗಿದ ನಂತರ ತಣ್ಣೀರಿನಲ್ಲಿ ಸಂಪೂರ್ಣವಾಗಿ ತೊಳೆಯಬೇಕು. ಪಪ್ಪಾಯ ತಿರುಳಿಗೆ ಜೇನುತುಪ್ಪ ಸೇರಿಸಿ ರುಬ್ಬಿಕೊಂಡ ನಂತರ ಪೇಸ್ಟನ್ನು ಟ್ಯಾನ್ ಆದ ಜಾಗಕ್ಕೆ ಹಚ್ಚಿ. 20 ನಿಮಿಷಗಳ ಬಳಿಕ ಸ್ವಚ್ಛ ಮಾಡಬೇಕು. ನೆನೆಸಿ ಸಿಪ್ಪೆ ಸುಲಿದ ಬಾದಾಮಿಯನ್ನು ಹಾಲಿನೊಂದಿಗೆ ರುಬ್ಬಿಕೊಳ್ಳಬೇಕು. ತಯಾರಿಸಿದ ಪೇಸ್ಟನ್ನು ಹಚ್ಚಿ 30 ನಿಮಿಷಗಳ ಬಳಿಕ ತೊಳೆಯಬೇಕು. ಒಂದು ಬೇಸಿನ್ ನಲ್ಲಿ ಬಿಸಿ ನೀರನ್ನು ತೆಗೆದುಕೊಳ್ಳಬೇಕು. ಅದಕ್ಕೆ ನಿಂಬೆ ರಸ ಹಿಂಡಿ ಕೈಗಳನ್ನು ಆ ನೀರಿಗೆ ಅದ್ದಬೇಕು. ಸ್ವಲ್ಪ ಹೊತ್ತಿನ ಬಳಿಕ ತಣ್ಣೀರಿನಲ್ಲಿ ತೊಳೆಯಬೇಕು.



2 ಚಮಚ ಸೌತೆಕಾಯಿ ರಸವನ್ನು 1 ಚಮಚ ನಿಂಬೆ ರಸಕ್ಕೆ ಸೇರಿಸಿ ಚಿಟಿಕೆ ಅರಿಶಿನ ಹಾಕಿ ಪೇಸ್ಟ್ ಮಾಡಿಕೊಳ್ಳ ಬೇಕು. ಟ್ಯಾನ್ ಆದ ಭಾಗಕ್ಕೆ ಪೇಸ್ಟ್ ಅನ್ನು ಹಚ್ಚಿ ಸ್ವಲ್ಪ ಹೊತ್ತಿನ ಬಳಿಕ ತೊಳೆಯಬೇಕು.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ ರಾಶಿ:** ಈ ದಿನ ಎಲ್ಲಿ ಹೋದರು ಅಶಾಂತಿ, ದೂರ ಪ್ರಯಾಣ ಸಾಧ್ಯತೆ, ಶತ್ರು ಬಾಧೆ, ಕೋರ್ಟ್ ಕಚೇರಿ ವ್ಯಾಜ್ಯಗಳಿಂದ ತೊಂದರೆ.

**ವೃಷಭ ರಾಶಿ:** ಈ ದಿನ ಉನ್ನತ ವಿದ್ಯಾಭ್ಯಾಸದಲ್ಲಿ ಪ್ರಗತಿ, ವಾಹನ ಯೋಗ, ತೀರ್ಥ ಯಾತ್ರಾ, ದರ್ಶನ, ಕಾರ್ಯ ವಿಘಾತ, ಸ್ಥಳ ಬದಲಾವಣೆ.

**ಮಿಥುನ ರಾಶಿ:** ಈ ದಿನ ಕುಟುಂಬ ಸೌಖ್ಯ, ಕೀರ್ತಿ ಲಾಭ, ಬಂದು ಮಿತ್ರರ ಭೇಟಿ, ಮಂಗಳ ಕಾರ್ಯಗಳಲ್ಲಿ ಭಾಗಿ, ಅಧಿಕ ಖರ್ಚು.

**ಕಟಕ ರಾಶಿ:** ಈ ದಿನ ಕಠೋರವಾಗಿ ಮಾತನಾಡುವಿರಿ, ಅನ್ಯರಿಗೆ ಉಪಕಾರ ಮಾಡುವಿರಿ, ಉದ್ಯೋಗದಲ್ಲಿ ಬಡ್ತಿ.

**ಸಿಂಹ ರಾಶಿ:** ಈ ದಿನ ಮಾತಾಪಿತರ ಸೇವೆ, ನಾನಾ ರೀತಿಯ ಸಂಪಾದನೆ, ಮನ ಶಾಂತಿ, ದೇವರಲ್ಲಿ ಭಕ್ತಿ, ಗುರುಗಳ ಭೇಟಿ.

**ಕನ್ಯಾ ರಾಶಿ:** ಈ ದಿನ ಸಕಾಲರೊಡನೆ ಪ್ರೀತಿಯಿಂದ ಇರುವಿರಿ, ಆರ್ಥಿಕ ಪರಿಸ್ಥಿತಿ ಬಿಕ್ಕಟ್ಟು, ಕೆಲಸ ಕಾರ್ಯಗಳಲ್ಲಿ ಪರಿಶ್ರಮ ವಹಿಸಿ.

**ತುಲಾ ರಾಶಿ:** ಈ ದಿನ ಉದ್ಯೋಗದಲ್ಲಿ ಬಡ್ತಿ, ಮಾತೃವಿನಿಂದ ಧನ ಸಹಾಯ , ವಿವಾಹ ಯೋಗ, ಇಷ್ಟ ವಸ್ತುಗಳ ಖರೀದಿ, ಬಾಕಿ ವಸೂಲಿ.

**ವೃಶ್ಚಿಕ ರಾಶಿ:** ಈ ದಿನ ಪರರ ಧನ ಪ್ರಾಪ್ತಿ, ಮನಸ್ಸಿನಲ್ಲಿ ಭಯಭೀತಿ, ದೈವಿಕ ಚಿಂತನೆ, ವಾಹನ ಅಪಘಾತ, ಕೈ ಕಾಲಿಗೆ ಏಟು.

**ಧನಸು ರಾಶಿ:** ಈ ದಿನ ಸಮಾಜದಲ್ಲಿ ಗೌರವ, ಸ್ವಲ್ಪ ಹಣ ಬಂದರೂ ಉಳಿಯುವುದಿಲ್ಲ, ವ್ಯರ್ಥ ಧನ ಹಾನಿ, ಇಲ್ಲಸಲ್ಲದ ತಕರಾರು.

**ಮಕರ ರಾಶಿ:** ಈ ದಿನ ಕುಟುಂಬದಲ್ಲಿ ಕಲಹ, ದುಷ್ಟಬುದ್ಧಿ, ಸ್ಥಿರಾಸ್ತಿ ಮಾರಾಟದಿಂದ ಲಾಭ, ದಾನ ಧರ್ಮಗಳಲ್ಲಿ ಆಸಕ್ತಿ, ಭೂ ಲಾಭ.

**ಕುಂಭ ರಾಶಿ:** ಈ ದಿನ ಸ್ಥಗಿತ ಕಾರ್ಯಗಳು ಮುಂದುವರೆಯುತ್ತದೆ, ಆಪ್ತರಿಂದ ಸಹಾಯ,ಮಹಿಳೆಯರಿಗೆ ಶುಭ, ಮಾತಿನ ಚಕಮಕಿ.

**ಮೀನ ರಾಶಿ:** ಈ ದಿನ ಯತ್ನ ಕಾರ್ಯನುಕೂಲ, ಋಣಭಾದೆ, ಅಧಿಕ ಕೋಪ, ರೋಗಭಾದೆ, ಇತರರ ಮಾತಿಗೆ ಮರುಳಾಗಬೇಡಿ.

## ಅಂತರಾಷ್ಟ್ರೀಯ ಹಮ್ಮಸ್ ದಿನ

ಹಮ್ಮಸ್ನ ಮೂಲವು ಮೋಡ ಮತ್ತು ತೀವ್ರ ಪೈಪೋಟಿಯಿಂದ ಕೂಡಿದೆ. ಇದು ಮಧ್ಯಪ್ರಾಚ್ಯದಲ್ಲಿ ಹುಟ್ಟಿಕೊಂಡಿದೆ ಎಂದು ನಮಗೆ ತಿಳಿದಿದ್ದರೂ, ಮೆಡಿಟರೇನಿಯನ್ನ ಪೂರ್ವ ಅರ್ಧಚಂದ್ರಾಕೃತಿಯ ಸುತ್ತಲಿನ ಅನೇಕ ಪ್ರದೇಶಗಳು ರುಚಿಕರವಾದ ಹರಡುವಿಕೆಯ ನಿಜವಾದ ಮೂಲವೆಂದು ಹೇಳಿಕೊಳ್ಳುತ್ತವೆ. ಕುತೂಹಲಕಾರಿಯಾಗಿ ಹಮ್ಮಸ್ನ ಮೊದಲ ನಿಜವಾದ ಉಲ್ಲೇಖವು 13 ನೇ ಶತಮಾನದ ಕೈರೋದಲ್ಲಿ ಕಂಡುಬಂದಿದೆ, ಅಲ್ಲಿ ಅದು ಕೇವಲ ತಣ್ಣನೆಯ ಕಡಲೆ ಪ್ಯೂರೀಯಾಗಿ ಕಂಡುಬರುತ್ತದೆ ಮತ್ತು ಗಮನಾರ್ಹವಾಗಿ ನಿಂಬೆ ರಸ ಮತ್ತು ಬೆಳ್ಳುಳ್ಳಿಯನ್ನು ಹೊಂದಿರುವುದಿಲ್ಲ - ಬದಲಿಗೆ ಎಣ್ಣೆ, ಗಿಡಮೂಲಿಕೆಗಳು ಮತ್ತು ಮಸಾಲೆಗಳೊಂದಿಗೆ ಉಪ್ಪಿನಕಾಯಿ ನಿಂಬೆಹಣ್ಣು ಸೇರಿದಂತೆ. ಇದು ನಮಗೆ ಇನ್ನೂ ಚೆನ್ನಾಗಿ ಧ್ವನಿಸುತ್ತದೆ. ಕಡಲೆಗಳು ಪ್ರವರ್ಧಮಾನಕ್ಕೆ ಬರುವ ಮಧ್ಯಪ್ರಾಚ್ಯದಲ್ಲಿ ವಾಸಿಸುವ ಅನೇಕ ಜನರ ಆಹಾರದಲ್ಲಿ ಹಮ್ಮಸ್ ಒಂದು ದೊಡ್ಡ ಪ್ರಧಾನ ಅಂಶವಾಗಿ ಉಳಿದಿದೆ. ವಾಸ್ತವವಾಗಿ, ಹಮ್ಮಸ್ ಎಂಬ ಪದವು ಗಜ್ಜೆ ಗಾಗಿ ಅರೇಬಿಕ್ ಪದದಲ್ಲಿ ಬೇರೂರಿದೆ! ಗ್ರೀಕರು ಕೂಡ ಹಮ್ಮಸ್ ಅನ್ನು ಕಂಡುಹಿಡಿದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕೆಲವು ಚರ್ಚೆಗಳಿವೆಯಾದರೂ, ಇದು ಗ್ರೀಕ್ ಮತ್ತು ಮಧ್ಯಪ್ರಾಚ್ಯ ವ್ಯಾಪಾರಿಗಳ ನಡುವೆ ಹರಡಿತು ಎಂದು ನಂಬುತ್ತಾರೆ, ಜೊತೆಗೆ ಬಕ್ಲಾವಾ ಮತ್ತು ಸ್ಟಫ್ಡ್ ದ್ರಾಕ್ಷಿ ಎಲೆಗಳಂತಹ ಜನಪ್ರಿಯ ಭಕ್ಷ್ಯಗಳೊಂದಿಗೆ. ಈ ಕಾರಣಕ್ಕಾಗಿ ಇದು ಅತ್ಯುತ್ತಮ ಕ್ರಾಸ್‌ಓವರ್ ಆಹಾರಗಳಲ್ಲಿ ಒಂದಾಗಿದೆ.

ಇದು ಮಧ್ಯಪ್ರಾಚ್ಯದ ಅನೇಕ ದೇಶಗಳಿಗೆ ರಾಷ್ಟ್ರೀಯ ಭಕ್ಷ್ಯವಾಗಿದೆ. ಇದು ಪಾಕಶಾಲೆಯಂತೆಯೇ ಸಾಂಸ್ಕೃತಿಕ ವಿದ್ಯಮಾನವಾಗಿದೆ, ಮಧ್ಯಪ್ರಾಚ್ಯ ಮತ್ತು ದಕ್ಷಿಣ ಯುರೋಪ್ನಲ್ಲಿ ಅದರ ಎಲ್ಲಾ ದೀರ್ಘಕಾಲೀನ ಜನಪ್ರಿಯತೆಗಾಗಿ, ಹಮ್ಮಸ್ ಅನ್ನು ಸ್ಟಾಕ್ ಮಾಡಿದ ಮೊದಲ ಬ್ರಿಟಿಷ್ ಕಿರಾಣಿ ಅಂಗಡಿಯು 1980 ರಲ್ಲಿ ಮಾತ್ರ ಹಾಗೆ ಮಾಡಿದೆ ಎಂದು ತಿಳಿದುಕೊಳ್ಳಲು ನಿಮಗೆ ಆಶ್ಚರ್ಯವಾಗಬಹುದು. ಆದರೆ ಆಶ್ಚರ್ಯಕರವಾಗಿ, ಆದಾಗ್ಯೂ, ಇದು ಶೀಘ್ರವಾಗಿ ಉತ್ತಮ ಯಶಸ್ಸನ್ನು ಗಳಿಸಿತು. ಹೆಚ್ಚಾಗಿ ಅದರ ಆರೋಗ್ಯ ಪ್ರಯೋಜನಗಳಿಗಾಗಿ. 20 ವರ್ಷಗಳ ಹಿಂದೆ ಹಮ್ಮಸ್ ಯುಎಸ್ಗೆ ಫ್ಯಾಶನ್ ಆಗಿ ತಡವಾಗಿ ಆಗಮನವನ್ನು ಹೊಂದಿದ್ದರು, ಆದರೆ ಹೆಚ್ಚಿನ ಅಮೆರಿಕನ್ನರು ಬಹುಶಃ ಭಕ್ಷ್ಯದ ಹೆಸರನ್ನು ಉಚ್ಚರಿಸಲು ಸಾಧ್ಯವಾಗಲಿಲ್ಲ, ಮತ್ತು ವಾರ್ಷಿಕ ಮಾರಾಟವು ಕೇವಲ 5 ಮಿಲಿಯನ್ಗೆ ತಲುಪಿದೆ, ಇಂದು ಇದು ಹೆಚ್ಚಿನ ಕಿರಾಣಿ ಅಂಗಡಿಗಳಲ್ಲಿ ಕಂಡುಬರುತ್ತದೆ ಮತ್ತು ಇದನ್ನು ಪ್ರಧಾನವೆಂದು ಪರಿಗಣಿಸಲಾಗಿದೆ. ಅನೇಕ ಅಮೇರಿಕನ್ ಕುಟುಂಬಗಳು. ಮಧ್ಯಪ್ರಾಚ್ಯದಲ್ಲಿ, ಹಮ್ಮಸ್ ಅನ್ನು ಸ್ವಲ್ಪ ದಿನನಿತ್ಯದ ಮತ್ತು ಮಧ್ಯಮ ವರ್ಗದ ಊಟವೆಂದು ಪರಿಗಣಿಸಲಾಗುತ್ತದೆ, ಅಮೆರಿಕನ್ನರು ಕಂದುಬಣ್ಣದ ಹರಡುವಿಕೆಗೆ ಬೀಳುತ್ತಿದ್ದಾರೆ - ಕಠಿಣ. ಗ.ಖ.ನ ಕಾಲುಭಾಗಕ್ಕಿಂತಲೂ ಹೆಚ್ಚು ಕುಟುಂಬಗಳು ಈ ಸೆಕೆಂಡಿನಲ್ಲಿ ಫ್ರಿಜ್ನಲ್ಲಿ ಹಮ್ಮಸ್ ಅನ್ನು ಹೊಂದಿರುತ್ತವೆ ಎಂದು ಅಂದಾಜಿಸಲಾಗಿದೆ.ಮೊದಲ ಅಂತರರಾಷ್ಟ್ರೀಯ ಹಮ್ಮಸ್ ದಿನವು 2012 ರಲ್ಲಿ ಮತ್ತು ನಮ್ಮ ರುಚಿ ಮೊಗ್ಗುಗಳು ಅಂದಿನಿಂದಲೂ ಆಚರಿಸುತ್ತಿವೆ.

# ಮೋದಿ ಮತ್ತೆ ಅಧಿಕಾರಕ್ಕೆ ಬಂದರೆ ದಲಿತರು ಗುಲಾಮರಾಗುತ್ತಾರೆ; ಖರ್ಗೆ



**ದೆಹಲಿ:** ಲೋಕಸಭಾ ಚುನಾವಣೆಗೆ ಈ ಬಾರಿ 7 ಹಂತಗಳಲ್ಲಿ ಮತದಾನ ನಡೆಯುತ್ತಿದ್ದು, ಈಗಾಗಲೇ 3 ಹಂತ ಪೂರ್ಣಗೊಂಡಿದೆ. ಇಂದು ನಾಲ್ಕನೇ ಹಂತದ ಮತದಾನ ನಡೆಯುತ್ತಿದ್ದು, ಮೂರು ಹಂತದ ಚುನಾವಣೆ ಉಳಿದಂತಾಗುತ್ತದೆ. ಜೂನ್ 4 ಕ್ಕೆ ಮತ ಎಣಿಕೆ ಕಾರ್ಯ ನಡೆಯಲಿದೆ.

ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳ ನಾಯಕರು ತಮ್ಮ ತಮ್ಮ ಅಭ್ಯರ್ಥಿಗಳ ಪರ ಭರ್ಜರಿ ಪ್ರಚಾರ ಕಾರ್ಯ ನಡೆಸುತ್ತಿದ್ದು, ಭಾನುವಾರದಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಹಾರಾಷ್ಟ್ರದ ಧುಲೆಯಲ್ಲಿ ಪ್ರಚಾರ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಹಾಗೂ ಅಮಿತ್ ಶಾ ಮೂರನೇ ಅವಧಿಗೆ ಆಯ್ಕೆಯಾದರೆ ದಲಿತರು, ಆದಿವಾಸಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಸ್ಥಿತಿಯೇ ದಲಿತರು ಮತ್ತು ಆದಿವಾಸಿಗಳಿಗೆ ಬರುತ್ತದೆ ಎಂದು ಹೇಳಿದ್ದಾರೆ.

ಹೀಗಾಗಿ ನೀವೆಲ್ಲರೂ ನಿಮಗಾಗಿ ಮತ್ತು ನಿಮ್ಮ ಜನರಿಗಾಗಿ ಮತದಾನ ಮಾಡಬೇಕಿದೆ ಎಂದು ಹೇಳಿದ ಮಲ್ಲಿಕಾರ್ಜುನ ಖರ್ಗೆಯವರು, ಈ ಬಾರಿಯ ಚುನಾವಣೆ ದೇಶದ ಭವಿಷ್ಯವನ್ನು ರೂಪಿಸಲಿದೆ ಎಂದು ತಿಳಿಸಿದ್ದಾರೆ.

# ದೇಶದ ಸಂಪೂರ್ಣ ಸಂಪತ್ತನ್ನು ಶ್ರೀಮಂತರಿಗೆ ಕೊಟ್ಟಿದ್ದಾರೆ ಮೋದಿ: ಪ್ರಿಯಾಂಕಾ ಗಾಂಧಿ



**ರಾಯಬರೇಲಿ:** ಇಲ್ಲಿನ ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದಿರುವ 'ಕೈ' ನಾಯಕ ರಾಹುಲ್ ಗಾಂಧಿ ಪರ ಪ್ರಚಾರ ಮಾಡಲು ಆಗಮಿಸಿದ ಅವರ ಸಹೋದರಿ ಪ್ರಿಯಾಂಕಾ ಗಾಂಧಿ, ದೇಶದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ನೇರ ವಾಗ್ದಾಳಿ ನಡೆಸಿದ್ದಾರೆ.

ಇಂದಿನ ಚುನಾವಣೆ ಪ್ರಚಾರದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಪ್ರಿಯಾಂಕಾ ಗಾಂಧಿ, 'ಪ್ರಧಾನಿ ಮೋದಿ ಅವರು ಇಡೀ ದೇಶದ ಸಂಪತ್ತನ್ನು ನಾಲ್ಕರಿಂದ ಐದು ಶ್ರೀಮಂತರಿಗೆ ಕೊಟ್ಟಿದ್ದಾರೆ. ಕಳೆದ ಹತ್ತು ವರ್ಷಗಳಿಂದ ವಾರಣಾಸಿ ಸಂಸದರಾಗಿರುವ ಪ್ರಧಾನಿಗಳು, ತಮ್ಮ ಕ್ಷೇತ್ರಕ್ಕೆ ಒಂದೇ ಒಂದು ಬಾರಿಯೂ ಭೇಟಿ ಕೊಟ್ಟಿಲ್ಲ, ರೈತರ ಕಷ್ಟಗಳನ್ನು ಆಲಿಸಿಲ್ಲ' ಎಂದು ಹೇಳಿದರು.

'ಇಂದು ದೇಶದ ಇದ್ದಿಲು, ವಿದ್ಯುತ್, ಪೋರ್ಟ್ಸ್ ಮತ್ತು ಏರ್ಪೋರ್ಟ್ಸ್‌ಗಳೆಲ್ಲವೂ ಪ್ರಧಾನಿ ಮೋದಿ ಅವರ ಆಪ್ತರೊಂದಿಗೆ ಇವೆ. ಪಿಎಂ ಆಯೋಜಿಸುವ ದೊಡ್ಡ ದೊಡ್ಡ ಈವೆಂಟ್ಗಳಲ್ಲಿ ಶ್ರೀಮಂತರೇ ಇರುತ್ತಾರೆ ವಿನಃ ಒಬ್ಬ ಬಡ ವ್ಯಕ್ತಿಯೂ ಕೂಡ ಕಣ್ಣಿಗೆ ಕಾಣಸಿಗೋದಿಲ್ಲ' ಎಂದು ನೇರ ವಾಗ್ದಾಳಿ ನಡೆಸಿದರು.

## ಸಾಲ ಮರುಪಾವತಿ ಗಡುವು ವಿಸ್ತರಣೆಗೆ ಭಾರತ ಸಮ್ಮತಿಸಿದೆ: ಮಾಲ್ಡೀವ್ಸ್ ವಿದೇಶಾಂಗ ಸಚಿವ

**ಮಾಲೆ:** 200 ದಶಲಕ್ಷ ಡಾಲರ್ ಪೈಕಿ 150 ದಶಲಕ್ಷ ಡಾಲರ್ ಸಾಲದ ಮರುಪಾವತಿಯ ಗಡುವಿನ ವಿಸ್ತರಣೆಗೆ ಭಾರತವು ಸಮ್ಮತಿಸಿದೆ ಎಂದು ಮಾಲ್ಡೀವ್ಸ್ ವಿದೇಶಾಂಗ ಸಚಿವ ಮೂಸಾ ಝುಮೀರ್ ತಿಳಿಸಿದ್ದಾರೆ. 2019ರಲ್ಲಿ ಅಧಿಕಾರ ವಹಿಸಿಕೊಂಡಿದ್ದ ಈ ಹಿಂದಿನ ಸರಕಾರವು ಭಾರತದಿಂದ ಈ ಸಾಲ ಪಡೆದಿತ್ತು. ಮಾಲ್ಡೀವ್ಸ್ ಅಧ್ಯಕ್ಷರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮೂಸಾ ಝುಮೀರ್, ಭಾರತಕ್ಕೆ ಪಾವತಿಸಬೇಕಿರುವ 200 ದಶಲಕ್ಷ ಡಾಲರ್ ಸಾಲದ ಪೈಕಿ 50 ದಶಲಕ್ಷ ಡಾಲರ್ ಅನ್ನು ಜನವರಿಯಲ್ಲಿ ಮರುಪಾವತಿಸಲಾಗಿದೆ. ಉಳಿದ 150 ದಶಲಕ್ಷ ಡಾಲರ್ ಸಾಲದ ಮರುಪಾವತಿ ಅವಧಿಯ ವಿಸ್ತರಣೆಗೆ ಬದಲಾಗಿ ಭಾರತವು ಯಾವುದೇ ಬೇಡಿಕೆಯನ್ನು ಇರಿಸಿಲ್ಲ ಎಂದೂ ಸ್ಪಷ್ಟಪಡಿಸಿದರು. ಭಾರತ ನೆರವು ನೀಡಿರುವ ಯೋಜನೆಗಳ ಮರು ಪ್ರಾರಂಭ ಹಾಗೂ ಅವುಗಳನ್ನು ಪೂರ್ಣಗೊಳಿಸಲು ಸರಕಾರ ಹೊಂದಿರುವ ಬದ್ಧತೆಯನ್ನು ಒತ್ತಿ ಹೇಳಿದ ಅವರು, ಮಾಲ್ಡೀವ್ಸ್ ನಲ್ಲಿ ಭಾರತದ ನೆರವಿನೊಂದಿಗೆ ನಡೆಯುತ್ತಿರುವ ಯೋಜನೆಗಳನ್ನು ಪೂರ್ಣಗೊಳಿಸುವ ದಿಕ್ಕಿನಲ್ಲಿ ಮಹತ್ವದ ಪ್ರಗತಿಯಾಗಿದೆ ಎಂದೂ ತಿಳಿಸಿದರು. ಮೇ 8ರಿಂದ 10ರ ನಡುವೆ ತಮ್ಮ ಪ್ರಪ್ರಥಮ ಅಧಿಕೃತ ದ್ವಿಪಕ್ಷೀಯ ಭೇಟಿ ನೀಡಿದ್ದ ಮೂಸಾ ಝುಮೀರ್, ಭಾರತದ ಆರ್ಥಿಕ ನೆರವಿನೊಂದಿಗೆ ಪ್ರಾರಂಭಗೊಂಡಿರುವ ಯೋಜನೆಗಳನ್ನು ಪೂರ್ಣಗೊಳಿಸುವ ಪ್ರಮುಖ ವಿಚಾರಗಳ ಬಗ್ಗೆ ಗಮನ ಹರಿಸುವ ಕುರಿತು ಮೇ 9ರಂದು ನಡೆದ ದ್ವಿಪಕ್ಷೀಯ ಚರ್ಚೆಯಲ್ಲಿ ನಾನು ಹಾಗೂ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮಾತುಕತೆ ನಡೆಸಿದೆವು ಎಂದು ಹೇಳಿದರು. ಎಸ್.ಜೈಶಂಕರ್ ರೊಂದಿಗೆ ನಡೆದ ಚರ್ಚೆಯಲ್ಲಿ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರಿ ನೀಡಲಾಗಿರುವ ಸಮಿತಿಗಳ ಕಾರ್ಯನಿರ್ವಹಣಾ ಸಾಮರ್ಥ್ಯದ ಕಡೆ ಗಮನ ಹರಿಸಲಾಯಿತು ಎಂದು ಝುಮೀರ್ ತಿಳಿಸಿದ್ದಾರೆ.



# ಉಕ್ರೇನ್‌ನ ಐದು ಗ್ರಾಮಗಳು ರಷ್ಯಾ ವಶಕ್ಕೆ

**ಮಾಸ್ಕೋ:** ಉಕ್ರೇನ್ನ ಈಶಾನ್ಯದ ಖಾರ್ಕಿವ್ ವಲಯದಲ್ಲಿ ತನ್ನ ಪಡೆಗಳು ನಡೆಸಿದ ಅನಿರೀಕ್ಷಿತ ಭೂದಾಳಿಯಲ್ಲಿ 5 ಗ್ರಾಮಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಶ್ಯ ಹೇಳಿದೆ.ರಶ್ಯ ಗಡಿಭಾಗದಲ್ಲಿರುವ ಈಶಾನ್ಯ ಉಕ್ರೇನ್ನ ಬೊರಿಸಿವ್ಕ, ಒಗಿರ್ತ್ಸೆವ್, ಪ್ಲೆಟೆನಿವ್ಕ, ಪಿಲ್ನ ಮತ್ತು ಸ್ಟ್ರಿಲೆಚ ಗ್ರಾಮಗಳನ್ನು ಹಾಗೂ ಡೊನೆಟ್ಸ್ಕ್ ಪ್ರಾಂತದ ಒಂದು ಗ್ರಾಮವನ್ನು ತನ್ನ ಪಡೆ ವಶಕ್ಕೆ ಪಡೆದಿದೆ ಎಂದು ರಶ್ಯದ ರಕ್ಷಣಾ ಇಲಾಖೆ ಹೇಳಿದೆ. ಖಾರ್ಕಿವ್ ವಲಯದಲ್ಲಿ ವಾಯುಪಡೆಯ ಬೆಂಬಲದಿಂದ ರಶ್ಯದ ಪದಾತಿ ದಳ ಅನಿರೀಕ್ಷಿತ ಆಕ್ರಮಣ ನಡೆಸಿರುವುದನ್ನು ಉಕ್ರೇನ್ನ ರಕ್ಷಣಾ ಇಲಾಖೆ ದೃಢಪಡಿಸಿದ್ದು ರಶ್ಯ ಪಡೆ ಅಲ್ಪ ಮುನ್ನಡೆ ಸಾಧಿಸಿದೆ ಎಂದಿದೆ. ಖಾರ್ಕಿವ್ ವಲಯದಲ್ಲಿ ಉಕ್ರೇನ್ನ ಪಡೆಗಳು ಪ್ರತಿದಾಳಿ ತೀವ್ರಗೊಳಿಸಿದೆ. ರಶ್ಯದ ಆಕ್ರಮಣವನ್ನು ವಿಫಲಗೊಳಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ. ಗಡಿ ಪ್ರದೇಶದಲ್ಲಿ ಭಾರೀ ಹೋರಾಟ ನಡೆಯುತ್ತಿದ್ದು 1,775 ಜನರನ್ನು ತೆರವುಗೊಳಿಸಲಾಗಿದೆ. ವೊವ್ಚಂಸ್ಕ್ ಗ್ರಾಮದ ಮೇಲೆ ರಶ್ಯದ ಬಾಂಬ್ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿದ್ದು ಇತರ ಇಬ್ಬರು ಗಾಯಗೊಂಡಿರುವುದಾಗಿ ಖಾರ್ಕಿವ್ನ ಪ್ರಾದೇಶಿಕ ಗವರ್ನರ್ ಒಲೆಗ್ ಸಿನೆಗುಬೊವ್ರನ್ನು ಉಲ್ಲೇಖಿಸಿ ಎಎಫ್ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.



# ಎಎಪಿ ಆಯ್ಕೆ ಮಾಡಿದರೆ ನಾನು ಮತ್ತೆ ಜೈಲಿಗೆ ಹೋಗಬೇಕಾಗಿಲ್ಲ: ಕೇಜ್ರಿವಾಲ್

**ನವದೆಹಲಿ:** ಮಧ್ಯಂತರ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ದೆಹಲಿಯ ಮೋತಿ ನಗರ ಪ್ರದೇಶದಲ್ಲಿ ಚುನಾವಣಾ ರ್ಯಾಲಿ ನಡೆಸಿದರು.

ಈ ವೇಳೆ ಮತದಾರರ ಬಳಿ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬರಲು ಮತ ಚಲಾಯಿಸಬೇಕೆಂದು ಮನವಿ ಮಾಡಿದರು.

20 ದಿನಗಳ ನಂತರ ನಾನು ಮತ್ತೆ ಜೈಲಿಗೆ ಹೋಗಬೇಕಾಗಿದೆ. ನೀವು ಆಮ್ ಆದ್ಮಿ ಪಕ್ಷವನ್ನು ಚುನಾವಣೆಯಲ್ಲಿ ಆಯ್ಕೆ ಮಾಡಿದರೆ ನಾನು ಮತ್ತೆ ಜೈಲಿಗೆ ಹೋಗಬೇಕಾಗಿಲ್ಲ ಎಂದಿದ್ದಾರೆ.

ಲೋಕಸಭೆ ಚುನಾವಣೆಯ ಪ್ರಚಾರಕ್ಕಾಗಿ ಅರವಿಂದ್ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದು, ಜೂನ್ 2ರಂದು ಅವರ ಜಾಮೀನು ಅವಧಿ ಮುಕ್ತಾಯವಾಗಲಿದೆ.

ನಾನು ಜನರಿಗೆ ಉಚಿತ ಔಷಧಿಗಾಗಿ ಸೌಲಭ್ಯಗಳನ್ನು ಏರ್ಪಡಿಸಿದ್ದೇನೆ. ಆದರೆ ನಾನು ಜೈಲಿನಲ್ಲಿದ್ದಾಗ 15 ದಿನಗಳ ಕಾಲ ಅವರು ನನಗೆ ಮಧುಮೇಹ ಔಷಧವನ್ನು ನೀಡಲಿಲ್ಲ, ನನಗೆ ಜೈಲಿನಲ್ಲಿ 15 ದಿನಗಳು ಇನ್ಸುಲಿನ್ ನೀಡಲಿಲ್ಲ ಎಂದು ಕೇಜ್ರಿವಾಲ್ ಆರೋಪಿಸಿದ್ದಾರೆ.

ನಾನು ಮತ್ತೆ ಜೈಲಿಗೆ ಹೋದರೆ ಬಿಜೆಪಿಯವರು ನಿಮ್ಮ ಕೆಲಸವನ್ನು ನಿಲ್ಲಿಸುತ್ತಾರೆ. ಉಚಿತ ವಿದ್ಯುತ್, ಶಾಲೆಗಳನ್ನು ಹಾಳು ಮಾಡುತ್ತಾರೆ. ಆಸ್ಪತ್ರೆಗಳು ಮತ್ತು ಮೊಹಲ್ಲಾ ಕ್ಲಿನಿಕ್ಗಳನ್ನು ಮುಚ್ಚುತ್ತಾರೆ ಎಂದು ಅವರು ಆರೋಪಿಸಿದರು.



## ಚಲಿಸುತ್ತಿದ ವೇಳೆಯೇ ಬುಲೆಟ್ ಬೈಕ್ ಸ್ಫೋಟಗೊಂಡು ದುರಂತ

**ಹೈದರಾಬಾದ್:** ತೆಲಂಗಾಣದ ಹೈದರಾಬಾದ್ನಲ್ಲಿ ಚಲಿಸುತ್ತಿದ್ದ ಬುಲೆಟ್ ಸ್ಫೋಟದಿಂದಾಗಿ ದೊಡ್ಡ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಅನೇಕ ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಚಲಿಸುತ್ತಿದ್ದ ಬುಲೆಟ್ ಬೈಕ್ ಸ್ಫೋಟಗೊಂಡ ಘಟನೆ ಹೈದರಾಬಾದ್ನ ಭವಾನಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ವೋಲ್ಟಾ ಹೋಟೆಲ್ ಬಳಿ ನಡೆದಿದೆ. ಅಕ್ಬರ್ ಫಂಕ್ಷನ್ ಹಾಲ್ ಬಳಿ ಬುಲೆಟ್ ಬೈಕ್ ನ ಇಂಧನ ಟ್ಯಾಂಕ್ ಸ್ಫೋಟಗೊಂಡ ಪರಿಣಾಮ 10 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಪ್ರಿನ್ಸೆಸ್ ಎಸ್ರಾ ಆಸ್ಪತ್ರೆಗೆ ದಾಖಲಿಸಲಾಗಿದೆ.ಪೊಲೀಸರು ಮತ್ತು ಅಗ್ನಿಶಾಮಕ ದಳ ಸ್ಥಳಕ್ಕೆ ತಲುಪಿತು. ರಸ್ತೆಯಲ್ಲಿ ಬೈಕ್ ಸ್ಫೋಟಗೊಂಡ ನಂತರ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ಬಂದ ಕೂಡಲೇ ಪೊಲೀಸರು ಸ್ಥಳಕ್ಕೆ ತಲುಪಿದರು. ಇದಲ್ಲದೆ, ಅಗ್ನಿಶಾಮಕ ದಳದ ವಾಹನಗಳು ಸಹ ಅಪಘಾತದ ಸ್ಥಳಕ್ಕೆ ತಲುಪಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದ್ದಾರೆ.



# ಕೆನಡಾದಲ್ಲಿ ಭೀಕರ ಕಾಡ್ಗಿಚ್ಚು



**ಒಟ್ಟಾವೊ:** ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತದ ಈಶಾನ್ಯ ಭಾಗದಲ್ಲಿ ವೇಗವಾಗಿ ಹರಡುತ್ತಿರುವ ಕಾಡ್ಗಿಚ್ಚನ್ನು ನಿಯಂತ್ರಿಸಲು ಸಮರೋಪಾದಿ ಕಾರ್ಯಾಚರಣೆ ಆರಂಭಗೊಂಡಿದ್ದು ಸಾವಿರಾರು ಮಂದಿಯನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಶುಕ್ರವಾರ ಕಾಣಿಸಿಕೊಂಡಿದ್ದ ಬೆಂಕಿ ಕ್ಷಿಪ್ರಗತಿಯಲ್ಲಿ ಹರಡಿದ್ದು ಶನಿವಾರ ಸುಮಾರು 17 ಚದರ ಕಿ.ಮೀ ಪ್ರದೇಶಕ್ಕೆ ವ್ಯಾಪಿಸಿದ್ದು ಫೋರ್ಟ್ ನೆಲ್ಸನ್ ನಗರದ ಸನಿಹದಲ್ಲಿತ್ತು ಎಂದು ಬ್ರಿಟಿಷ್ ಕೊಲಂಬಿಯಾ ಕಾಡ್ಗಿಚ್ಚು ನಿಯಂತ್ರಣಾ ಕೇಂದ್ರದ ಅಧಿಕಾರಿಗಳನ್ನು ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ. ಫೋರ್ಟ್ ನೆಲ್ಸನ್ ನಗರದ ಸುಮಾರು 3,500 ನಿವಾಸಿಗಳನ್ನು ಸ್ಥಳಾಂತರಿಸಲಾಗಿದ್ದು ಸ್ಥಳಾಂತರಗೊಂಡಿರುವುದನ್ನು ದೃಢಪಡಿಸಿಕೊಳ್ಳಲು ಅಧಿಕಾರಿಗಳು ಪ್ರತೀ ಮನೆಗೆ ಭೇಟಿ ನೀಡಿದ್ದಾರೆ. ಶುಕ್ರವಾರ ರಾತ್ರಿ ಬೀಸಿದ ಬಿರುಗಾಳಿಯಿಂದಾಗಿ ಕಾಡ್ಗಿಚ್ಚು ಕ್ಷಿಪ್ರಗತಿಯಲ್ಲಿ ಹರಡಿದ್ದು ಹೊಗೆಯ ಕಾರ್ಮೋಡ ಸಮೀಪದ ಅಲ್ಬರ್ಟ ಮತ್ತು ಎಡ್ಮಂಟನ್ ನಗರಕ್ಕೂ ವ್ಯಾಪಿಸಿದೆ. ಗಾಳಿಯ ಗುಣಮಟ್ಟ ಕುಸಿಯುತ್ತಿರುವುದರಿಂದ ಜನತೆ ಎಚ್ಚರಿಕೆ ವಹಿಸುವಂತೆ ಇಲಾಖೆ ಸಲಹೆ ನೀಡಿದೆ.

# 96 ಕ್ಷೇತ್ರಗಳಲ್ಲಿ 4ನೇ ಹಂತದ ಮತದಾನ ಆರಂಭ

**ಬೆಂಗಳೂರು:** ಲೋಕಸಭೆ ಚುನಾವಣೆಯ 4ನೇ ಹಂತದ ಮತದಾನ ಸೋಮವಾರ ನಡೆಯುತ್ತಿದೆ. 10 ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ 96 ಲೋಕಸಭಾ ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದೆ. ಸೋಮವಾರ ಬೆಳಗ್ಗೆ 7 ಗಂಟೆಗೆ ಮತದಾನ ಆರಂಭವಾಗಿದೆ. ಸಂಜೆ 6 ಗಂಟೆಯ ತನಕ ಲೋಕಸಭೆ ಚುನಾವಣೆಯ 4ನೇ ಹಂತದ ಮತದಾನಕ್ಕೆ ಅವಕಾಶವಿದೆ. ಆಂಧ್ರ ಪ್ರದೇಶದ 25, ಬಿಹಾರ 5, ಜಮ್ಮು ಮತ್ತು ಕಾಶ್ಮೀರ 1, ಜಾರ್ಖಂಡ್ 4, ಮಧ್ಯ ಪ್ರದೇಶ 8, ಮಹಾರಾಷ್ಟ್ರ 11, ಒಡಿಶಾ 4, ತೆಲಂಗಾಣ 17, ಉತ್ತರ ಪ್ರದೇಶ 13 ಮತ್ತು ಪಶ್ಚಿಮ ಬಂಗಾಳದ 8 ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. 4ನೇ ಹಂತದ ವಿಶೇಷ ಎಂದರೆ ಆಂಧ್ರ ಪ್ರದೇಶದಲ್ಲಿ 25 ಲೋಕಸಭಾ ಕ್ಷೇತ್ರ ಮತ್ತು 175 ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟಿಗೆ ಮತದಾನ. ಇಂದು ಆಂಧ್ರ ಪ್ರದೇಶ ಹೈ ವೋಲ್ಟೇಜ್ ಮತದಾನಕ್ಕೆ ಸಾಕ್ಷಿಯಾಗುತ್ತಿದೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಎನ್ಡಿಎ ಮೈತ್ರಿಕೂಟ, ಕಾಂಗ್ರೆಸ್ನಿಂದ ಪೈಪೋಟಿ ಎದುರಿಸುತ್ತಿದ್ದಾರೆ.

## ಮೆಕ್ಸಿಕೋದಲ್ಲಿ ಗುಂಡಿನ ದಾಳಿ: 8 ಜನ ಸಾವು

**ಮೆಕ್ಸಿಕೋ:** ಮೆಕ್ಸಿಕೋ ನಗರದ ದಕ್ಷಿಣ ಭಾಗದಲ್ಲಿ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿ 8 ಜನ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮತ್ತು ರಾಜ್ಯ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಮೆಕ್ಸಿಕೋ ನಗರದ ಗಡಿಗೆ ಹೊಂದಿಕೊಂಡಿರುವ ಹುಯಿಟ್ಜಿಲಾಕ್ನಲ್ಲಿ ಶನಿವಾರ ತಡರಾತ್ರಿ ದಾಳಿ ನಡೆದಿದೆ ಎಂದು ಮೊರೆಲೋಸ್ ರಾಜ್ಯ ಸರ್ಕಾರ ಹೇಳಿದೆ. 'ದಟ್ಟ ಅರಣ್ಯವನ್ನು ಹೊಂದಿರುವ ಈ ಪ್ರದೇಶ ಮರಗಳ್ಳರು, ಅಪಹರಣಕಾರರು ಹಾಗೂ ಡ್ರಗ್ ಗ್ಯಾಂಗ್ಗಳಿಗೆ ಅಡಗುತಾಣವಾಗಿದೆ. ಘಟನೆಯಲ್ಲಿ ಮುಗ್ಧ ಜನರು ಮೃತಪಟ್ಟಿದ್ದಾರೆ. ಇದು ಭಯಾನಕ ಹಿಂಸಾತ್ಮಕ ಕೃತ್ಯ' ಎಂದು ಪಟ್ಟಣದ ಮೇಯರ್, ರಾಫೆಲ್ ವರ್ಗಾಸ್ ಹೇಳಿದ್ದಾರೆ. ಹಿಂಸಾಚಾರ ನಿಲ್ಲಬೇಕು. ನಮ್ಮ ಜನರ ರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.



# ಕಾಶ್ಮೀರದಲ್ಲಿ ಭುಗಿಲೆದ್ದ ಘರ್ಷಣೆ

**ಜಮ್ಮು ಮತ್ತು ಕಾಶ್ಮೀರ:** ವಿದ್ಯುತ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪಾಕ್ ಆಕ್ರಮಿತ ಕಾಶ್ಮೀರದ ರಾಜಧಾನಿ ಮುಜಾಫರಾಬಾದ್ ನ ಹಲವು ಪ್ರದೇಶಗಳಲ್ಲಿ ಪ್ರತಿಭಟನೆ ಮುಂದುವರೆದಿದೆ. ಮುಷ್ಕರದ ಸಮಯದಲ್ಲಿ, ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟವು ಮತ್ತು ಸಾಮಾನ್ಯ ಜೀವನವು ಪರಿಣಾಮ ಬೀರಿತು, ಇದು ಭದ್ರತಾ ಪಡೆಗಳು ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆಗೆ ಕಾರಣವಾಗಿದೆ.

ಜಮ್ಮು ಮತ್ತು ಕಾಶ್ಮೀರ ಜಂಟಿ ಅವಾಮಿ ಆಕ್ಷನ್ ಕಮಿಟಿ (ಜೆಕೆಜೆಎಎಸಿ) ಕರೆದಿದ್ದ ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಮುಜಾಫರಾಬಾದ್ನಲ್ಲಿ ಬಂದ್ ಮತ್ತು ಜಾಮ್ ಮುಷ್ಕರದ ಸಂದರ್ಭದಲ್ಲಿ ಪೊಲೀಸರು ಅಶ್ರುವಾಯು ಶೆಲ್ಗಳನ್ನು ಹಾರಿಸಿದ್ದಾರೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಈ ವೇಳೆ ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿದ ಬಳಿಕ ಮಸೀದಿಗಳ ಮೇಲೂ ಕಲ್ಲು ತೂರಾಟ ನಡೆದಿದೆ. ಈ ಸಮಯದಲ್ಲಿ, ಪ್ರತಿಭಟನಾಕಾರರು ಪಿಒಕೆಯ ಸಂಹಾನಿ, ಸೆಹನ್ಸಾ, ಮೀರ್ಪುರ್, ರಾವಲ್ಕೋಟ್, ಖುಯಿರಟ್ಟಾ, ತಟ್ಟಪಾನಿ, ಹಟ್ಟಿಯಾನ್ ಬಾಲಾದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಪಾಕ್ ಆಡಳಿತದ ಕಾಶ್ಮೀರ ಸರ್ಕಾರವು ಇಡೀ ಪಿಒಕೆಯಲ್ಲಿ ಸೆಕ್ಷನ್ 144 ಅನ್ನು ವಿಧಿಸಿತ್ತು. ಇದರೊಂದಿಗೆ ಮೇ 10 ಮತ್ತು 11 ರಂದು ಎಲ್ಲಾ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಆದಾಗ್ಯೂ, ಸಾವಿರಾರು ಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ.

ಇದೇ ವೇಳೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಇದೇ ಮೊದಲ ಭಾರಿಗೆ ಭಾರತದ ಧ್ವಜ ಹಾರಾಡಿದೆ. ಪಾಕಿಸ್ತಾನ ಸೇನೆ ಹಾಗೂ ಪಾಕಿಸ್ತಾನ ಪೊಲೀಸ್ ವಿರುದ್ಧ ನಡೆಯುತ್ತಿರುವ ಬೃಹತ್ ಪ್ರತಿಭಟನೆಯಲ್ಲಿ ಸ್ಥಳೀಯರು ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದಾರೆ. ಇದೀಗ ಈ ವಿಡಿಯೋ ಹಾಗೂ ಫೋಟೋಗಳು ಭಾರಿ ವೈರಲ್ ಆಗಿದ್ದು, ಪಾಕಿಸ್ತಾನದ ಆತಂಕ ಹೆಚ್ಚಾಗಿದೆ.



# ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ ಚಲಾಯಿಸಿ: ನರೇಂದ್ರ ಮೋದಿ



**ನವದೆಹಲಿ:** ಲೋಕಸಭಾ ಚುನಾವಣೆಯ 4 ನೇ ಹಂತದ ಮತದಾನ ಇಂದು ಪ್ರಾರಂಭವಾಗಿದ್ದು, ಪ್ರಜಾಪ್ರಭುತ್ವವನ್ನು ಬಲಪಡಿಸಲು ತಮ್ಮ ಕರ್ತವ್ಯವನ್ನು ಚಲಾಯಿಸುವಂತೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಜನರಿಗೆ ಕರೆ ನೀಡಿದ್ದಾರೆ. ಈ ಕ್ಷೇತ್ರಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸುತ್ತಾರೆ ಎಂಬ ವಿಶ್ವಾಸವನ್ನು ಪ್ರಧಾನಿ ಮೋದಿ ವ್ಯಕ್ತಪಡಿಸಿದರು, ಮತದಾನದ ಈ ಉಲ್ಬಣಕ್ಕೆ ಯುವ ಮತ್ತು ಮಹಿಳಾ ಮತದಾರರ ಗಮನಾರ್ಹ ಕೊಡುಗೆಗಳನ್ನು ಎತ್ತಿ ತೋರಿಸಿದರು. ಇಂಗ್ಲಿಷ್ ಜೊತೆಗೆ ಹಿಂದಿ, ತೆಲುಗು, ಒಡಿಯಾ, ಮರಾಠಿ ಮತ್ತು ಬಂಗಾಳಿ ಎಂಬ ಐದು ಹೆಚ್ಚುವರಿ ಭಾಷೆಗಳಲ್ಲಿ ಪ್ರಧಾನಿ ಪೋಸ್ಟ್ ಬರೆದಿದ್ದಾರೆ. 'ನಾವೆಲ್ಲರೂ ನಮ್ಮ ಕರ್ತವ್ಯವನ್ನು ಮಾಡೋಣ''"ಇಂದು 4 ನೇ ಹಂತದ ಲೋಕಸಭಾ ಚುನಾವಣೆಯಲ್ಲಿ, 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 96 ಸ್ಥಾನಗಳಿಗೆ ಮತದಾನ ನಡೆಯುತ್ತಿದೆ. ಈ ಕ್ಷೇತ್ರಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸುತ್ತಾರೆ ಮತ್ತು ಯುವ ಮತದಾರರು ಮತ್ತು ಮಹಿಳಾ ಮತದಾರರು ಈ ಮತದಾನದ ಹೆಚ್ಚಳಕ್ಕೆ ಶಕ್ತಿ ತುಂಬುತ್ತಾರೆ ಎಂದು ನನಗೆ ಖಾತ್ರಿಯಿದೆ. ಬನ್ನಿ, ನಾವೆಲ್ಲರೂ ನಮ್ಮ ಕರ್ತವ್ಯವನ್ನು ಮಾಡೋಣ ಮತ್ತು ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸೋಣ!'' ಎಂದು ಪ್ರಧಾನಿ ಹೇಳಿದರು.

# ಚುನಾವಣೆಗೂ ಮುನ್ನವೇ ಶಂಕಿತ ಪಾಕ್ ಡ್ರೋನ್ ಹಾರಾಟ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಎಲ್ಒಸಿ ಬಳಿ ಶನಿವಾರ ತಡರಾತ್ರಿ, ಶಂಕಿತ ಪಾಕಿಸ್ತಾನಿ ಡ್ರೋನ್ ಮೇಲೆ ಭಾರತೀಯ ಸೇನಾ ಪಡೆ ಗುಂಡಿನ ದಾಳಿ ನಡೆಸಿದೆ. ಭಾರತದೊಳಗೆ ಅತಿಕ್ರಮಣ ಮಾಡಿದ್ದ ಡ್ರೋನ್ ಹಿಂದಿರುಗಿ ಪಾಕಿಸ್ತಾನದತ್ತ ಹೋಗುತ್ತಿರುವ ಸಂದರ್ಭದಲ್ಲಿ ಭಾರತೀಯ ಸೇನೆ ಗುಂಡಿನ ದಾಳಿ ನಡೆಸಿದೆ ಎಂದು ಪಿಟಿಐ ವರದಿ ಮಾಡಿದೆ. ಡ್ರೋನ್ ಉರುಳಿಸಿದ ಬಳಿಕ ಕೇರಿ ವಲಯದ ಪ್ರದೇಶದಲ್ಲಿ ಸೇನಾ ಸಿಬ್ಬಂದಿ ವ್ಯಾಪಕ ಶೋಧ ನಡೆಸಲಾಗಿದ್ದು, ಯಾವುದೇ ರೀತಿಯ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಶಸ್ತ್ರಾಸ್ತ್ರಗಳು ಮತ್ತು ಮಾದಕ ವಸ್ತುಗಳನ್ನು ರವಾನಿಸಲು ಡ್ರೋನ್ ಬಳಕೆ ಮಾಡಿರುವ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ. ಈ ಹಿನ್ನೆಲೆ ಗಡಿ ಪ್ರದೇಶದಲ್ಲಿ ಅನುಮಾನಾಸ್ಪದ ವ್ಯಕ್ತಿ ಅಥವಾ ಡ್ರೋನ್ಗಳ ಚಲನವಲನದ ಮೇಲೆ ಭಾರತೀಯ ಸೇನೆ ಹದ್ದಿನಕಣ್ಣು ಇರಿಸಿದೆ. ಶನಿವಾರ ಮತ್ತು ಭಾನುವಾರದ ಮಧ್ಯರಾತ್ರಿಯಲ್ಲಿ ಪೂಂಚ್ ಜಿಲ್ಲೆಯ ಅಲ್ಲಾಪಿರ್ ಪ್ರದೇಶದ ಬಳಿ ಆಕಾಶದಲ್ಲಿ ಬ್ಲಿಂಕ್ ಲೈಟ್ ಹಾರುವ ವಸ್ತು ಕಾಣಿಸಿಕೊಂಡಿತ್ತು. ಕೂಡಲೇ ಅಲರ್ಟ್ ಆದ ಭದ್ರತಾಪಡೆದ ಸುತ್ತಲಿನ ಪ್ರದೇಶವನ್ನು ತಮ್ಮ ವಶಕ್ಕೆ ಪಡೆದುಕೊಂಡು ಇಂಚಿಂಚೂ ಜಾಗವನ್ನು ತಪಾಸಣೆ ನಡೆಸಿದ್ದಾರೆ. ಆದರೆ ಯಾವುದೇ ರೀತಿಯ ಅನುಮಾನಾಸ್ಪದ ಅಥವಾ ಶಸ್ತ್ರಾಸ್ತ್ರಗಳು ಸಿಕ್ಕಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ನಡುವೆ ಪಂಜಾಬ್ನ ಅಮೃತಸರ ಜಿಲ್ಲೆಯಲ್ಲಿ, ಗಡಿ ಭದ್ರತಾ ಪಡೆಗಳು (ಬಿಎಸ್ಎಫ್) ಚೀನಾ ನಿರ್ಮಿತ ಡಿಜೆಐ ಮಾವಿಕ್ 3 ಕ್ಲಾಸಿಕ್ ಡ್ರೋನ್ ಅನ್ನು ಹವೇಲಿಯನ್ ಗ್ರಾಮದ ಕೊಯ್ಲು ಮಾಡಿದ ಹೊಲದಲ್ಲಿ ವಶಪಡಿಸಿಕೊಂಡಿದೆ. ಮೇ 12ರಂದು, ಅಮೃತಸರ ಜಿಲ್ಲೆಯ ಗಡಿ ಪ್ರದೇಶದಲ್ಲಿ ಡ್ರೋನ್ ಇರುವ ಬಗ್ಗೆ ಬಿಎಸ್ಎಫ್ ಗುಪ್ತಚರ ವಿಭಾಗ ಮಾಹಿತಿ ನೀಡಿತ್ತು. ಈ ಮಾಹಿತಿ ಆಧಾರದ ಮೇಲೆ ಸಂಜೆ 5.35ರ ವೇಳೆ ನಡೆದ ಬಿಎಸ್ಎಫ್ ಪಡೆ ಕಾರ್ಯಾಚರಣೆ ನಡೆಸಿ ಹೊಲದಲ್ಲಿದ್ದ ಡ್ರೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದುಬಿಎಸ್ಎಫ್ ಪಂಜಾಬ್ ಫ್ರಾಂಟಿಯರ್ ಹೇಳಿಕೆಯಲ್ಲಿ ತಿಳಿಸಿದೆ.



ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ರಶ್ಮಿಕಾ ಮಂದಣ್ಣ ಬಳಿಕ 'ಸಿಖಂದರ್' ಚಿತ್ರತಂಡ ಸೇರಿಕೊಂಡ ತ್ರಿಷಾ



ಸೌತ್ ಬೆಡಗಿ ತ್ರಿಷಾ ಕೃಷ್ಣನ್ ಇದೀಗ 14 ವರ್ಷಗಳ ನಂತರ ಬಾಲಿವುಡ್‌ನತ್ತ ಮುಖ ಮಾಡಿದ್ದಾರೆ. ತ್ರಿಷಾ ಕೂಡ ಮತ್ತೊಮ್ಮೆ ಬಿಟೌನ್ ಅಡ್ಡಾಗೆ ಎಂಟ್ರಿ ಕೊಟ್ಟಿದ್ದಾರೆ. ಬ್ಯಾಡ್ ಬಾಯ್ ಸಲ್ಮಾನ್ ಖಾನ್‌ಗೆ ತ್ರಿಷಾ ನಾಯಕಿಯಾಗ್ತಿದ್ದಾರೆ ಎಂಬ ಸುದ್ದಿ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. 2010ರಲ್ಲಿ ತೆರೆಕಂಡ 'ಕಟ್ಟಾ ಮೀಟಾ' ಚಿತ್ರದಲ್ಲಿ ಜಿಲ್ಲಾಧಿಕಾರಿಯ ಪಾತ್ರದಲ್ಲಿ ನಟಿಸಿದ್ದರು. ಅಕ್ಷಯ್ ಕುಮಾರ್‌ಗೆ ನಾಯಕಿ ತ್ರಿಷಾ ಕಾಣಿಸಿಕೊಂಡಿದ್ದರು. ಅದಾದ ನಂತರ ಬಾಲಿವುಡ್‌ಗೆ ಗುಡ್ ಬೈ ಹೇಳಿದ್ದರು. ಈಗ ಹಲವು ವರ್ಷಗಳ ನಂತರ ಸ್ಟಾರ್ ನಟನಿಗೆ ಜೋಡಿಯಾಗುವ ಮೂಲಕ ಸದ್ದು ಮಾಡುತ್ತಿದ್ದಾರೆ.

ಸಲ್ಮಾನ್ ಖಾನ್ ನಟನೆಯ 'ಸಿಖಂದರ್' ಚಿತ್ರದಲ್ಲಿ ರಶ್ಮಿಕಾ ಮಂದಣ್ಣ ನಾಯಕಿ ಎಂದು ಅಧಿಕೃತ ಘೋಷಣೆ ಮಾಡಿತ್ತು ಚಿತ್ರತಂಡ. ಈ ಬೆನ್ನಲ್ಲೇ ಸಿಖಂದರ್ ಸಲ್ಮಾನ್‌ಗೆ ಮತ್ತೋರ್ವ ನಾಯಕಿಯಾಗಿ ತ್ರಿಷಾ ಕೂಡ ಎಂಟ್ರಿ ಕೊಡ್ತಿದ್ದಾರೆ ಎನ್ನಲಾಗಿದೆ. ಸೆಕೆಂಡ್ ಲೀಡ್ ನಾಯಕಿಯಾಗಿ ನಟಿಸುತ್ತಾರೆ ಎಂಬ ಸುದ್ದಿ ಚರ್ಚೆಗೆ ಗ್ರಾಸವಾಗಿದೆ. ಅಧಿಕೃತ ಘೋಷಣೆ ಆಗುವವರೆಗೂ ಕಾದುನೋಡಬೇಕಿದೆ.

ತ್ರಿಷಾಗೆ 41 ವರ್ಷ ವಯಸ್ಸಾಗಿದ್ರೂ ಅವರಿಗೆ ಡಿಮ್ಯಾಂಡ್ ಕಮ್ಮಿಯಾಗಿಲ್ಲ. ಅವರ ಕೈಯಲ್ಲಿ ಸದ್ಯ 5 ಚಿತ್ರಗಳಿವೆ. ತಮಿಳಿನ ವಿಧ ಮುಯರ್ಚಿ, ಮಲಯಾಳಂನ 'ರಾಮ್' ಮತ್ತು 'ಐಡೆಂಟಿಟಿ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಕಮಲ್ ಹಾಸನ್ ನಟನೆಯ ಥಗ್ ಲೈಫ್, ಮೆಗಾಸ್ಟಾರ್ ಚಿರಂಜೀವಿ ನಟನೆಯ 'ವಿಶ್ವಾಂಭರ' ಸಿನಿಮಾದಲ್ಲಿ ತ್ರಿಷಾ ನಾಯಕಿಯಾಗಿದ್ದಾರೆ.



# ಪೊಲೀಸ್ ಅಧಿಕಾರಿಯಾಗಿ ಎಂಟ್ರಿ ಕೊಟ್ಟ 'ಹೆಡ್‌ಬುಷ್' ನಟಿ ಪಾಯಲ್



ಕನ್ನಡದ 'ಹೆಡ್‌ಬುಷ್' ಚಿತ್ರದ ಮೂಲಕ ಪರಿಚಿತರಾದ ಸೌತ್ ಬ್ಯೂಟಿ ಪಾಯಲ್ ರಜಪೂತ್ ಈಗ ಖಾಕಿ ಖದರ್ ತೋರಿಸೋಕೆ ರೆಡಿಯಾಗಿದ್ದಾರೆ. ಪೊಲೀಸ್ ಅಧಿಕಾರಿಯಾಗಿ ರಕ್ಷಣೆಗಿಳಿದಿದ್ದಾರೆ. ಚಿತ್ರದಲ್ಲಿನ ನಟಿಯ ಫಸ್ಟ್ ಲುಕ್ ಈಗ ರಿವೀಲ್ ಆಗಿದೆ.

'ರಕ್ಷಣಾ' ಎಂಬ ಚಿತ್ರದಲ್ಲಿ ಪಾಯಲ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಹರಿಪ್ರಿಯಾ ಕ್ರಿಯೇಷನ್ಸ್ ಅಡಿಯಲ್ಲಿ ಪ್ರಣದೀಪ್ ಆಕ್ಷನ್ ಕಟ್ ಹೇಳಿದ್ದಾರೆ. ಸದ್ಯ ಚಿತ್ರದಲ್ಲಿ ಪಾಯಲ್ ಖಡಕ್ ಆಗಿ ಕಾಣಿಸಿಕೊಂಡಿದ್ದಾರೆ.

ಆರ್‌ಎಕ್ಸ್ 100, 'ಮಂಗಳವಾರಂ' ಚಿತ್ರಗಳಿಗಿಂತ ಪಾಯಲ್ ಈ ಸಿನಿಮಾದಲ್ಲಿ ವಿಭಿನ್ನವಾಗಿ ನಟಿಸಿದ್ದಾರೆ. ಈ ಚಿತ್ರದ ಮೂಲಕ ಸಕ್ಸಸ್ ಸಿಗಲಿದೆ ಎಂಬ ಭರವಸೆಯಲ್ಲಿದೆ ಚಿತ್ರತಂಡ. ಅಂದಹಾಗೆ, ಡಾಲಿ ನಟನೆ ಮತ್ತು ನಿರ್ಮಾಣದ 'ಹೆಡ್‌ಬುಷ್' ಚಿತ್ರದಲ್ಲಿ ಪಾಯಲ್ ವಿಶೇಷ ಪಾತ್ರದಲ್ಲಿ ನಟಿಸಿದ್ದರು.

# ವಿನಯ್ ರೈ ಜೊತೆ ಪ್ರೀತಿಯಲ್ಲಿ ಬಿದ್ರಾ ಕನ್ನಡದ 'ಆಪ್ತರಕ್ಷಕ' ನಟಿ



ವಿಷ್ಣುವರ್ಧನ್ ನಟನೆಯ 'ಆಪ್ತರಕ್ಷಕ' ಚಿತ್ರದಲ್ಲಿ ನಾಗವಲ್ಲಿ ಪಾತ್ರದಲ್ಲಿ ನಟಿಸಿದ್ದ ವಿಮಲಾ ರಾಮನ್ ಇದೀಗ ಖಳನಟ ವಿನಯ್ ರೈ ಜೊತೆಗಿನ ರೊಮ್ಯಾಂಟಿಕ್ ಫೋಟೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಇಬ್ಬರೂ ಪ್ರೀತಿಯಲ್ಲಿ ಬಿದ್ರಾ ಎಂದು ಸಾಮಾಜಿಕ ಜಾಲತಾಣದಲ್ಲಿ ನೆಟ್ಟಿಗರಿಂದ ಚರ್ಚೆ ಶುರುವಾಗಿದೆ.

'ಹನುಮಾನ್' ಚಿತ್ರದ ವಿಲನ್ ವಿನಯ್ ರೈ ಜೊತೆ ವಿಮಲಾ ಕ್ಲೋಸ್ ಆಗಿರುವ ಫೋಟೋಗಳು ಇನ್ಸ್ಟಾಗ್ರಾಂ ಖಾತೆಯಲ್ಲಿ ಆಗಾಗ ಶೇರ್ ಮಾಡುತ್ತಿರುತ್ತಾರೆ. ಇದೀಗ ಮತ್ತೆ ರೊಮ್ಯಾಂಟಿಕ್ ಫೋಟೋಗಳನ್ನು ಶೇರ್ ಮಾಡುವ ಮೂಲಕ ಈ ಜೋಡಿ ಸುದ್ದಿಯಲ್ಲಿದೆ.

40 ವರ್ಷ ಮೇಲ್ಪಟ್ಟಿರುವ ವಿನಯ್ ಮತ್ತು ವಿಮಲಾ ಇಬ್ಬರೂ ಡೇಟಿಂಗ್ ಮಾಡುತ್ತಿದ್ದಾರೆ ಎನ್ನಲಾಗಿದೆ. ಆದರೆ ಇದುವರೆಗೂ ತಮ್ಮ ಸಂಬಂಧದ ಬಗ್ಗೆ ಎಲ್ಲಿಯೂ ಅಧಿಕೃತ ಮಾಹಿತಿ ನೀಡಿಲ್ಲ. ಆದರೆ ಸದ್ಯಲ್ಲೇ ಈ ಜೋಡಿ ಮದುವೆ ಬಗ್ಗೆ ಗುಡ್ ನ್ಯೂಸ್ ಕೊಡ್ತಾರಾ ಎಂದು ಕಾದುನೋಡಬೇಕಿದೆ.

ವಿನಯ್ ರೈ ಅವರು ಮುಂಬೈನ ತುಳು ಕುಟುಂಬದಲ್ಲಿ ಜನಿಸಿದವರು. ತೆಲುಗು, ತಮಿಳು, ಮಲಯಾಳಂ ಸಿನಿಮಾಗಳಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ರಿಲೀಸ್ ಆದ ಹನುಮಾನ್ ಚಿತ್ರದಲ್ಲಿ ತೇಜಾ ಸಜ್ಜಾಗೆ ಖಡಕ್ ವಿಲನ್ ಆಗಿ ನಟಿಸಿದ್ದರು.

ಆಪ್ತರಕ್ಷಕ, ರಾಜರಾಜೇಂದ್ರ ಚಿತ್ರದಲ್ಲಿ ವಿಮಲಾ ರಾಮನ್ ನಟಿಸಿದ್ದಾರೆ. ಸೌತ್ ಸಿನಿಮಾಗಳಲ್ಲಿ ನಟಿಸುವ ಮೂಲಕ ಗಮನ ಸೆಳೆದಿದ್ದಾರೆ. ಅಂದಹಾಗೆ, ವಿನಯ್ ಮತ್ತು ವಿಮಲಾ ಜೋಡಿ 'ಗಾಂಡೀವಧಾರಿ ಅರ್ಜುನ' ಚಿತ್ರದಲ್ಲಿ ದಂಪತಿಗಳಾಗಿ ನಟಿಸಿದ್ದರು.

ಕ್ರೀಡೆ

## ಆರ್‌ಸಿಬಿಗೆ 47 ರನ್‌ಗಳ ಜಯ

# ಪ್ಲೇ ಆಫ್ ಕನಸು ಜೀವಂತ!



ರಿಷಭ್ ಪಂತ್ ಅವರ ಅನುಪಸ್ಥಿತಿಯಲ್ಲಿ ಆರ್‌ಸಿಬಿ ವಿರುದ್ಧ ಅಖಾಡಕ್ಕಿಳಿದಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಹೀನಾಯ ಸೋಲಿಗೆ ತುತ್ತಾಗಿದೆ. ಆದ್ರೆ ತವರಿನಲ್ಲೇ 47 ರನ್‌ಗಳ ಭರ್ಜರಿ ಜಯ ಸಾಧಿಸಿದ ಆರ್‌ಸಿಬಿ ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿದೆ.

ಬೆಂಗಳೂರಿನ ಎಂ. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 9 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿತ್ತು. ಹೊಸ ನಾಯಕನ ನೇತೃತ್ವದಲ್ಲಿ ಸ್ಪರ್ಧಾತ್ಮಕ ರನ್‌ಗಳ ಗುರಿ ಬೆನ್ನತ್ತಿದ್ದ ಡೆಲ್ಲಿ ಕ್ಯಾಪಿಟಲ್ಸ್ 19.1 ಓವರ್‌ಗಳಲ್ಲಿ 140 ರನ್‌ಗಳಿಗೆ ಸರ್ವಪತನ ಕಂಡಿತು.

188 ರನ್‌ಗಳ ಬೃಹತ್ ಮೊತ್ತದ ಚೇಸಿಂಗ್ ಆರಂಭಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಆರಂಭದಲ್ಲೇ ಆಘಾತ ಎದುರಿಸಿತು. ಸ್ಫೋಟಕ ಪ್ರದರ್ಶನ ನೀಡಲು ಮುಂದಾದ ಆರಂಭಿಕ ಆಟಗಾರ ಡೇವಿಡ್ ವಾರ್ನರ್ 1 ರನ್‌ಗಳಿಗೆ ಔಟಾದರು. ಈ ಬೆನ್ನಲ್ಲೇ ಅಭಿಷೇಕ್ ಪೋರೆಲ್ 2 ರನ್‌ಗಳಿಗೆ ವಿಕೆಟ್ ಒಪ್ಪಿಸಿ ಹೊರನಡೆದರು. ಇನ್ನೂ 8 ಎಸೆತಗಳಲ್ಲಿ 21 ರನ್ (2 ಸಿಕ್ಸರ್, 2 ಬೌಂಡರಿ) ಬಾರಿಸಿದ್ದ ಫ್ರೆಸರ್ ಮೆಕ್‌ಗಾರ್ಕ್ ಸಹ ವಿಕೆಟ್ ಒಪ್ಪಿಸಿದರು. ಮೊದಲ 6 ಓವರ್‌ಗಳಲ್ಲಿ 54 ರನ್ ಗಳಿಸಿದ್ದ ಡೆಲ್ಲಿ ಕ್ಯಾಪಿಟಲ್ಸ್ ಪ್ರಮುಖ 4 ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿದ್ದ ಡೆಲ್ಲಿ ತಂಡಕ್ಕೆ ಟ್ರಿಸ್ಟಾನ್ಸ್ ಸ್ಟಬ್ಸ್ ಬೂಸ್ಟ್ ನೀಡುತ್ತಾರೆ ಎಂಬ ನಿರೀಕ್ಷೆಯಲ್ಲಿ ತಂಡ ಇತ್ತು. ಆದ್ರೆ ಅನಗತ್ಯವಾಗಿ ಒಂದು ರನ್ ಕದಿಯಲು ಯತ್ನಿಸಿ ರನೌಟ್‌ಗೆ ತುತ್ತಾದರು. ಇದು ಡೆಲ್ಲಿ ತಂಡಕ್ಕೆ ತುಂಬಲಾರದ ನಷ್ಟವಾಯಿತು. ಅಲ್ಲದೇ ಮಧ್ಯಮ ಕ್ರಮಾಂಕದಲ್ಲಿ ನಾಯಕ ರಿಷಭ್ ಪಂತ್ ಅವರ ಅನುಪಸ್ಥಿತಿ ಸಹ ಡೆಲ್ಲಿ ತಂಡವನ್ನು ಕಾಡಿತು.

ಇನ್ನೂ ಏಕಾಂಗಿ ಹೋರಾಟ ನಡೆಸಿದ ನಾಯಕ ಅಕ್ಷರ್ ಪಟೇಲ್ 39 ಎಸೆತಗಳಲ್ಲಿ 57 ರನ್ (3 ಸಿಕ್ಸರ್, 5 ಬೌಂಡರಿ) ಗಳಿಸಿದ್ದು ಬಿಟ್ಟರೆ ಉಳಿದ ಯಾರೊಬ್ಬರು ಕ್ರೀಸ್‌ನಲ್ಲಿ ಉಳಿಯದ ಕಾರಣ ಆರ್‌ಸಿಬಿ ಸುಲಭ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಯಿತು. ಇನ್ನುಳಿದಂತೆ ಶಾಯ್ ಹೋಪ್ 29 ರನ್, ಕುಮಾರ್ ಕುಮಾರ್ ಕುಶಾರ್ಗ 2 ರನ್, ಸ್ಟಬ್ಸ್ 3 ರನ್, ರಸಿಕ್ ಸಲಾಮ್ 10 ರನ್, ಮುಕೇಶ್ ಕುಮಾರ್ 3 ರನ್, ಕುಲ್ದೀಪ್ ಯಾದವ್ 3 ರನ್ ಗಳಿಸಿ ಔಟಾದರು.

ರಜತ್ ಪಾಟೀದಾರ್ ಸ್ಫೋಟಕ ಅರ್ಧಶತಕ, ವಿಲ್ ಜ್ಯಾಕ್ಸ್, ವಿರಾಟ್ ಕೊಹ್ಲಿ ಸ್ಫೋಟಕ ಪ್ರದರ್ಶನದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 9 ವಿಕೆಟ್ ಕಳೆದುಕೊಂಡು 187 ರನ್ ಬಾರಿಸಿತ್ತು. ಈ ಮೂಲಕ ಡೆಲ್ಲಿ ತಂಡಕ್ಕೆ ಸ್ಪರ್ಧಾತ್ಮಕ ಗುರಿ ನೀಡಿತ್ತು. ಮೊದಲಿಗೆ ಆರ್‌ಸಿಬಿ ಉತ್ತಮ ಆರಂಭ ಪಡೆಯಲು ವಿಫಲವಾಯಿತು. ನಾಯಕ ಫಾಫ್ ಡು ಪ್ಲೆಸಿಸ್ ಕೇವಲ 6 ರನ್ ಗಳಿಸಿ ಮುಕೇಶ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೊಂದು ತುದಿಯಲ್ಲಿ ಕೇವಲ 13 ಎಸೆತಗಳಲ್ಲಿ ಒಂದು ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 27 ರನ್ ಸಿಡಿಸಿದ ವಿರಾಟ್ ಕೊಹ್ಲಿ, ಇಶಾಂತ್ ಶರ್ಮಾಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು.

**ಅಬ್ಬರಿಸಿದ ಪಾಟೀದಾರ್-ಜ್ಯಾಕ್ಸ್:** ಕೇವಲ 36 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಕಂಗಾಲಾಗಿದ್ದ ಆರ್‌ಸಿಬಿ ತಂಡಕ್ಕೆ 3ನೇ ವಿಕೆಟ್‌ಗೆ ರಜತ್ ಪಾಟೀದಾರ್ ಹಾಗೂ ವಿಲ್ ಜ್ಯಾಕ್ಸ್ ಕೇವಲ 53 ಎಸೆತಗಳಲ್ಲಿ 88 ರನ್‌ಗಳ ಜೊತೆಯಾಟ ನೀಡುವ ಮೂಲಕ ಬಲ ತುಂಬಿದರು. ಮೈಚಳಿ ಬಿಟ್ಟು ಬ್ಯಾಟ್ ಬೀಸಿದ ಪಾಟೀದಾರ್ ಕೇವಲ 29 ಎಸೆತಗಳಲ್ಲೇ 5ನೇ ಅರ್ಧಶತಕ ಸಿಡಿಸಿದರು. ಅಂತಿಮವಾಗಿ ಪಾಟೀದಾರ್ 32 ಎಸೆತಗಳಲ್ಲಿ 52 ರನ್ (3 ಸಿಕ್ಸರ್, 3 ಬೌಂಡರಿ) ಚಚ್ಚಿ ಔಟಾದರು. ಈ ಬೆನ್ನಲ್ಲೇ ವಿಲ್ ಜ್ಯಾಕ್ಸ್ 41 ರನ್ (29 ಎಸೆತ, 3 ಬೌಂಡರಿ, 2 ಸಿಕ್ಸರ್) ಬಾರಿಸಿ ಪೆವಿಲಿಯನ್ ಹಾದಿ ಹಿಡಿದರು. ಬಳಿಕ ಕ್ರೀಸ್‌ಗಿಳಿದ ಕ್ಯಾಮರೂನ್ ಗ್ರೀನ್ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದರು.

## ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಟ್ವಿಸ್ಟ್

# ಪ್ರೀತಂ ಗೌಡ ಆಪ್ತ ಸೇರಿ ಇಬ್ಬರು ಎಸ್‌ಐಟಿ ವಶಕ್ಕೆ





**ಹಾಸನ:** ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಪೆನ್‌ಡ್ರೈವ್ ವೈರಲ್ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಬಿಜೆಪಿ ಮಾಜಿ ಶಾಸಕ ಪ್ರೀತಂ ಗೌಡ ಆಪ್ತ ಸೇರಿದಂತೆ ಇಬ್ಬರನ್ನು ಎಸ್‌ಐಟಿ ವಶಕ್ಕೆ ಪಡೆದಿದೆ. ಪೆನ್‌ಡ್ರೈವ್ ವೈರಲ್ ವಿಚಾರದಲ್ಲಿ ಮಾಜಿ ಶಾಸಕ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅತ್ಯಾಪ್ತ ಲಿಖಿತ್‌ಗೌಡ ಹಾಗೂ ಯಲಗುಂದ ಚೇತನ್ ಎಂಬ ಇಬ್ಬರನ್ನು ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಇಬ್ಬರನ್ನೂ ನಿನ್ನೆ ಮಧ್ಯರಾತ್ರಿಯೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಪ್ರೀತಂಗೌಡ ಜೊತೆ ಚೇತನ್ ಹಾಗೂ ಲಿಖಿತ್ ಗುರುತಿಸಿಕೊಂಡಿದ್ದರು. ಮಾಜಿ ಶಾಸಕ ಪ್ರೀತಂ ಗೌಡ ಕಚೇರಿಯ ಸಿಬ್ಬಂದಿ ಹಾಗೂ ಅವರ ಆಪ್ತ ನಿಖಿತ್ ಎನ್ನಲಾಗಿದೆ.

ಪೆನ್‌ಡ್ರೈವ್ ಇಟ್ಟುಕೊಂಡಿದ್ದ ಆರೋಪದಲ್ಲಿ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಇಬ್ಬರು ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಲಿಖಿತ್ ಎಂಬಾತ ಪ್ರೀತಂ ಗೌಡ ಜೊತೆ ಹಲವು ವರ್ಷಗಳಿಂದ ಗುರುತಿಸಿಕೊಂಡಿದ್ದ ಎಂದು ತಿಳಿದುಬಂದಿದೆ.

ಹಾಸನದ ನಗರ ಪೊಲೀಸ್ ಠಾಣೆ ಸಮುಚ್ಚಯದಲ್ಲಿರುವ ಸೈಬರ್ ಕ್ರೈಂ ಠಾಣೆಯಲ್ಲಿ ಇಬ್ಬರ ವಿಚಾರಣೆ ನಡೆಸಲಾಗುತ್ತಿದೆ. ಬಿಜೆಪಿ ಕಾರ್ಯಕರ್ತರ ಬಂಧನ ತೀವ್ರ ಕುತೂಹಲ ಮೂಡಿಸಿದೆ.

# ರಾಯಲ್ಸ್ ಮೇಲೆ ಕಿಂಗ್ಸ್ ಸವಾರಿ: ಚೆನ್ನೈಗೆ 5 ವಿಕೆಟ್‌ಗಳ ಜಯ



ಸಂಘಟಿತ ಬೌಲಿಂಗ್, ಬ್ಯಾಟಿಂಗ್ ಪ್ರದರ್ಶನದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ರಾಜಸ್ಥಾನ್ ರಾಯಲ್ಸ್ ವಿರುದ್ಧ 5 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ. ಈ ಮೂಲಕ ಪ್ಲೇ ಆಫ್ ಹಾದಿಗೆ ಮತ್ತಷ್ಟು ಹತ್ತಿರವಾಗಿದೆ.

ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ರಾಜಸ್ಥಾನ್ ರಾಯಲ್ಸ್ ಫೀಲ್ಡಿಂಗ್ ಮಾಡುವ ಅವಕಾಶವನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಬಿಟ್ಟುಕೊಟ್ಟಿತು. ನಿಧಾನಗತಿಯ ಬ್ಯಾಟಿಂಗ್ ನಡೆಸಿದ ರಾಜಸ್ಥಾನ್ ತಂಡಕ್ಕೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟ ಪರಿಣಾಮ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 141 ರನ್ ಗಳಿಸಿತ್ತು. ಅಲ್ಪ ಮೊತ್ತದ ಗುರಿ ಬೆನ್ನತ್ತಿದ್ದ ಚೆನ್ನೈ ಸೂಪರ್ ಕಿಂಗ್ಸ್ 18.2 ಓವರ್‌ಗಳಲ್ಲೇ 5 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಗೆಲುವು ಸಾಧಿಸಿತು.

ಅಲ್ಪ ಮೊತ್ತದ ಚೇಸಿಂಗ್ ಗುರಿ ಬೆನ್ನಟ್ಟಿದ ಚೆನ್ನೈ ಪವರ್‌ಪ್ಲೇನಲ್ಲಿ ಸ್ಫೋಟಕ ಆರಂಭ ಪಡೆದರೂ ಬಳಿಕ ರನ್ ವೇಗ ಕಳೆದುಕೊಂಡಿತ್ತು. ಆದ್ರೆ ನಾಯಕ ರುತುರಾಜ್ ಗಾಯಕ್ವಾಡ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ತಂಡವನ್ನು ಗೆಲ್ಲುವಿತನ್ನ ಕೊಂಡೊಯ್ದಿತು. ಚೆನ್ನೈ ಪರ ಕೊನೇವರೆಗೂ ಹೋರಾಡಿದ ರುತುರಾಜ್ ಗಾಯಕ್ವಾಡ್ 41 ಎಸೆತಗಳಲ್ಲಿ 42 ರನ್ (2 ಸಿಕ್ಸರ್, 1 ಬೌಂಡರಿ) ಗಳಿಸಿದರು. ರಚಿನ್ ರವಿಂದ್ರ 27 ರನ್, ಡೇರಿಲ್ ಮಿಚೆಲ್ 22 ರನ್, ಮೊಯಿನ್ ಅಲಿ 10 ರನ್, ಶಿವಂ ದುಬೆ 18 ರನ್, ರವೀಂದ್ರ ಜಡೇಜಾ 5 ರನ್, ಸಮೀರ್ ರಿಝ್ವಿ 15 ರನ್ ಗಳಿಸಿದರು.

**ಅಪರೂಪದ ಔಟ್‌ಗೆ ತುತ್ತಾದ ಜಡ್ಡು:** ರಾಜಸ್ಥಾನ್ ವಿರುದ್ಧದ ಪಂದ್ಯದಲ್ಲಿ ಆಲ್‌ರೌಂಡರ್ ಜಡೇಜಾ ಅಪರೂಪದ ಔಟ್‌ಗೆ ತುತ್ತಾಗಿರುವ ಪ್ರಸಂಗವೂ ಕಂಡುಬಂದಿತು. 16ನೇ ಓವರ್‌ನ 5ನೇ ಎಸೆತ ಎದುರಿಸಿದ ಜಡೇಜಾ 2 ರನ್ ಕದಿಯುವ ಪ್ರಯತ್ನ ಮಾಡಿದ್ದರು. ಈ ವೇಳೆ ರನೌಟ್ ಆಗುವ ಸಾಧ್ಯತೆಯಿತ್ತು. ಸಂಜು ಸ್ಯಾಮ್ಸನ್ ಅವರು ಡೈರೆಕ್ಟ್ ವಿಕೆಟ್‌ಗೆ ಚೆಂಡನ್ನು ಎಸೆದರು, ಆದ್ರೆ ವಿಕೆಟ್‌ಗೆ ಅಡ್ಡಲಾಗಿ ಓಡುತ್ತಿದ್ದ ಜಡೇಜಾ ಚೆಂಡನ್ನು ಬೆನ್ನಿಗೆ ತಾಗಿಸಿಕೊಂಡರು. ಇದರಿಂದ ಸಿಟ್ಟಾದ ಸಂಜು ಸ್ಯಾಮ್ಸನ್ ಅಂಪೈರ್ ಮೊರೆ ಹೋದರು. ಕೊನೆಗೆ ಟಿವಿ ಅಂಪೈರ್ ಕ್ಷೇತ್ರರಕ್ಷಣೆ ತಡೆಯುವ ಪ್ರಯತ್ನ ಮಾಡಿದ ಆಧಾರದ ಮೇಲೆ ಔಟ್ ಎಂದು ತೀರ್ಪು ನೀಡಿದರು.

# ಪ್ರಜ್ವಲ್ ಪ್ರಕರಣದಲ್ಲಿ ಎಸ್‌ಐಟಿ ತನಿಖೆಯ ದಿಕ್ಕು ತಪ್ಪಿಸುತ್ತಿದೆ



**ಬೆಂಗಳೂರು:** ಪ್ರಜ್ವಲ್ ಪ್ರಕರಣವನ್ನು ಯಾರೂ ಸಮರ್ಥನೆ ಮಾಡುವ ಪ್ರಶ್ನೆಯೇ ಇಲ್ಲ. ಆದರೆ ಪ್ರಕರಣದ ತನಿಖೆ ನಡೆಯುತ್ತಿರುವ ರೀತಿ ಸರಿ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುಡುಗಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಹಿತಿ ಕೊಟ್ಟವರನ್ನೇ ಬಂಧನ ಮಾಡ್ತಿದ್ದಾರೆ. ಎಸ್‌ಐಟಿಯ ತನಿಖೆಯ ದಿಕ್ಕು ತಪ್ಪುತ್ತಿದೆ. ಅಪರಾಧಿಗಳನ್ನ ಎಸ್‌ಐಟಿಯವರು ಬಂಧಿಸುತ್ತಿಲ್ಲ. ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಅಂದರೆ ಸಿಬಿಐಗೆ ವಹಿಸಲಿ ಎಂದು ತಿಳಿಸಿದರು.

ಪರಿಷತ್ ಚುನಾವಣೆಗೆ ಟಿಕೆಟ್ ಸಂಬಂಧ ಕೆಲವರ ಅಸಮಾಧಾನ ವಿಚಾರವಾಗಿ ಮಾತನಾಡಿ, ಪರಿಷತ್‌ಗೆ ಹಲವರು ಆಕಾಂಕ್ಷಿಗಳು ಇದ್ದರು. ಟಿಕೆಟ್ ಕೈತಪ್ಪಿದಾಗ ಸಹಜವಾಗಿ ಬೇಸರ ಆಗುತ್ತೆ, ಸರಿ ಹೋಗುತ್ತದೆ. ಮೈತ್ರಿ ಬಗ್ಗೆ ವರಿಷ್ಠರು ಯಾವ ರೀತಿ ತೀರ್ಮಾನ ಮಾಡಿದ್ದಾರೋ ಅದರಂತೆ ನಡೆಯುತ್ತದೆ ಎಂದರು.

ಪ್ರಜ್ವಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯರ್‍ಯಾರ ಹೆಸರು ಕೇಳಿಬರುತ್ತಿದೆಯೋ ಅವರ ವಿಚಾರಣೆಯನ್ನೂ ಮಾಡಲಿ. ಅದಕ್ಕೆ ನಾವು ಪ್ರಕರಣವನ್ನು ಸಿಬಿಐಗೆ ಕೊಡಲಿ ಅಂತಾ ಕೇಳುತ್ತಿರುವುದು ಎಂದು ಡಿಕೆಶಿ ವಿಚಾರಣೆಯೂ ಮಾಡಬೇಕು ಎಂಬ ಕೆಲವರ ಆಗ್ರಹವನ್ನು ಬೊಮ್ಮಾಯಿ ಸಮರ್ಥಿಸಿಕೊಂಡರು.

## ಹುಬ್ಬಳ್ಳಿ ನೇಹಾ ಹತ್ಯೆ ಕೇಸ್

# ಚಾರ್ಜ್ ಶೀಟ್ ಸಲ್ಲಿಸಲು ತಯಾರಿ

**ಹುಬ್ಬಳ್ಳಿ:** ಇಲ್ಲಿನ ಬಿವಿಬಿ ಕಾಲೇಜಿನಲ್ಲಿ ನಡೆದಿದ್ದ ವಿದ್ಯಾರ್ಥಿನಿ ನೇಹಾ ಹತ್ಯೆ ಪ್ರಕರಣದ ಚಾರ್ಜ್ ಶೀಟ್ ಸಲ್ಲಿಸಲು ಸಿಐಡಿ ತಂಡ ತಯಾರಿ ನಡೆಸಿದೆ. ಇನ್ನು ಒಂದು ವಾರದಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.





ಕಳೆದ ಏಪ್ರಿಲ್ 18 ರಂದು ಹುಬ್ಬಳ್ಳಿ ನಗರ ಪಾಲಿಕೆ ಕಾಂಗ್ರೆಸ್ ಸದಸ್ಯ ನಿರಂಜನ್ ಹಿರೇಮಠ ಅವರ ಪುತ್ರಿ ನೇಹಾಳ ಭೀಕರ ಕೊಲೆಯಾಗಿತ್ತು. ಬಳಿಕ ನಿರಂಜನ್ ಅವರು ಈ ಪ್ರಕರಣದಲ್ಲಿ ಹಂತಕ ಫಯಾಜ್ ಅಷ್ಟೇ ಅಲ್ಲ ಇನ್ನೂ ಕೆಲವರು ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದ್ದರು. ಅಲ್ಲದೇ ಲವ್ ಜಿಹಾದ್ ಇರಬಹುದು ಎಂದು ಸಂಶಯ ವ್ಯಕ್ತಪಡಿಸಿದ್ದರು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರ್ಕಾರ, ತನಿಖೆ ನಡೆಸಲು ಸಿಐಡಿಗೆ ವಹಿಸಿತ್ತು. ಬಳಿಕ ತನಿಖೆ ಚುರುಕುಗೊಳಿಸಿದ್ದ ಸಿಐಡಿ ಅಧಿಕಾರಿಗಳ ತಂಡ ಫಯಾಜ್ ಪೋಷಕರು ಹಾಗೂ ಇತರೇ 10 ಮಂದಿಯನ್ನು ತನಿಖೆಗೆ ಒಳಪಡಿಸಿತ್ತು.

ಇದೀಗ ವಿಚಾರಣೆ ಪ್ರಕ್ರಿಯೆ ಪೂರ್ಣಗೊಳಿಸಿರುವ ಸಿಐಡಿ ತಂಡ ಚಾರ್ಜ್ ಶೀಟ್ ಸಲ್ಲಿಸಲು ಸಕಲ ತಯಾರಿ ಮಾಡಿಕೊಂಡಿದೆ. ಇನ್ನೊಂದೇ ವಾರದಲ್ಲಿ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com